
ವಿದ್ವಾನ್ ಕೆ.ವಿ. ಗೋವಿಂದ ಭಟ್ಟ

ಅಗಸ್ತ್ಯ ಚರಿತೆ

ಯಕ್ಷಗಾನ ಪ್ರಸಂಗ



1943 2018
ಅಮೃತ ಮಹೋತ್ಸವ
ಗ್ರಂಥ ಮಾಲಿಕೆ - 82

11-5-2019.

ಅಮೃತ ಮಹೋತ್ಸವ ಗ್ರಂಥ ಮಾಲಿಕೆ

ಅಗಸ್ತ್ಯ ಚರಿತೆ

(ಯಕ್ಷಗಾನ ಪ್ರಸಂಗ)

ದಿ। ವಿದ್ವಾನ್ ಕೆ. ವಿ. ಗೋವಿಂದ ಭಟ್ಟ

2018 - Page - 70 - Rs. 65/-

ಶ್ರೀ ಅಖಿಲ ಹವ್ಯಕ ಮಹಾಸಭಾ (ರಿ)

ಹವ್ಯಕ ಅಧ್ಯಯನ ಕೇಂದ್ರ

101/ಎ, 11ನೇ ಅಡ್ಡರಸ್ತೆ, 8ನೇ ಮುಖ್ಯರಸ್ತೆ, ಮಲ್ಲೇಶ್ವರ,

ಬೆಂಗಳೂರು – 560 003. ದೂ : 080–23348193

Email : shrihavyaka@gmail.com

Agastya Charita Written by **K.V. Govinda Bhat**

Published by : Shri Akhila Havyaka Mahasabha (R) Bangalore.
Havyaka Adhyayana Kendra, 101/A, 11th Cross, 8th Main,
Malleshwaram, Bangalore - 560 003. Ph : 080-23348193.
Email : shrihavyaka@gmail.com

ಮುದ್ರಣ	:	2018
ಪ್ರಕಾಶನ	:	ಹವ್ಯಕ ಅಧ್ಯಯನ ಕೇಂದ್ರ **ಶ್ರೀ ಅಖಿಲ ಹವ್ಯಕ ಮಹಾಸಭಾ (ರಿ), ಬೆಂಗಳೂರು**
ಆಕಾರ	:	1/8 ಡೆಮ್ಮಿ ಸೈಜು
ಪುಟಗಳು	:	70
ಬೆಲೆ	:	₹ 65-00

ಅಕ್ಷರ ಜೋಡಣೆ

Anagha (Sujata Hegde), Mob: 9590068907 / 9449929973

ಮುದ್ರಣ :

ಸ್ಟ್ಯಾಂಡರ್ಡ್ ಪ್ರಿಂಟರ್ಸ್, ಬೆಂಗಳೂರು

-: ಅಧ್ಯಕ್ಷರ ನುಡಿ :-

ಶಿಕ್ಷಕರಾಗಿ, ಯಕ್ಷಗಾನ ಅರ್ಥಧಾರಿಗಳಾಗಿ, ಕಾವ್ಯವಾಚನದ ವ್ಯಾಖ್ಯಾನಕಾರರಾಗಿ ಜನಮನ್ನಣೆ ಗಳಿಸಿದ್ದ ಕನ್ನಡ ವಿದ್ವಾಂಸರಾದ ದಿವಂಗತ ವಿದ್ವಾನ್ ಕೆ. ವಿ. ಗೋವಿಂದ ಭಟ್ಟರು ರಚಿಸಿದ 'ಅಗಸ್ತ್ಯ ಚರಿತೆ' ಯಕ್ಷಗಾನ ಪ್ರಸಂಗದ 9 ಪ್ರಕರಣಗಳ 450 ಪದ್ಯಗಳಲ್ಲಿ ಆಯ್ದ 369 ಪದ್ಯಗಳ ಅಮೂಲ್ಯವಾದ ಸಂಗ್ರಹವಿದು. ಎರಡು ಯಕ್ಷಗಾನ ಪ್ರಸಂಗಗಳು ಹಾಗೂ ಇನ್ನೊಂದು ಮುಕ್ತಕಗಳ ಸಂಕಲನ ಪ್ರಕಟವಾಗಿದ್ದು ಮುದ್ರಿತವಾಗದ ಹಲವಾರು ಯಕ್ಷಗಾನ ಕೃತಿಗಳು ಅವರ ಸುಪುತ್ರ, ಪ್ರಾಚಾರ್ಯ ಶ್ರೀ ವೆಂಕಟರಮಣ ಭಟ್ಟ, ಸುಳ್ಯ ಇವರ ಸಂಗ್ರಹದಲ್ಲಿದೆ. ಇದರಲ್ಲಿರುವ ಭಾಷೆಯ ಸೊಗಸು, ಛಂದಸ್ಸಿನ ಹಿಡಿಪು, ಸರಳ ಸುಲಲಿತ ಪದ್ಯಗಳು ಯಕ್ಷಗಾನ ಲೋಕಕ್ಕೊಂದು ಅಪೂರ್ವ ಕೊಡುಗೆ.

ಭಾರತೀಯ ಸಾರಸ್ವತ ಸಂವಹನ ಕ್ಷೇತ್ರದ ಭಾಷಾ ಪ್ರಪಂಚದಲ್ಲಿ ಹವ್ಯಕ ಭಾಷೆಯು ಹಲವು ವಿಶೇಷತೆಗಳಿಂದ ಪ್ರಬುದ್ಧ ಹಾಗೂ ಸಮೃದ್ಧವಾಗಿದೆ. ಹವಿಗನ್ನಡ ಎನಿಸಿಕೊಂಡ ಈ ಭಾಷೆಯಲ್ಲಿ ನೆಲದ ಸೊಗಡಿದೆ, ಸಂಪ್ರದಾಯದ ಸತ್ವವಿದೆ, ಸಮುದಾಯದ ಸ್ವಂತಿಕೆಯಿದೆ, ದೇಶೀಯತೆಯ ಆಶೋತ್ತರವಿದೆ, ಪರಂಪರೆಯ ಪರಾಮರ್ಶೆಯಿದೆ, ಕರುಣಾಮಯಿ ಹೃದಯಗಳ ಮುಗ್ಧತೆಯಿದೆ, ಬುದ್ಧಿವಂತ ಮನಸ್ಸುಗಳ ಅಭಿಲಾಷೆಯಿದೆ, ಪ್ರಜ್ಞಾವಂತ ಚಿಂತನೆಯ ಪ್ರಖರತೆಯಿದೆ. ಹವ್ಯಕ ಸಮುದಾಯವೊಂದಕ್ಕೇ ಸೀಮಿತವಾಗಿರುವ ಹವಿಗನ್ನಡವು ಸೀಮೆಯಿಂದ ಸೀಮೆಗೆ ಮತ್ತೆ ಮಾರ್ಪಾಡು ಹೊಂದಿ ಪ್ರದೇಶವಾರು ಆರೇಳು ರೂಪದಲ್ಲಿ ರೂಢಿಯಲ್ಲಿರುವುದು ದೇಶದ ಭಾಷಾ ವೈವಿಧ್ಯತೆಯ ನಡುವೆ ಐತಿಹಾಸಿಕ ಹಾಗೂ ಸಾರ್ವಕಾಲಿಕ ದಾಖಲೆಯಾಗಿ ಉಳಿಯುತ್ತದೆ. ಇಂತಹ ಹವಿಗನ್ನಡ ಸಾಹಿತ್ಯ ಲೋಕದಲ್ಲಿ ಮೂಡಿಬಂದ ಅನುಪಮ ಕುಸುಮವಾಗಿರುವ ಈ ಕೃತಿಯನ್ನು ತಮಗರ್ಪಿಸಲು ಹವ್ಯಕ ಮಹಾಸಭೆಗೆ ಹೆಮ್ಮೆಯಿದೆ.

ಸ್ವಾತಂತ್ರ್ಯಪೂರ್ವದಲ್ಲೇ ಜನಿಸಿದ ಹವ್ಯಕರೆಲ್ಲರ ಪ್ರಾತಿನಿಧಿಕ ಸರ್ವೋಚ್ಚ ವಿಶ್ವವ್ಯಾಪಿ ಸಂಸ್ಥೆಯಾದ ಶ್ರೀ ಅಖಿಲ ಹವ್ಯಕ ಮಹಾಸಭಾವು 75ವರ್ಷಗಳನ್ನು ಪೂರೈಸಿದ ಶುಭಸಂದರ್ಭದಲ್ಲಿ ಅಮೃತ ಮಹೋತ್ಸವ ಹಾಗೂ ದ್ವಿತೀಯ ವಿಶ್ವಹವ್ಯಕ ಸಮ್ಮೇಳನಗಳನ್ನು ಬೆಂಗಳೂರಿನ ಅರಮನೆ ಮೈದಾನದಲ್ಲಿ ಆಚರಿಸುತ್ತಿದೆ. ಈ ಐತಿಹಾಸಿಕ ಕ್ಷಣದಲ್ಲಿ ಅಮೃತ ಮಹೋತ್ಸವ ಗ್ರಂಥ ಮಾಲಿಕೆಯಡಿ 75 ಸುಪ್ರಸಿದ್ಧ ಲೇಖಕರು ಬರೆದ ಹವ್ಯಕರ ಸಂಸ್ಕೃತಿ, ಸಂಸ್ಕಾರ, ಸಂಪ್ರದಾಯ, ಸ್ವಾಧ್ಯಾಯ, ಸ್ವಾನುಭವ, ಸಾಧನೆಗಳಿಗೆ ಸಂಬಂಧಿಸಿದ 75ಪುಸ್ತಕಗಳು ಏಕಕಾಲಕ್ಕೆ ಲೋಕಾರ್ಪಣೆಯಾಗುತ್ತಿರುವುದು ಸಾಹಿತ್ಯ ಲೋಕದಲ್ಲಿನ ಅಪರೂಪದ ವಿದ್ಯಮಾನವಾಗಿ ಇತಿಹಾಸ ನಿರ್ಮಾಣವಾಗುತ್ತಿರುವುದು ಅತೀವ ಸಂತಸದ ಸಂಗತಿಯಾಗಿದೆ. ಕೃತಿಕಾರರ ಹೃದಯಸ್ಪರ್ಶಿ ಸ್ಪಂದನೆಯು ನಮ್ಮಲ್ಲಿ ಧನ್ಯತಾ ಭಾವವನ್ನು ಸೃಜಿಸಿದೆ. ಕೃತಿಕಾರರು, ಸಂಪಾದಕ-ಸಂಚಾಲಕ-ಪ್ರಕಾಶಕ ಹಾಗೂ ಓದುಗರು ಧನ್ಯರು, ಅಭಿನಂದನಾರ್ಹರು.

ಡಾ. ಗಿರಿಧರ ಕಜೆ, ಅಧ್ಯಕ್ಷರು,

ಶ್ರೀ ಅಖಿಲ ಹವ್ಯಕ ಮಹಾಸಭಾ(ರಿ)

—: ಮೊದಲ ಮಾತು :—

ಇತ್ತೀಚೆಗೆ ತೆಕ್ಕೆಕೆರೆ ಸುಬ್ರಹ್ಮಣ್ಯ ಭಟ್ಟರು ದೂರವಾಣಿಯ ಮೂಲಕ ಸಂಪರ್ಕಿಸಿ ನನ್ನ ತಂದೆ ಕೆ.ವಿ. ಗೋವಿಂದ ಭಟ್ಟರ ಅಪ್ರಕಟಿತ ಸಾಹಿತ್ಯ ಕೃತಿಯೊಂದನ್ನು ಪ್ರಕಟಣೆಗಾಗಿ ಕಳುಹಿಸಿಕೊಡುವಂತೆ ಕೇಳಿಕೊಂಡರು. ತಂದೆಯವರು 1970ರ ದಶಕದಲ್ಲಿ ಬರೆದ ಒಂದು ಪೌರಾಣಿಕ ಪ್ರಸಂಗವನ್ನು ನಾನು ಆಯ್ದುಕೊಂಡೆ. ಮಹರ್ಷಿ ಅಗಸ್ತ್ಯರ ಜೀವನದ ಮಹತ್ತ್ವದ ಸಾಧನೆಗಳನ್ನೊಳಗೊಂಡ ವಿವಿಧ ಪ್ರಸಂಗಗಳ ಗುಚ್ಛವಿದು. ಅಂತಹ ಒಂಬತ್ತು ಪ್ರಕರಣಗಳು ಕೆಳಗಿನಂತಿವೆ.

1) ದಾನವ ಪಲಾಯನ 2) ಅಗಸ್ತ್ಯೋದ್ಭವ 3) ಉಮಾಮಾಹೇಶ್ವರ ವಿವಾಹ 4) ಇಂದ್ರದ್ಯುಮ್ನೋಪಾಖ್ಯಾನ 5) ವಿಂಧ್ಯ ಗರ್ವಾಪಹಾರ 6) ನಹುಷ ಗರ್ವಭಂಗ 7) ಇಲ್ವಲಾಸುರ ಸಂಹಾರ 8) ಕಾವೇರೀ ಮಾಹಾತ್ಮ್ಯೆ 9) ಶ್ರೀರಾಮ ದರ್ಶನಂ

ಬೆಳಗ್ಗಿನ ವರೆಗೆ ಆಟವಾಡುವುದಿದ್ದರೆ ಈ ಎಲ್ಲ ಪ್ರಕರಣಗಳನ್ನೂ ಉಪಯೋಗಿಸಬಹುದು. ಕಾಲಮಿತಿಯಲ್ಲಿ ಆಡುವುದಿದ್ದರೆ ಇದರಿಂದ ಬೇಕಾದುದನ್ನು ಆಯ್ದುಕೊಳ್ಳಬಹುದು. ಯಕ್ಷಗಾನ ತಾಳಮದ್ದಳೆಗೂ ಇದನ್ನು ಬಳಸಿಕೊಳ್ಳುವಂತಿದೆ.

ತಂದೆಯವರ ಭಾವ ಶೇಣಿ ಗೋಪಾಲಕೃಷ್ಣ ಭಟ್ಟರು ಬೆಳ್ತಂಗಡಿಯ ಆಸುಪಾಸಿನಲ್ಲಿ ಎಲ್ಲೇ ಆಟ, ಕೂಟ, ಹರಿಕತೆಗಳಿದ್ದರೂ ಮನೆಗೆ ಬರುತ್ತಿದ್ದರು. ತಂದೆಯವರಿಗೆ ಬರೆಯುವ ಶಕ್ತಿಯಿದ್ದುದರಿಂದ ಯಕ್ಷಗಾನ ಪ್ರಸಂಗಗಳನ್ನು ಬರೆಯುವಂತೆ ಸಲಹೆ ಕೊಟ್ಟರು. ಕೆಲವು ಪ್ರಸಂಗಗಳನ್ನು ಸುರತ್ಕಲ್ ಮೇಳದಲ್ಲಿದ್ದಾಗ ಆಡಿ ಯಶಸ್ವಿಯಾಗಿಸಿದರು.

ಸಾಧಾರಣ 450ಕ್ಕೂ ಮಿಕ್ಕಿದ ಪದ್ಯಗಳಲ್ಲಿ 369 ಪದ್ಯಗಳನ್ನು ಆಯ್ದು ಇಲ್ಲಿ ಕೊಟ್ಟಿದ್ದೇನೆ. ಯುದ್ಧದ ಭಾಗಗಳಲ್ಲಿ, ಜಲಕೇಳಿ, ಕೆಲವು ದುಃಖದ ಸನ್ನಿವೇಶಗಳಲ್ಲಿ ಪದ್ಯಗಳು ಹೆಚ್ಚಾಗಿದ್ದುದರಿಂದ ಅವುಗಳಲ್ಲಿ ಕೆಲವನ್ನು ತೆಗೆದಿದ್ದೇನೆ. ಒಂದು ರಾತ್ರೆಯ ಆಟಕ್ಕೆ ಸಾಧಾರಣ 200 ಪದ್ಯಗಳು ಬೇಕಾಗುತ್ತವೆ. ಇಷ್ಟು ಪದ್ಯಗಳು ಯಕ್ಷಗಾನ ಪ್ರದರ್ಶನಕ್ಕೆ ಧಾರಾಳವಾಗಿ ಸಾಕಾಗುವುದರಿಂದ ಮತ್ತು ಪುಸ್ತಕದ ಪುಟದ ಮಿತಿಯನ್ನು ಕಿರಿದುಗೊಳಿಸುವ ಸಲುವಾಗಿ ಅನಗತ್ಯವಾದ ಕೆಲವು ಪದ್ಯಗಳನ್ನು ಕೈಬಿಡಲಾಗಿದೆ. ಪ್ರತಿಯೊಂದು ಪ್ರಕರಣಕ್ಕೆ ಪ್ರತ್ಯೇಕ ಶೀರೋನಾಮೆಯನ್ನೂ ಕೊಡಲಾಗಿದೆ. ಕಥೆಯಲ್ಲಿ ಬರುವ ಪಾತ್ರಗಳ ಪಟ್ಟಿಯೂ ಪುಸ್ತಕದ ಮೊದಲಲ್ಲಿದೆ. ಒಟ್ಟು 44 ಪಾತ್ರಗಳು ಪಟ್ಟಿಯಲ್ಲಿ ಇವೆಯಾದರೂ ಲಭ್ಯ ಸಮಯಾವಧಿ, ಕಲಾವಿದರ ಸಂಖ್ಯೆಗನುಗುಣವಾಗಿ ಕೆಲವು ಪಾತ್ರಗಳನ್ನು ಕೈಬಿಡಬಹುದಾಗಿದೆ. ಹಾಗೆಯೇ ಸಮಯಾವಧಿಗೆ ಅನುಕೂಲವಾಗುವಂತೆ ಇದರಲ್ಲಿರುವ ಒಂಬತ್ತು ಪ್ರಕರಣಗಳಲ್ಲಿ ಬೇಕಾದ ಪ್ರಕರಣಗಳನ್ನು ಹೆಕ್ಕಿಕೊಂಡು ಜೋಡಿಸಿಕೊಳ್ಳಬಹುದು. ಕಥಾಸಾರವನ್ನೂ ಕಿರಿದಾಗಿ ಪ್ರತ್ಯೇಕ ಉಪ ಶೀರ್ಷಿಕೆಗಳೊಂದಿಗೆ ಕೊಡಲಾಗಿದೆ. ತಂದೆಯವರು ಗತಿಸಿ 24 ವರ್ಷಗಳು ಕಳೆದುದರಿಂದ ಯುವತಲೆಮಾರಿನ ಯಾರಿಗೂ ಅವರ ಪರಿಚಯವಿರಲಾರದು. ಆದುದರಿಂದ ಅವರ ಪರಿಚಯವನ್ನು ಬಹಳ ಸಣ್ಣದಾಗಿ ಕೊಡಲಾಗಿದೆ.

ಕವಿಗೆ ಭಾಷೆಯಲ್ಲೂ, ಛಂದಸ್ಸಿನಲ್ಲೂ ಹಿಡಿತವಿದ್ದುದರಿಂದ ವ್ಯಾಕರಣ ದೋಷಗಳಿಲ್ಲದೆ, ಛಂದೋಭಂಗವಾಗದೆ ಸುಲಲಿತವಾಗಿ ರಚಿತವಾದ ಪದ್ಯಗಳಿವು. ಪ್ರಾಸಕ್ಕಾಗಿ ಶಬ್ದಗಳನ್ನು ಎಳೆದು ತಂದದ್ದು ಎಲ್ಲೂ ಕಾಣುವುದಿಲ್ಲ. ಕ್ಲಿಷ್ಟವಾದ ಶಬ್ದಗಳಿಂದ ಪದ್ಯಗಳು ಭಾರವಾಗುವುದಿಲ್ಲ. ಹಾಡುವವರಿಗೆ ಎಡವಿದ ಅನುಭವವಾಗುವುದಿಲ್ಲ. ಎಲ್ಲಾ ವಿಧದ ಪಾತ್ರಗಳೂ ಕಥೆಯಲ್ಲಿ ಬರುತ್ತವೆ. (ರಾಜ ವೇಷ, ಪುಂಡುವೇಷ, ಬಣ್ಣದವೇಷ, ಸ್ತ್ರೀವೇಷ, ಹಾಸ್ಯ, ಕಿರಾತ ಇತ್ಯಾದಿ) ಕಥೆಯು ಪೌರಾಣಿಕವಾಗಿದ್ದು, ಕಥಾವಸ್ತುವೂ ಮೌಲಿಕವಾಗಿದೆ. ಹೀಗಾಗಿ ಓದುಗರಿಗೂ, ಪ್ರದರ್ಶನಕ್ಕೂ ಅನುಕೂಲವಾದೀತೆಂದು ನನ್ನೆಣಿಕೆ. ಇದನ್ನು ಮುದ್ರಿಸುವ ಹೊಣೆಯನ್ನು ಹೊತ್ತ 'ಹವ್ಯಕ ಸಭಾ' ದವರಿಗೂ ಕಾಳಜಿಯಿಂದ ಸಂಪರ್ಕಿಸಿದ ಟಿ. ಸುಬ್ರಹ್ಮಣ್ಯ ಭಟ್ಟರಿಗೂ ಕೃತಜ್ಞ, ಇದನ್ನು ಬಳಸುವ ಎಲ್ಲ ಕಲಾವಿದರಿಗೂ, ಅಕ್ಷರ ಪ್ರೇಮಿಗಳಿಗೂ ಮುಂಗಡವಾಗಿ ನಮಿಸಿ ಮೊದಲ ಮಾತನ್ನು ಮುಗಿಸುತ್ತೇನೆ.

ವೆಂಕಟರಾಮ ಭಟ್ಟ ಸುಳ್ಯ

ನನ್ನ ವಿಳಾಸ

ವೆಂಕಟರಾಮ ಭಟ್ಟ, ಪ್ರಾಚಾರ್ಯರು
ಪ್ರತಿಭಾ ವಿದ್ಯಾಲಯ
ಸುಳ್ಯ (ದ.ಕ.) – 574239
ದೂರವಾಣಿ: 9449936587

—: ಪ್ರಕಾಶಕರ ನುಡಿ :—

ಶ್ರೀ ಅಖಿಲ ಹವ್ಯಕ ಮಹಾಸಭೆಯು ಪ್ರಾರಂಭವಾಗಿ ಎಪ್ಪತ್ತೈದು ವರ್ಷಗಳು ಪೂರೈಸುವ ಈ ವರ್ಷವು (2018) "ಅಮೃತ ಮಹೋತ್ಸವ" ವರ್ಷವಾಗಿದೆ. ಈ ವರ್ಷಾಚರಣೆಯ ಸವಿನೆನಪಿಗಾಗಿ "ಅಮೃತ ಮಹೋತ್ಸವ ಮತ್ತು ಎರಡನೇ ವಿಶ್ವ ಹವ್ಯಕ ಸಮ್ಮೇಳನ" ನಡೆಯುವ ಇದೇ ಡಿಸೆಂಬರ್ 28, 29 ಮತ್ತು 30ರ ಶುಭಾವಸರದಲ್ಲಿ ಬೇರೆ ಬೇರೆ ವಿಷಯಗಳ 75 ಕೃತಿಗಳನ್ನು ಮುದ್ರಿಸಬೇಕೆಂದು ಅಖಿಲ ಹವ್ಯಕ ಮಹಾ ಸಭೆಯಲ್ಲಿ ನಿರ್ಣಯಿಸಲಾಯಿತು. ಮಹಾಸಭೆಯ ಅಧ್ಯಕ್ಷರ ಅಭಿಲಾಷೆ ಮತ್ತು ಯೋಜನೆಯಂತೆ, ಹವ್ಯಕ ಅಧ್ಯಯನ ಕೇಂದ್ರವು ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಸದುದ್ದೇಶದಿಂದ, ಬೆಂಗಳೂರು ಸೇರಿದಂತೆ ನಾಡಿನ ಹವ್ಯಕ ಬರಹಗಾರರನ್ನು ಸಂಪರ್ಕಿಸಿ ಕೃತಿಗಳನ್ನು ಬರೆದುಕೊಡಲು ಕೇಳಿಕೊಂಡಿತು. ನಮ್ಮ ಕೋರಿಕೆಗೆ ಅದ್ಭುತವಾಗಿ ಸ್ಪಂದಿಸಿದ ಹವ್ಯಕ ಲೇಖಕರು ನಮ್ಮ ವಿನಂತಿಯನ್ನು ಮನ್ನಿಸಿ, ನಮ್ಮ ನಿರೀಕ್ಷೆಗೂ ಮೀರಿ, ತಮ್ಮ ಕೃತಿಗಳನ್ನು ಮಹಾ ಸಭೆಯ ಮೇಲಿನ ಪ್ರೀತಿ ಮತ್ತು ಅಭಿಮಾನದಿಂದ ಕಳಿಸಿಕೊಟ್ಟರು. ಅವರಲ್ಲಿ ನಾಡಿನ ಪ್ರಸಿದ್ಧ ಲೇಖಕರೂ ಇದ್ದಾರೆ; ಎಲೆ ಮರೆಯ ಕಾಯಿಯಂತಿರುವವರೂ ಇದ್ದಾರೆ. ಈ ಅಮೃತ ಮಹೋತ್ಸವ ಗ್ರಂಥಮಾಲಿಕೆಯಿಂದಾಗಿ ಕೆಲವು ಹವ್ಯಕ ಸುಪ್ತ ಪ್ರತಿಭೆಗಳೂ ಬೆಳಕಿಗೆ ಬರುವುದು ನಿಃಸ್ಸಂಶಯವಾಗಿದೆ. ಕೆಲವು ಕೃತಿಕಾರರು ಇಂದು ನಮ್ಮೊಂದಿಗಿಲ್ಲವಾದರೂ, ಹಲವು ದಶಕಗಳ ಹಿಂದೆ ಅವರು ಬರೆದಿರಿಸಿದ ಕೃತಿಗಳನ್ನು ಅವರ ಮಕ್ಕಳು ಹಾಗೂ ಕುಟುಂಬದವರು ಮಹಾಸಭೆಯ ಮೂಲಕ ಪ್ರಕಟಣೆಗಾಗಿ ಇತ್ತು ಮಹದುಪಕರಿಸಿದ್ದಾರೆ. ಮಹಾಸಭೆ ಮತ್ತು ಹವ್ಯಕ ಅಧ್ಯಯನ ಕೇಂದ್ರ ಹಾಗೂ ಅಮೃತ ಮಹೋತ್ಸವ ಮತ್ತು ಎರಡನೇ ವಿಶ್ವ ಹವ್ಯಕ ಸಮ್ಮೇಳನಾಚರಣೆಯ ವಿಶೇಷ ಸಮಿತಿ ಹಾಗೂ ಬಳಗವು ಎಲ್ಲ ಕೃತಿಕಾರರಿಗೆ, ಕೃತಿಗಳ ಪ್ರಾಯೋಜಕರಿಗೆ ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಈ ಯೋಜನೆಯ ಮೂಲಕ ಅನೇಕ ಹವ್ಯಕ ಬಂಧುಗಳು ಮತ್ತು ಕೃತಿಕಾರರು ಮಹಾಸಭೆಯ ಸಂಪರ್ಕಕ್ಕೆ ಬಂದು, ಸಭೆಯ ಆಜೀವ ಸದಸ್ಯರಾಗಿರುವುದು ಅಭಿನಂದನೀಯವಾಗಿದೆ.

ಪ್ರಸ್ತುತ ಈ ಕೃತಿಯನ್ನು ಮುದ್ರಿಸಲು ಅನುಮತಿಸಿದ ಹವ್ಯಕ ಬಂಧು **ಗಣರಾಜ ಕುಂಬ್ಳೆ** ಅವರಿಗೆ, ವಂದನೆಗಳು. ಇವರಿಂದ ಇನ್ನೂ ಹೆಚ್ಚಿನ ಕೃತಿಗಳು

ರಚನೆಯಾಗಿ, ಸಾಹಿತ್ಯ ಸೇವೆಯ ಮೂಲಕ ಕೀರ್ತಿಗೆ ಪಾತ್ರರಾಗಲಿ ಎಂದು ಹಾರೈಸುತ್ತೇವೆ.

ಈ ಕೃತಿಯ ಗಣಕ ಪ್ರಕಾಶನ (ಡಿ.ಟಿ.ಪಿ) ಕಾರ್ಯವನ್ನು ಸಕಾಲದಲ್ಲಿ ಮಾಡಿಕೊಟ್ಟ ಶ್ರೀಮತಿ ಸುಜಾತ ಹೆಗಡೆ ಅವರಿಗೆ, ಪುಸ್ತಕದ ಹೊರ ಹೊದಿಕೆಯನ್ನು ಸುಂದರವಾಗಿ ರಚಿಸಿದ ಶ್ರೀ ಜಗದೀಶ ಚಂಪಕಾಪುರ ರವರಿಗೆ, ಎಲ್ಲಾ ರೀತಿಯಲ್ಲಿ ಸಹಕಾರ ನೀಡಿದ ಶ್ರೀ ವಿನಾಯಕ ಮಧ್ಯಸ್ಥ, ಗೋಳಿಕುಂಬ್ರಿ, ಮತ್ತು ಪುಸ್ತಕವನ್ನು ಅಂದವಾಗಿ ಮುದ್ರಿಸಿದ ಸ್ಟ್ಯಾಂಡರ್ಡ್ ಪ್ರಿಂಟರ್ಸ್‌ನ ಶ್ರೀ ನಾಗರಾಜ ಅವರಿಗೆ ಕೃತಜ್ಞತೆಗಳು.

ಪುಸ್ತಕಗಳನ್ನು ಕೊಂಡು ಓದಿ ಸಹಕರಿಸುವ ಬಂಧುಗಳೆಲ್ಲರಿಗೂ ಅನಂತಾನಂತ ವಂದನೆಗಳು.

ಸಂಚಾಲಕರು,
ಹವ್ಯಕ ಅಧ್ಯಯನ ಕೇಂದ್ರ,
ಶ್ರೀ ಅಖಿಲ ಹವ್ಯಕ ಮಹಾಸಭಾ,
ಮಲ್ಲೇಶ್ವರಂ, ಬೆಂಗಳೂರು.

ಅಗಸ್ತ್ಯ ಚರಿತೆ

ಸ್ತುತಿ

ರಾಗ ನಾಟಿ – ಝಂಪೆ ತಾಳ

ಜಯ ಜಯತು ಗಣಪಾಲ। ಜಯ ಸುಗುಣ ವರ ಶೀಲ।
ಜಯ ಜಯತು ಶಿವ ಬಾಲ। ಜಯ ಭಜಕಲೋಲ॥
ಜಯ ಜಯತು ಜಯತು ॥ 1 ॥
ಶರಣ ಜನ ಸುಪ್ರೀತ। ವರದಾತ ಗಣನಾಥ।
ಸುರ ನರೋರಗ ವಿನುತ। ಗಿರಿಜಾತ್ಮ ಜಾತ॥ ಜಯ ಜಯತು ಜಯತು ॥ 2 ॥
ದುರಿತ ದುಃಖ ವಿನಾಶ। ವರ ಸುಜನ ಜನ ಪೋಷ।
ವರದಾತ ವಿಘ್ನೇಶ। ಪೊರೆಯೊ ಸುರ ತೋಷ॥ ಜಯ ಜಯತು ಜಯತು ॥ 3 ॥

ದಾನವ ಪಲಾಯನ

(ದೇವೇಂದ್ರನ ಒಡ್ಡೋಲಗ)

ವಾರ್ಧಕ ಷಟ್ಪದಿ

ಸರಸದಿಂ ಸಕಲ ಸುರ ಸಂದೋಹಮಂ ಬರಿಸಿ।
ಸರಸಿಜ ಸುನೇತ್ರೆಯರ ನರ್ತನಕೆ ಕರೆತರಿಸಿ।
ಸರಭಸದೊಳಗ್ನಿ ಯಮ ವಾಯುಗಳನುಪಚರಿಸಿ ಸಕಲ ಸಭಿಕರ ಸೇರಿಸಿ॥
ಸರಸೀರುಹಾಕ್ಷ ಭವ ಕಮಲಭವರಂ ಸ್ಮರಿಸಿ। ಸರಸರನೆ ಬಂದೋಲಗವನಿತ್ತು ಸಡಗರಿಸಿ।
ಸರಳ ತರದಿಂ ಸಭೆಯ ಪೀಠವನಲಂಕರಿಸಿದಂ ಸುರಪನಶನಿ ಧರಿಸಿ॥

ಕಂದ ಪದ್ಯ

ಇಂತೆಸೆವಾ ಸಭೆಯಂ ಸುರ। ಕಾತಂ ತಾನೀಕ್ಷಿಸುತ್ತೆ ಸರ್ವರೊಳಾಗಳ್॥
ಚಿಂತೆಯೊಳರಿತಿಹ ವಿಷಯವ। ನಂತರಿಸದೆ ಸೂಕ್ತ ರೀತಿಯಿಂ ವಿವರಿಸಿದಂ॥

ರಾಗ ಭೈರವಿ – ಝಂಪೆ ತಾಳ

ಲಾಲಿಸಿರಿ ಸಕಲ ಸಭಿಕರು ನಮ್ಮ ಬಳಿಗೆ ಮುನಿ।
ಪಾಲಕರು ಬಂದು ದೂರಿತ್ತರೀ ವಿಷಯ॥
ಸಾಲಾಗಿ ದಾನವರು ಧರೆಯ ಸಜ್ಜನರುಗಳ।
ಮೇಲೆ ದಾಳಿಯನೆಸಗಿ ಗೈವರನ್ಯಾಯ ॥ 1 ॥

ಮುನಿಗಳನು ವಟುಗಳನು ಗೋ ವಿಪ್ರರೆಲ್ಲರನು।
ಮುನಿಸಿನಿಂ ಪೀಡಿಸುತೆ ಯಾಗ ಯಜ್ಞಗಳ ॥
ಕಿನಿಸಿನಿಂ ಕೆಡಿಸುತ್ತಲೆಲೆಮನೆಯ ಕೆಡಹುತ್ತ ।
ಲನವರತ ಪೀಡಿಪರು ಧರೆಯ ಸಾಧುಗಳ ॥ 2 ॥
ದುರುಳನಿಲ್ವಲನು ದಶ ಸೋದರರನೊಡಗೊಂಡು।
ಧರೆಯೊಳಿರುತಿರ್ಪ ಸುಜನರ ಕೊಲ್ಲುತಿಹನು॥
ವರ ಪುಣ್ಯ ವನಗಳನು ಪೊಕ್ಕು ಮುನಿ ಸಂಕುಲವ।
ತರಿಯುತಿಹನೆಲ್ಲೆಡೆಯೊಳಸುರರೊಡನವನು ॥ 3 ॥
ಕೆಲವು ದಿನದೊಳಗಿಲ್ಲಿಗೈತಂದು ನಮ್ಮವರ ।
ಬಲವ ತರಿಯುತೆ ಪೀಡಿಸಲು ಬಾರದಿರನು ॥
ಕೊಲುವುದೆಂತಾತನನು ಪೇಳಿರೆನಲೊಡನಗ್ನಿ ।
ಬಲವೈರಿಯೊಡನೆದ್ದು ಪೇಳಿದನು ತಾನು ॥ 4 ॥

ರಾಗ ಮಾರವಿ – ಏಕ ತಾಳ

ಸುರಪತಿ ಲಾಲಿಸು ದುರುಳಾರಣ್ಯವ। ನುರುಹುವೆ ಸಂಶಯವ ॥
ಧರಿಸದಿರೀಕ್ಷಣ ತರಿಸುವೆ ಜಯವನು। ಧುರದೊಳು ನಾನೀಗ ॥ 1 ॥
ಕೊಡು ಕೊಡು ನೀನಪ್ಪಣೆಯನು ಬೇಗನೆ। ಸುಡುವೆನು ಧೂರ್ತರನು ॥
ತಡವೇಕೆನ್ನುತ ವಾಯುವು ಸುರಪಗೆ। ನುಡಿದನು ರೋಷದೊಳು ॥ 2 ॥

ರಾಗ ಮಧುಮಾಧವಿ – ಏಕ ತಾಳ

ಬಲು ಹಿತವಾಗಿದೆ ನಿಮ್ಮ ಮಾತುಗಳು ।
ಮಹಿಯೊಳು ನೀವೆಮಗತಿ ಹಿತರುಗಳು ॥ ಪ ॥
ಸುರ ಸೇನೆಯನು ಸೇರಿಸುತೆ ನೀವು ಪೋಗಿಬ।
ದುರುಳರ ತರಿಯುವುದೆಲ್ಲರೊಂದಾಗಿಬ॥
ತ್ವರಿತದಿಂದನ್ಯರ್ಗೆ ಕಾಣದೆ ಸಾಗಿ। ತರಿವುದು ಕರ್ಬುರ ಕುಲವ ಲೇಸಾಗಿ॥

(ರಾಕ್ಷಸರ ದೌರ್ಜನ್ಯ)

ರಾಗ ಸೌರಾಷ್ಟ್ರ – ತ್ರಿವುಡೆ ತಾಳ

ಇತ್ತಲಿಲ್ವಲನಾಜ್ಞೆಯಿಂದು। ನ್ಮತ್ತ ಖಳ ವಾತಾಪಿ ಮುಖ್ಯರು।
ಮುತ್ತಿದರು ಪುಣ್ಯಾಶ್ರಮವ ದು। ವೃರ್ತರಾಗಿ ॥ 1 ॥

ಮುನಿಗಳನು ಬಡಿಬಡಿದು ಪಾವನ। ವನವ ಸುಡುತವರಗ್ನಿಹೋತ್ರವ।
ಕಿನಿಸಿನಿಂ ಕೆಡಿಸುತ್ತಲಿರ್ದರು। ದನುಜರಂದು ॥ 2॥
ಬಾಲರನು ಪೀಡಿಸುತ ಪಶುಗಳ। ಕಾಲುಗಳ ಹಿಡಿದಪ್ಪಳಿಸಿ ಗುಣ।
ಶೀಲೆಯರನೆಳದೊಯ್ದರಾ ಸ್ಮರ। ಕೇಳಿಗಾಗಿ ॥ 3 ॥
ಮುದುಕರನು ಬಡಿದಟ್ಟಿ ಯುವಕರ। ಸದೆದು ಮಕ್ಕಳ ಕೊಂದು ಸುಂದರ।
ಸುದತಿಯರನಪಹರಿಸಿ ವಟುಗಳ। ನೊದೆದರಂದು ॥ 4 ॥
ಬಸುರಿ ಬಾಣಂತಿಯರನಾ ತಾ। ಪಸ ವಧೂ ನಿಕುರುಂಬವನು ಪೀ।
ಡಿಸಿದರತಿಶಯದಿಂದಲಾ ರಾ। ಕ್ಷಸರು ಬಿಡದೆ ॥ 5 ॥
ದುರುಳರಿಂತುಪಟಳವನೆಸಗು। ತ್ತಿರಲು ಕಂಡಾ ವಹ್ನಿ ವಾಯುಗ।
ಳುರುತರ ಕ್ರೋಧದಲಿ ತಡೆದರು। ಭರದೊಳಾಗ ॥ 6 ॥

(ಯುದ್ಧ – ಅಗ್ನಿ * ವಾತಾಪಿ)
ರಾಗ ಮಾರವಿ – ಏಕ ತಾಳ

ಎಲವೆಲವೋ ಖಳ ಕುಲ ಸೂಕರನೇ। ಕೊಲುತಲಿ ಸಜ್ಜನರ॥
ಕುಲವಧುಗಳ ನೀ ನೆಲೆಗೆಡಿಸಿದರೀ। ಗಲೆ ತಲೆಗಡಿಯುವೆನು ॥ 1 ॥
ಖ್ಯಾತ ಮಹಾಸುರ ವಾತಾಪಿಯು ತಡೆ। ದೀತೆರದಿಂ ನುಡಿದ॥
ಏತಕೆ ಸೊರಹುವೆ ನಾಕವ ತೋರೆನೀ। ಘಾತಿಪೆನಲ್ಲದೊಡೆ ॥ 2 ॥
ಧರೆಯೊಳು ದುಷ್ಟರ ಕೊರಳನು ಕೊಯ್ಯಲು। ಭರದಿಂ ಬಂದಿರುವ॥
ವರ ವೈಶ್ವಾನರನುರುಹುವೆ ನಿಮ್ಮಯ। ದುರುಳಾರಣ್ಯವನು ॥ 3 ॥
ಬಲ್ಲೆನು ನಿನ್ನಯ ಮಲ್ಲತನವನಾ। ನೆಲ್ಲವ ನೀರಿನಲಿ॥
ಮೆಲ್ಲನೆ ಮುಳುಗಿಸಿ ಕೊಲ್ಲುವೆ ನಿನ್ನನು। ಸೊಲ್ಲಿಸದಿರು ಬರಿದೆ ॥ 4 ॥
ನೀರಿನ ಋಣವೇ ತೀರಿದೆ ನಿನ್ನಲಿ। ನೀರೆಲ್ಲಿದೆ ಪೇಳು॥
ಹಾರದಿರೆಲೆ ಖಳ ವೀರನೆ ನೋಡೆನು। ತೋರಂದದೊಳೆಚ್ಚ ॥ 5 ॥

ರಾಗ ಸಾವೇರಿ ಮಟ್ಟೆ ತಾಳ

ಇಂತು ಬರುವ ಬಾಣಗಳನು ತರಿಯುತನಲನು।
ಕಂತು ಹರನ ತೆರದೊಳರಿಯ ಕರದ ಧನುವನು॥
ಸಂತಸದೊಳು ಮುರಿದು ರಥವ ಕೆಡಹೆ ದನುಜನು।
ನಿಂತು ಮಲ್ಲಯುದ್ಧ ಗೆಯ್ದು ಧರೆಗೆ ಬಿದ್ದನು॥

ಭಾಮಿನೀ ಷಟ್ಪದಿ

ಬಳಿಕ ಬಿದ್ದಲ್ಲಿಂದ ದನುಜನು। ಘಳಿಲನೆದ್ದೀತನೊಳು ಕಾದುವ।
ಖಳರು ಲೋಕತ್ರಯದೊಳಿಲ್ಲೆಂದೆನುತ ನಿಶ್ಚೈಸಿ॥
ಕೊಳುಗುಳವ ಬಿಟ್ಟೋಡಲದಕಂ। ಡುಳಿದ ದಾನವರಗ್ನಿಯನು ಮಂ।
ಡಳಿಸಿ ಮುತ್ತುತ್ತಿರಲು ವಾಯುವು ತಡೆದನಿಲ್ವಲನ॥

(ಯುದ್ಧ - ವಾಯು * ಇಲ್ವಲ)
ರಾಗ ಸೌರಾಷ್ಟ್ರ - ತರಿವುಡೆ ತಾಳ

ಎಲವೊ ಖೂಳನೆ ನಿಲ್ಲು ನಮ್ಮಯ। ಬಲಗಳನು ಕೆಡಹುತ್ತ ಪೋದೊಡೆ।
ಫಲವದೇನೀ ಮಾರುತನ ಭುಜ। ಬಲವ ನೋಡು ॥ 1 ॥
ಅನಿಲನೋ ನೀನೆನ್ನ ಪಿತನನು। ಘನತರದ ಮೋಸದಲಿ ಜೈಸಿದ।
ಮನಮುನಿಸ ತೀರಿಸುವೆನೀದಿನ। ದನುವರದೊಳು ॥ 2 ॥
ಬರಿದೆ ಬಗುಳದಿರೆಲವೊ ಧೂರ್ತನೆ। ಧುರಕೆ ನಿಂತರೆ ನಿನ್ನ ತಂದೆಯ।
ಪರಿಯಹುದು ದಿಟ ಶರಣು ಬಂದರೆ। ಪೊರೆವೆ ನಿನ್ನ ॥ 3 ॥
ಪೊರೆವ ಯೋಗ್ಯತೆಯುಂಟೆ ನೀನಾ। ಸುರಪನಡಿಯಾಳಲ್ತೆ ಸುಮ್ಮನೆ।
ಸೊರಹಿ ಸಮಯವ ಕಳೆಯ ಬೇಡೆನು। ತುರಕೆ ಪೊಯ್ದು ॥ 4 ॥
ಗದೆಯ ಪಿಡಿದಿಲ್ವಲನು ಬರಲಾ। ಗದನು ಪಿಡಿದೆಳೆದಾ ಸಮೀರನು।
ಮದಮುಖನ ಬಡಿಯಲ್ಕೆ ಬಿದ್ದನು। ಕದನ ಗೆಯ್ದು ॥ 5 ॥

(ದಾನವರ ಸೋಲು)
ಕಂದ ಪದ್ಯ

ಸುರರಸುರರನೋಡಿಸುತಿರೆ। ಧರೆಯೊಳ್ ನೆಲೆನಿಲ್ವ ತಾಣಮಿಲ್ಲದೆ ದನುಜರ್॥
ಶರಧಿಯ ಪೊಕ್ಕಡಗಲ್ ಸುರ। ರರೆಯನ ಬಳಿಗಯ್ದಿ ಮಾರುತಾಗ್ನಿಗಳೊರೆದರ್

(ಅಗ್ನಿ ವಾಯುಗಳು ದೇವೇಂದ್ರನಲ್ಲಿಗೆ)
ರಾಗ ಸುರುಟಿ - ಏಕತಾಳ

ಲಾಲಿಸು ಸುರನಾಥ। ಸತ್ಯಸು । ಶೀಲ ಗುಣೋಪೇತ॥
ಲೀಲೆಯೊಳಸುರರ। ಸೋಲಿಸಿ ನಿನ್ನಯ। ಮೇಲೆನಿಪಾಜ್ಞೆಯ। ಪಾಲಿಸಿ ಬಂದೆವು॥
ಆದರೆದನುಜೇಂದ್ರ। ತಪ್ಪಿಸಿ । ಪೋದನು ಭಯ ಸಾಂದ್ರ॥
ಸೋದರ ಸಹಿತ ಮ। ಹೋದಧಿಯೊಳು ಮ। ರ್ಯಾದೆಯುಳಿದು।

ಮರೆಯಾದನು ಜವದೊಳು ॥ 2 ॥
ಧುರದಿಂದೋಡಿರುವ। ಜಲದೊಳು । ಮರೆಹೊಕ್ಕಿರುತಿರುವ॥
ಬೆರಳನು ಕ್ಚಚ್ಚಿದ। ಚರಣಕ್ಕೆರಗಿದ। ಶರಣಾಗತರನು। ತರಿವುದು ಧರ್ಮವೆ ॥ 3 ॥
ಎಂದೆಣಿಸುತಲವರ। ಕೊಲ್ಲದೆ । ಬಂದೆವು ದಾನವರ॥
ತೊಂದರೆಗಳು ನಮ। ಗೆಂದಿಗು ಬಾರದು। ಸಂದೆಯವಿಲ್ಲೆನ।
ಲೆಂದನು ಸುರಪನು ॥ 4 ॥

(ದೇವೇಂದ್ರನ ಕೋಪ, ಶಾಪ)

ರಾಗ ಸೌರಾಷ್ಟ್ರ – ತ್ರಿವುಡೆ ತಾಳ

ಏತಕೆಮಗೀ ಧರ್ಮಬೋಧೆಯ। ಮಾತುಗಳು ನೀವಾಮದಾಂಧರ।
ಘಾತಿಸದೆ ಬಂದಿಲ್ಲಿ ನುಡಿಯುವ। ರೀತಿ ಚೋದ್ಯ ॥ 1 ॥
ಮೋಸವೆಸಗುವ ಧೂರ್ತರನು ಮರೆ। ಮೋಸದಿಂ ಗೆಲಬೇಕು ಮುಳ್ಳನು।
ಸಾಸದಿಂ ಮುಳ್ಳಿಂದೆ ತೆಗೆವುದು। ವಾಸಿಯಲ್ತೆ ॥ 2 ॥
ದುರುಳರನು ಸಂಹರಿಸದೆನ್ನಯ। ವರ ಮಹಾಜ್ಞೆಯ ಮೀರಿ ವರ್ತಿಪ।
ಮರುತ ವಹ್ನಿಗಳಿಂದು ಜನಿಸಲಿ। ಧರೆಯ ಮೇಲೆ ॥ 3 ॥

ಭಾಮಿನೀ ಷಟ್ಪದಿ

ಎಂದು ಶಾಪವನೀಯೆ ಭಯದಲಿ। ವಂದಿಸುತಲಾ ವಹ್ನಿ ವಾಯುಗ।
ಳೆಂದರಾ ಮಘವನೊಳು ತಪ್ಪನು ಮನ್ನಿಸುವುದಿದಕೆ॥
ಮುಂದೆ ಪರಿಹಾರಂಗಳೇನೆನ। ಲಂದು ದಯೆಯಿಂ ಶಕ್ರನಾಕ್ಷಣ।
ಮಂದಹಾಸವ ಬೀರುತವರೊಳು ನುಡಿದನತಿ ಹಿತದಿ॥ 1 ॥

ಸಾಂಗತ್ಯ – ರೂಪಕ ತಾಳ

ವೀರರೆ ಕೇಳಿರಿ ಬರಿದೆ ಚಿಂತಿಸೆ ಫಲ। ಬಾರದೆಮ್ಮಯ ಶಾಪವನ್ನು॥
ಮೀರಲಸಾಧ್ಯವು ಧರೆಯೊಳು ಪುಟ್ಟುತ। ಪಾರಮಹಿಮರಾಗಿರಿನ್ನು ॥ 1 ॥
ಧರೆಯೊಳು ರವಿ ವರುಣರ ಶಕ್ತಿಯಿಂ ಪುಟ್ಟಿ। ಮೆರೆವ ಮಿತ್ರಾವರುಣರಿಗೆ॥
ತರುಣಿಯೂರ್ವಶಿಯೊಳು ಸುತರಾಗಿ ಜನಿಸುತೆ। ವರತಪೋಧನರಾಗಿ ಕಡೆಗೆ॥ 2 ॥
ಬಳಿಕ ಸಾಗರವನು ಕುಡಿದು ದುಷ್ಟರ ಕೊಂದು। ಘಳಿಲನೆ ಸತ್ಕಾರ್ಯವೆಸಗಿ॥
ಕಳೆಗುಂದಿದಿಳೆಗತಿ ಹಿತವಗೆಯ್ಯುತಲೆನ್ನ। ಬಳಿಗಾಗಿ ಬನ್ನಿರಿ ಮೋಗಿ ॥ 3 ॥

ಅಗಸ್ತ್ಯೋದ್ಭವ
(ಊರ್ವಶಿಯ ಪ್ರವೇಶ)
ಭಾಮಿನೀ ಷಟ್ಪದಿ

ಇತ್ತ ವಾಸವನಾಜ್ಞೆಯಿಂ ವರ। ಮತ್ತಕಾಶಿನಿಯರನು ನೆರಹುತೆ।
ಚಿತ್ತಶುದ್ಧಿಯೊಳೂರ್ವಶಿಯು ಪಾಲ್ಗಡಲ ಬಳಿಗಾಗಿ॥
ಸುತ್ತಿ ಸುಳಿಯುತೆ ವಿಹರಿಸುತಲ। ತ್ಯುತ್ತಮದ ಹೂಗಳನು ಕೊಯ್ಯುತೆ।
ಮತ್ತೆ ನೀರಾಟಕ್ಕೆಳಸಿ ಸಖಿಯರೊಳು ಪೇಳಿದಳು॥

(ನೀರಾಟ)
ರಾಗ ನವರೋಜು – ಏಕ ತಾಳ

ನಾರಿಯರೆಲ್ಲವರೀಗ। ಈ । ನೀರಿಗೆ ಬನ್ನಿರಿ ಬೇಗ॥
ಮೀರಿದ ಸೆಕೆಯನು। ತಿರಿಸಲೋಸುಗ। ನೀರಾಟವ ನಾವ್। ನೀರೆಯರಾಡುವ ॥ 1 ॥
ಜಲವನು ಹಾರಿಸಿ ಮುದದಿ। ಬಲು । ನಲವನು ತೋರಿಸಿ ಹಿತದಿ॥
ಲಲನೆಯರೆಲ್ಲರು। ಛಲದೊಳು ನೀರನು। ಬಲದಿಂದೆರಚುತ।
ಸಲಿಲದೊಳಿರ್ದರು॥ 2 ॥
ಕಾಂತೆಯರಂತಾಡುತಲಿ। ನಲ । ವಾಂತರು ನೀರಾಟದಲಿ॥
ಇಂತಿರಲವರಿಗೆ। ಬಂತಧಿಕಶ್ರಮ। ವಂತರಿಸದೆ ದಡ। ವಂ ತವೆ ಸೇರ್ದರು॥ 3 ॥

(ಮಿತ್ರಾವರುಣನ ಆಗಮನ)
ಭಾಮಿನೀ ಷಟ್ಪದಿ

ದಡದ ಮೇಲಾ ನಾರಿಯರು ಬಲು। ಸಡಗರದಿ ಸಿಂಗರಿಸುತಿರೆ ಮುನಿ।
ಮೃಡ ಸುಮಿತ್ರಾವರುಣನಾ ವೈ ಕುಂಠದಿಂ ಬರಲು॥
ಜಡಜಮುಖಿಯೂರ್ವಶಿಯು ಕಂಡವ। ನಡಿಗೆರಗಲಾಕ್ಷಣದೊಳಲ್ಲಿಯೆ।
ತಡೆಯದಾಯ್ತಾ ಮುನಿಯ ವೀರ್ಯಸ್ಖಲನ ವತಿಜವದಿ॥

(ವಸಿಷ್ಟ, ಅಗಸ್ತ್ಯರ ಜನನ)
ವಾರ್ಧಕ ಷಟ್ಪದಿ

ಇದನು ಕಂಡತಿ ಭಕ್ತಿಯಿಂದೆರಡು ಬಾರಿ ಸುರ।
ಸುದತಿಯೂರ್ವಶಿ ತನ್ನ ಕೈಯಿಂದೆ ಶೀಘ್ರದಿಂ।
ದುದಕ ಕುಂಭದೊಳಾ ಮಹಾ ವೀರ್ಯಮಂ ತೆಗೆದು ಜತನದಿಂದಿರಿಸಲೊಡನೆ

ಮುದದೊಳಿದನಾ ಮಹಾ ಮುನಿವರ್ಯನೀಕ್ಷಿಸುತೆ।
ಪದುಳದಿಂದೀ ಸಲಿಲ ಕುಂಭದೊಳಗಂದದಿಂ।
ದುದಿಸುವರು ಸುಕುಮಾರರಿಬ್ಬರೆಂದುಸುರುತ್ತೆ ತೆರಳಿದಂ ತೋಷದಿಂದ ॥ 1 ॥
ಬಳಿಕಲೂರ್ವಶಿಯಾ ಮಹಾ ವೀರ್ಯ ಘಟ ಸಹಿತ।
ಘಳಿಲನಲ್ಲಿಂದ ಕಶ್ಯಪ ಮುನಿಪನಾಶ್ರಮದ।
ದಳಭವನವನು ಸೇರಿ ಪೋಷಿಸುತ್ತಿರಲೊರ್ಮೆ ಜನಿಸಿದರ್ಸುಕುಮಾರರು॥
ಥಳಥಳಿಪ ರವಿ ಶಶಿಗಳಂತಿರ್ಪ ಬಾಲಕರ।
ಬಳವಿಗೆಯ ನೆಲೆಯರಿತು ಮಾರೀಚ ಮುನಿ ಬಂದು।
ನಳಿನಜಾಂಡದೊಳಿವರ ಪೆಸರಗಸ್ತ್ಯ ವಸಿಷ್ಠರೆಂದೊರೆದು ಪಾಲಿಸಿದನು ॥ 2 ॥

ಕಂದ ಪದ್ಯ

ಬಾಲಕರಿರ್ವರ್ ಗುಣ। ಶೀಲದೊಳತಿ ಯೋಗ್ಯರೆನಿಸಿ ಬಳೆದರ್ ಮುದದಿಂ॥
ಲೀಲೆಯೊಳೆಲ್ಲವ ಕಲಿಯುತೆ। ಮೇಲೆನಿಸಿದರಖಿಳ ವೇದ ಕೋವಿದರಿಂ॥

ರಾಗ ಸೌರಾಷ್ಟ್ರ – ತ್ರಿವುಡೆ ತಾಳ

ಗುರುಕುಲದೊಳಾ ಗುರುಗಳರುಹಿದ। ಪರಮ ಶಾಸ್ತ್ರವನೆಲ್ಲ ಮೈತ್ರಾ।
ವರುಣಿಗಳು ಪೇಳುವರು ತತ್ಕ್ಷಣ। ಗುರುಗಳೊಡನೆ ॥ 1 ॥
ಮುನಿಗಳರಿಯದ ಜಟಿಲ ತತ್ತ್ವವ। ಮನದೊಳಗೆ ತಾವರಿತು ನುಡಿವರು।
ಜನರಿಗರಿಯದ ವಿಷಯವನು ತಾ। ವೆನುವರೊಡನೆ ॥ 2 ॥
ಅನಿಲನಂತೆಲ್ಲಡೆಯು ಸುತ್ತು। ತ್ತನಲನಂತೆಲ್ಲೆಡೆಯು ಬೆಳಗುತ।
ಮುನಿಜನಕೆ ಸಂತಸವನೀವರು ವನದೊಳವರು ॥ 3 ॥

ಭಾಮಿನೀ ಷಟ್ಪದಿ

ಕುವರರಿಂತಿರಲವರ ವಿಷಯವ। ಜವದೊಳಾ ಕಶ್ಯಪನು ತಿಳಿಯುತ್ತಿ।
ವರು ಮುಂದೆ ಮಹಾಮಹಿಮರಹರದಕೆ ಬೊಮ್ಮನನು॥
ತವೆ ತಪಸ್ಸಿನೊಳೊಲಿಸ ಬೇಕೆಂ। ದವರೊಳೊರೆದಲ್ಲಿಂದ ಕಳುಹ।
ಲ್ಕವಿರಳದ ತಪಕೆಂದು ನಡೆದರು ಕುಂಭ ಸಂಭವರು॥

(ಅಗಸ್ತ್ಯ, ವಸಿಷ್ಠರ ತಪಸ್ಸು)

ಭೋಗ ಷಟ್ಪದಿ

ಬಂದು ಘೋರ ಕಾನನದೊಳು। ನಿಂದು ತಪವನೆಸಗಿ ವೇದ।
ವಂದ್ಯನನ್ನು ಮೆಚ್ಚಿಸುವೆನೆನುತ್ತೆ ಶೀಘ್ರದಿ॥
ಚಂದದಿಂದೆ ಸರಸಿಗಿಳಿದು। ಮಿಂದು ಬಳಿಕ ನಿಶ್ಚಲತೆಯೊ।
ಳೊಂದುಗೂಡಿ ಗೈದರವರು ತಪವನೊಡನೆಯೆ॥

ಕುಸುಮ ಷಟ್ಪದಿ

ಮುನಿ ವಸಿಷ್ಠನು ಬಿಡದೆ। ಘನವಸಿಷ್ಠಾಶ್ರಮವ। ನನುಗೊಳಿಸಿ ತಪವನೆಸಗುತ್ತಿರುತಿರೆ।
ವನದೊಳಗಗಸ್ತ್ಯ ಮುನಿ। ಯುನುಪಮದ ತಪವೆಸಗು।
ತನುದಿನವಗಸ್ತ್ಯಾಶ್ರಮದೊಳಿರ್ದನು॥

ವಾರ್ಧಕ ಷಟ್ಪದಿ

ಇಂತಿರಲಗಸ್ತ್ಯಮುನಿಪತಿಗೆ ಲೋಪಾಮುದ್ರೆ ಕಾಂತೆಯೆನಿಸುತ್ತವರೊಳಿಧ್ಮವಾಹಂ ಜನಿಸ
ಲಂತವರು ಸುಖದಿಂದ ತಪವೆಸಗುತಿರ್ದರಾ ಪುಣ್ಯಾಶ್ರಮದೊಳಿತ್ತಲು॥
ಸಂತಸದೊಳಾ ಮುನಿ ವಸಿಷ್ಠಂಗೆ ಗುಣ ಶೀಲ।
ವಂತೆಯೆನಿಸುವರುಂಧತಿಯು ಪತ್ನಿಯೆನಿಸಲವ।
ರಂತರಂಗ ವಿಶುದ್ಧ ಶಕ್ತಿ ಮುನಿಯಂ ಪಡೆದು ಧರ್ಮಾತ್ಮರೆನಿಸಿರ್ದರು॥

ಉಮಾಮಹೇಶ್ವರ ವಿವಾಹ

(ಅಗಸ್ತ್ಯನಲ್ಲಿಗೆ ಶಿವದೂತನ ಆಗಮನ)

ರಾಗ ಕಾಂಬೋಧಿ – ಝಂಪೆ ತಾಳ

ಒಂದು ದಿನ ಕುಂಭಸಂಭವನಗಸ್ತ್ಯಾಶ್ರಮದೊ। ಳೆಂದಿನಂತಖಿಲ ತಾಪಸರ॥
ವೃಂದಸಹಿತಿರುತಿರಲು ಮುನಿವಟುಗಳಿರ್ದರಾ।
ನಂದದೊಳು ವಿನಯಪರರಾಗಿ ॥ 1 ॥
ವೇದಾಧ್ಯನ ನಿರತರಾಗಿ ಜಪತಪ ಮಹಾ। ಸಾಧನೆಯನೆಸಗುತಲ್ಲಲ್ಲಿ॥
ಸೊದರತೆಯಿಂದಖಿಲ ಸಾಧು ಸಂತರು ಮೆರೆಯು।
ತಾದರೊದೊಳಿರ್ದರತಿ ಮುದದಿ॥ 2 ॥
ಎಲ್ಲರಿಂತಾ ಮುನಿಪನಾಜ್ಞೆಯನು ಪಾಲಿಸುತೆ। ಫುಲ್ಲನಾಭನ ನೆನೆಯುತಿರಲು॥
ಅಲ್ಲಿಗೈತಂದೆರಗಿ ಮುನಿಪನೊಳು ಶಿವದೂತ। ರುಲ್ಲಾಸದಿಂದೊರೆದರಂದು॥ 3 ॥

ರಾಗ ಮುಖಾರಿ – ಏಕ ತಾಳ

ಲಾಲಿಸು ಮುನಿಕುಲ ದೀಪ। ಪೇಳುವ ನುಡಿಯ । ಲೀಲೆಯಿಂದಧಿಕ ಕಲಾಪ॥
ಮೇಲೆನಿಸಿದ ಕೈಲಾಸದ ತುದಿಯಿಂ। ಫಾಲೇಕ್ಷಣನಾಜ್ಞೆಯ ಪಾಲಿಸಲತಿ।
ಲೀಲೆಯೊಳೈತಂದೆವು ನಾವಧಿಕ ಸು। ಶಿಲತೆಯಿಂದೀ ಪಾವನ ವನಕೆ ॥ 1 ॥
ಗಿರಿರಾಜ ನಂದನೆಯನ್ನು। ನಮ್ಮಯ ದೇವ । ಪರಮ ಪಾವನ ಮಹೇಶ್ವರನು॥
ಪರಿಣಯವಾಗುವನೀ ಶುಭ ಕಾರ್ಯವು ಜರಗಲು ದಿನವಿನ್ನೆಂಟಿದೆ ಮುಂದಿನ।
ವರಶಿವಾರದ ಶುಭದಿನವಪ್ಪುದು। ಪರಿಣಯವಿದಕೈತರಬೇಕಂತೆ ॥ 2 ॥

ಕಂದ ಪದ್ಯ

ಎಂದೆರಗಿದ ದೂತರ ನಯ। ದಿಂದ ಮನ್ನಿಸುತೆ ಬರ್ಪೆನೆಂದೊರೆದಾಗಳ್॥
ಚಂದದೆ ಕಳುಹುತ ತೋಷದೊ। ಳಂದಿರಲವನರಸಿ ಬಂದು ಪತಿಯೊಡನೆಂದಳ್॥

(ಅನಸೂಯೆಯ ಆಗಮನ)

ರಾಗ ನಾದನಾಮಕ್ರಿಯೆ – ಏಕತಾಳ

ಏನಿದೀಗ ಬಹಳ ತೋಷ ಜೀವಿತೇಶ। ಬಹುನ ।
ವೀನ ರೀತಿಯಿರ್ಪುದಲ್ತೆ ಜೀವಿತೇಶ॥
ಸಾನುರಾಗ ವಾರೊಳಿನಿತು ಜೀವಿತೇಶ। ಸ್ವಾಭಿ ।
ಮಾನದಿಂದ ಪೋಪುದೆತ್ತ ಜೀವಿತೇಶ ॥ 1 ॥
ಬರಿದೆ ಪೋಗಬಾರದೆನ್ನ ಜೀವಿತೇಶ। ಪೇಳ್ದು ।
ಭರದಿ ಪೋಗಬಾರದೇನು ಜೀವಿತೇಶ॥
ಕರುಣವಾರಮೇಲೆ ಬಂತು ಜೀವಿತೇಶ। ಲೆನುತ ।
ಲೆರಗಿದರಸಿಗೆಂದನವಳ ಜೀವಿತೇಶ॥ 2 ॥

ರಾಗ ಸುರುಟಿ – ಏಕತಾಳ

ತರುಣೀಮಣಿ ಕೇಳು। ಸತ್ಯವ । ನೊರೆಯುವೆ ನೀ ತಾಳು॥
ಪರಮೇಶ್ವರನಿಗೆ। ಪರಿಣಯವಿದೆಯೆಂ। ದರಿತಾನೀದಿನ। ಪೊರಟಿಹೆನಲ್ಲಿಗೆ ॥ 1 ॥
ಎನಗಾ ಮದುವೆಯನು। ನೋಡುವ । ಮನವಿದೆ ನಾ ಬಹೆನು॥
ಅನುಮತಿಯೀವುದು। ಮನದೊಲವಿಂದೆನೆ।
ಮುನಿಯೊರೆದನು ತನ್ನನಿಯೆಯೊಳಾಕ್ಷಣ ॥ 2 ॥

ಭಾಮಿನೀ ಷಟ್ಪದಿ

ತರುಣಿ ನೀನಿಲ್ಲಿಂದ ಪೊರಟರೆ। ವರತಪೋವನವಿದನು ನಡೆಸುವ।
ಪರಮ ದಕ್ಷರದಾರಿಹರು ನೀ ಬರ್ಪುದನುಚಿತವು॥
ತರಳರೊಡನಿರು ನೀನು ನಿಮಗಾ। ಪರಿಣಯವನೀಕ್ಷಿಸುವ ಶಕ್ತಿಯ।
ಕರುಣಿಸಿಹೆನೆಂದಭಯವೀಯುತೆ ಹರಗಿರಿಗೆ ಬಂದ॥

(ಹಿಮವಂತನ ಓಲಗ)
ರಾಗ ಭೈರವಿ – ಝಂಪೆ ತಾಳ

ಓಷಧಿಪ್ರಸ್ಥ ಪುರದೊಳಗಧಿಕ ಸಂಭ್ರಮ ವಿ।
ಶೇಷದಿಂ ಹಿಮವಂತನೆಲ್ಲರನು ಕರೆದು॥
ತೋಷದಿಂ ತನ್ನ ಸುತೆ ಪಾರ್ವತಿಯನಾ ಸರ್ಪ।
ಭೂಷಣಗೆ ಕೊಡುವ ನಿರ್ಧಾರವನು ಗೆಯ್ದು ॥ 1 ॥
ಬಂಧು ಬಾಂಧವ ಸುಜನ ವೃಂದ ಸುರನರ ನಾಗ।
ಸಂದೋಹ ಮನುಮುನಿಗಳೆಲ್ಲರನು ಬರಿಸಿ॥
ಬಂದ ದಿಬ್ಬಣಿಗರನು ಕುಳ್ಳಿರಿಸಿ ಮಂಟಪದೊ।
ಳೊಂದಾಗಿ ವರವಧೂಜನರ ಸತ್ಕರಿಸಿ ॥ 2 ॥
ಮದುವೆಯ ಮುಹೂರ್ತವನು ಕಾಯುತಿರಲಾನಗರ।
ವದುರಿ ಗಡಗಡನೆ ನಡುಗಲು ತೊಡಗಿತಂದು॥
ಮದವಳಿದು ಭೂಕಂಪವಾಯ್ತೆನುತ್ತೋಡಿದರು।
ಬೆದರುತೆಲ್ಲರು ನಡುಗಿ ಕಂಡ ಕಡೆಗಳಿಗೆ ॥ 3 ॥
ಒಡನೆ ಹಿಮವಂತನತಿ ದುಃಖದಿಂ ಬಂದು ಮೃಢ।
ನಡಿಯೊಳೀ ವಿಷಯವನು ಬಿನ್ನವಿಸಿ ಬಳಿಕ॥
ಬಿಡದೆ ಬಂದೀ ಕಷ್ಟವನು ನೀಗಿ ಸಕಲರನು।
ದೃಢದಿಂದ ಪಾಲಿಸೆನೆ ಶಂಕರನು ನುಡಿದ ॥ 4 ॥

ಸಾಂಗತ್ಯ – ರೂಪಕ ತಾಳ

ಬಂಧು ಬಾಂಧವರೆ ನೀವಿಂದತಿ ಭಯವಾಂತು। ಪೊಂದಿದಿರಧಿಕ ದುಃಖವನು॥
ಬಂದಿದೆ ಭೂಕಂಪವೆಂದು ಭಾವಿಸದಿರಿ। ಸಂದೇಹವಿದಕೇತಕಿನ್ನು ॥ 1 ॥
ಈರೇಳು ಲೋಕದ ಕಾರಣಪುರುಷರು। ಬೇರೆಬೇರೆಡೆಯಿಂದ ಬಂದು॥
ಸೇರಿರ್ಪ ಕತದಿಂದೆಭೂರಿಭಾರವ ತಾಳ। ಲಾರದೀ ಗಿರಿ ನಡುಗುವುದು ॥ 2 ॥

ಇದನಿಂದು ಸರಿಗೊಳಿಸಿದರೆ ಭೂ ಕಂಪನ। ವೊದಗದೆಂದೆನ್ನುತೆ ಹರನು॥
ಮುದದಿಂದಗಸ್ತ್ಯನ ಮೊದಲಾಗಿ ಕರೆದೆಲ್ಲ। ರಿದಿರು ಮನ್ನಿಸುತುಸುರಿದನು॥ 3 ॥

(ಶಿವನಿಂದ ಅಗಸ್ತ್ಯನಿಗೆ ಆದೇಶ)

ವಾರ್ಧಕ ಷಟ್ಪದಿ

ವರಮುನಿಯೆ ಲಾಲಿಸೀದಿನ ಬಂದ ಕಷ್ಟವನು।
ಪರಿಹರಿಪ ಶಕ್ತಿ ನೀನೊರ್ವನಲ್ಲದೆ ಬೇರೆ।
ಪರಮ ಮಹಿಮರ ಕಾಣೆನಾದ ಕಾರಣ ನೀನು। ಪೋಪುದೀಗಲೆ ದಕ್ಷಿಣ॥
ಶರನಿಧಿಯ ತಡಿಯಲ್ಲಿ ನಿಲ್ಲು ನಮ್ಮೀ ಮದುವೆ।
ಪರಿಪೂರ್ಣಗೊಳ್ವನ್ನೆವರಮಧಿಕ ಶಕ್ತಿಯಿಂ।
ಧರೆ ನಡುಗದಂತೆಸಗೆನಲ್ಕೆ ಕುಂಬೋದ್ಭವಂ ಮಣಿದು ಶಿವನೊಡನೆದನು॥

ರಾಗ ತೋಡಿ – ಅಷ್ಟ ತಾಳ

ಸರಿಯಲ್ಲ। ಸ್ವಾಮಿ । ಸರಿಯಲ್ಲ ॥ ಪ ॥
ಸರಿಯಲ್ಲ ನೀನೆನ್ನ ಪೋಗೆಂದೆನುವುದು।
ಕರುಣವ ನೀನೀಗ ತೋರಿಪಾಲಿಪುದು ॥ ಅನು ಪಲ್ಲವಿ ॥
ಇಂದಿಲ್ಲಿ ನಡೆಯುವ ಪರಿಣಯವನ್ನು।
ಚಂದದಿಂದುರೆ ನೋಡಿ ಬಹು ಪುಣ್ಯವನ್ನು॥
ಪೊಂದಿ ಕೃತಾರ್ಥನಾಗುತೆ ಜೀವನವನು।
ಮುಂದೆ ಲೇಸಾಗಿಸಲೆಳಸುವೆನಾನು॥

(ಅಗಸ್ತ್ಯನಿಗೆ ಸಮಾಧಾನ)

ರಾಗ ಮಧುಮಾಧವಿ – ಏಕತಾಳ

ಚಿಂತಿಸಬೇಡ ನೀನೆಲೆ ಮುನಿಪಾಲ। ಸಂತಸವನು ತಾಳೊ ಹೇ ಸತ್ಯ ಶೀಲ ॥ ಪ ॥
ನೀನಲ್ಲದನ್ಯರಿಂದಿದು ಸಾಗದೆಂದು॥ ನಾನರಿದೊರೆದೆನು ನಿನ್ನೊಡನಿಂದು॥
ಸಾನುರಾಗದೊಳೀಗ ನೀ ಮನದಂದು।
ತಾನಾಗಿ ಸಾಗಯ್ಯ ಹೇ ಮುನಿ ಬಂಧು ॥ 1 ॥
ನಿನಗೆನ್ನ ಮದುವೆಯ ಕಾಂಬ ಶಕ್ತಿಯನು। ವಿನುತ ಮನೋವೇಗ ಗಮನ ಶಕ್ತಿಯನು॥
ಮನವೊಲಿದಿತ್ತೆನು ಪೋಗಿ ಸೇರಿನ್ನು। ಮುನಿಪನೆ ನೀನು ಕನ್ಯಾಕುಮಾರಿಯನು॥2॥

(ಕನ್ಯಾಕುಮಾರಿಗೆ ಅಗಸ್ತ್ಯನ ಆಗಮನ)

ಭಾಮಿನೀ ಷಟ್ಪದಿ

ಎಂದು ಸಂತವಿಸುತ್ತೆ ಕಳುಹಲು। ಬಂದು ಮುನಿ ಕನ್ಯಾಕುಮಾರಿಯೊ।
ಳಂದದಿಂದಿರೆ ಧರೆಯ ನಡುಕವು ನಿಂದುದಾಕ್ಷಣಕೆ॥
ಮುಂದೆ ಗಿರಿಜೇಶ್ವರ ವಿವಾಹವು। ಚಂದದಿಂ ನೆರವೇರಲದನಾ।
ನಂದದಿಂದೀಕ್ಷಿಸಿದರಾ ಮುನಿ ದಂಪತಿಗಳಂದು॥

ವಾರ್ಧಕ ಷಟ್ಪದಿ

ಮದುವೆಯಂ ಪೂರೈಸಿ ಸರ್ವರುಂ ಕುಂಭಜನ।
ನಧಿಕತರದಿಂದೆ ಕೊಂಡಾಡುತ್ತೈದಿದರವರ।
ಸದನಮಂ ಬಳಿಕ ಹಿಮವಂತನಾ ಮದುವಣಿಗರಂ ಕರೆದು ಮನ್ನಿಸುತ್ತೆ॥
ವಿಧವಿಧದ ಬಳುವಳಿಗಳಂ ಕೊಟ್ಟು ಕಳುಹಲತಿ।
ಮುದದಿಂದ ಹರಗಿರಿಜೆಯರ್ ತಮ್ಮ ಗಣಸಹಿತ।
ಲುದಧಿ ಘೋಷದೊಳ್ಳೆದೆ ಕೈಲಾಸಮಂ ಸೇರ್ದು ಸುಖದಿಂದಲಿರುತಿರ್ದರು॥

ಇಂದ್ರದ್ಯುಮ್ನೋಪಾಖ್ಯಾನ

(ಪಾಂಡ್ಯ ದೇಶಕ್ಕೆ ಅಗಸ್ತ್ಯರ ಆಗಮನ)

ರಾಗ ಭೈರವಿ – ಝುಂಪೆ ತಾಳ

ಇತ್ತಲಾ ಕಲಶಜನು ದಕ್ಷಿಣದ ಶರನಿಧಿಯ।
ಹತ್ತಿರದ ಕನ್ಯಾಕುಮಾರಿಯೊಳು ಮುದದಿ॥
ಕೃತ್ತಿವಾಸನ ನೇಮದಿಂದೆ ತಪವೆಸಗುತತಿ।
ಚಿತ್ತಶುದ್ಧಿಯೊಳು ಬಹು ದಿವಸವಿರುತಿರ್ದ ॥ 1 ॥
ಒಂದು ದಿನ ಮುನಿಪನಿಳೆಯಖಿಳ ಸುಕ್ಷೇತ್ರವನು।
ಸಂದರ್ಶಿಸುವ ಬಯಕೆಯಿಂದ ಪೊರಮಟ್ಟು॥
ಸಂದ ನಾನಾ ಪುಣ್ಯ ತೀರ್ಥಂಗಳೊಳ್ ಮಿಂದು।
ಬಂದನಾ ಬಳಿಕವನು ಪಾಂಡ್ಯ ದೇಶಕ್ಕೆ ॥ 2 ॥
ಆ ರಾಜ್ಯವನು ವಿಷ್ಣು ಭಕ್ತನೆಂದೆನಿಸುತ್ತೆ। ರಾರಾಜಿಸುವ ಮಹೇಂದ್ರದ್ಯುಮ್ನನೆಂಬ॥
ಭೂರಮಣ ನಧಿಕ ಸದ್ಧರ್ಮದಿಂದಾಳುತಿರೆ।
ಶ್ರೀರಮಣಿ ನೆಲೆಸಿರ್ದಳಲ್ಲಿ ವಿಭವದಲಿ ॥ 3 ॥

ಪ್ರಜೆಗಳೆಲ್ಲರು ನಿತ್ಯ ಹರಿಭಜಕರಾಗಿರ್ದು। ಸುಜನರೆಂದೆನಿಸುತ್ತೆ ಮೆರೆದು ನೃಪವರನ॥
ಋಜುಮಾರ್ಗವನು ಬಿಡದೆ ಸತ್ಯ ಧರ್ಮಂಗಳನು।
ನಿಜದಿಂದೆ ಪಾಲಿಸುತಲಿರ್ದರನವರತ ॥ 4 ॥
ವಿಧವಿಧದೊಳಾ ಪಾಂಡು ದೇಶವನು ಸರ್ವರುಂ।
ಸದಮಲತೆಯಿಂದಮರ ವೈಕುಂಠವೆಂದು॥
ಮುದದೆ ಪೊಗಳುತ್ತಿರ್ದರೀ ವಿಷಯವರಿತು ಜಿತ।
ಮದನ ಕುಂಬೋದ್ಭವಂ ಬಂದನರಮನೆಗೆ ॥ 5 ॥

(ಬಾಗಿಲಿನ ಭಟ)

ಭಾಮಿನೀ ಷಟ್ಪದಿ

ಮುನಿಯ ಕಂಡಾ ಬಾಗಿಲಿನ ಭಟ। ನನುನಯದಿ ವಂದಿಸುತ ಬೆಸನೇ।
ನೆನಲು ಮುನಿಪನು ರಾಜನನು ಬರಹೇಳೆನಲ್ಕವನು॥
ವಿನಯದಿಂದವನಿಪನು ಪುಜೆಯ। ಮನೆಯೊಳಿಹನಲ್ಲಿರ್ಪ ಕಾರ್ಯವ।
ಕೊನೆಗೊಳಿಸಿ ಬಂದಪನೆಮಲ್ ಮುನಿದೆಂದನಾ ಮುನಿಪ॥

(ಶಾಪ)

ರಾಗ ಸೌರಾಷ್ಟ್ರ – ತ್ರಿವುಡೆ ತಾಳ

ಪಡಫಡೆಲವೋ ಪಡಿಯರನೆ ನಿ। ನ್ನೊಡೆಯನೀಪರಿ ಬಂದತಿಥಿಯನು।
ಕಡೆಗಣಿಸಿದೊಡೆ ನಾನು ಬಿಡುವೆನೆ। ಕೊಡುವೆ ಶಾಪ ॥ 1 ॥
ಅತಿಥಿಯನು ಕಡೆಗಣಿಸಿದೀತನು। ಮತಿವಿಕಲ ಗಜರಾಜನಾಗೀ।
ಕ್ಷಿತಿಯೊಳುದಿಸಲೆನುತ್ತೆ ಶಾಪವ। ಖತಿಯೊಳಿತ್ತ ॥ 2 ॥
ಒಡನೆ ಚಾರಕ ನಾತನಡಿಗಳ। ಪಿಡಿದೆರಗಿ ಮನ್ನಿಸುವುದೆಮ್ಮಯ।
ಪೊಡವಿಯೊಡೆಯನನೆಂದು ಮಗುಳಡಿ। ಗಡಿಗೆ ಮಣಿದ ॥ 3 ॥

ಕಂದ ಪದ್ಯ

ಆಗಳ್ ಪೂಜೆಯ ಮುಗಿಸುತೆ। ಬೇಗದೊಳೈತಂದು ಮಣಿದು ನೃಪಾಲನಾದರದಿಂ॥
ಯೋಗಿಯ ಮನ್ನಿಸಿ ಬಳಿಕ ಸ। ರಾಗದೊಳತಿ ವಿನಯದಿಂದೆ ವಿಜ್ಞಾಪಿಸಿದಂ॥

(ಇಂದ್ರದ್ಯುಮ್ನನಿಂದ ಕ್ಷಮಾಯಾಚನೆ)

ರಾಗ ಪೂರ್ವಿ – ಅಷ್ಟ ತಾಳ

ಮುನಿಪಾಲ ಲಾಲಿಸಯ್ಯ। ತಪ್ಪುಗಳನ್ನು । ನೆನೆಯದೆ ಪಾಲಿಸಯ್ಯ॥
ಮನದೊಲವಿನೊಳೆಮ್ಮ। ಮನೆಗೆ ನೀವೈತರು।
ವನಿತರೊಳಾನಿರ್ದೆ। ನನಘನಾರ್ಚನೆಯೊಳು ॥ 1 ॥
ಇದರಿಂದ ನೀವಿಲ್ಲಿಗೆ। ಬಂದಾಕ್ಷಣ । ಮುದದಿಂದಲಿಂತೆನಗೆ॥
ವಿಧವಿಧದಿಂ ತವ ಪದವ ಪೂಜಿಸಲಾರ। ದುದಕೆ ಕಾರಣವಾಯ್ತಿ।
ನ್ನಿದನು ಮನ್ನಿಸುವುದು ॥ 2 ॥
ಇತ್ತಿಹ ಶಾಪವನ್ನು। ನೀಗುತಲೆನ್ನ । ನೆತ್ತಿ ಪಾಲಿಸುವುದಿನ್ನು।
ಮತ್ತೆ ಕೋಪವ ತೊರೆ। ಯುತ್ತಲುದ್ಧರಿಸೆನೆ। ಚಿತ್ತಶುದ್ಧದೆ ತಾಪ।
ಸೋತ್ತಮನೆಂದ ॥ 3 ॥

ದ್ವಿಪದಿ

ಧರಣೀಶ ವಂಶ ಸಾಗರ ಸೋಮ ಕೇಳು।
ಪರಿತಾಪಗೊಳದೆ ನೀ ಸಾಮದಿಂ ತಾಳು ॥ 1 ॥
ಕೊಟ್ಟ ಶಾಪವನು ನೆರೆ ಬಿಟ್ಟ ಬಾಣವನು।
ತಟ್ಟನೇ ತಡೆವುದೆಂತಯ್ಯ ಪೇಳಿನ್ನು ॥ 2 ॥
ವರಶಾಪವೆಮ್ಮದೆಂದಿಗು ತಪ್ಪದಿದನು।
ಪರಿಹರಿಸಲರಿದು ನೀನನುಭವಿಪುದಿನ್ನು ॥ 3 ॥
ಕರಿ ರೂಪಿನಿಂದಿರಲು ನರರ ಕಂಡಾಗ।
ಬರಲಿ ನಡೆ ನುಡಿಯು ನರರಂದದೊಳು ಬೇಗ ॥ 4 ॥
ಎಂದಿಗಾ ಹರಿ ಚಕ್ರ ದರ್ಶನವ ನೀನು।
ಪೊಂದುವೆಯೊ ಪಡೆಯಂದೆ ಮೋಕ್ಷವಧುವನ್ನು ॥ 5 ॥
ಎಂದು ಭರವಸೆಯಿತ್ತು ಮುನಿಯು ಗಮಿಸಿದನು।
ಚಂದದಿಂ ನೃಪನು ಧರಿಸಿದನು ಶಾಪವನು ॥ 6 ॥

(ಶಬರವರ್ಮನ ಪ್ರವೇಶ)

ರಾಗ ಸೌರಾಷ್ಟ್ರ – ತ್ರಿವುಡೆ ತಾಳ

ಇತ್ತಲಾ ವಿಂಧ್ಯಾಟವಿಯೊಳ। ತ್ಯುತ್ತಮದ ಪರಿವಾರವನು ನೆರ।
ಹುತ್ತೆ ಮೆರೆದನು ಶಬರವರ್ಮನು। ದಾತ್ತನೆನಿಸಿ ॥ 1 ॥
ಆ ಮಹಾ ವಿಪಿನವನು ಶಬರ। ಸ್ತೋಮದಿಂದೊಡಗೂಡಿ ಬಹುಸು।
ಕ್ಷೇಮಯುತನಾಗಿರ್ದು ಪೊರೆವನು। ಸಾಮದಿಂದ ॥ 2 ॥
ಒಂದು ದಿನ ಸತಿಸಹಿತಲತ್ಯಾ। ನಂದದಿಮದವನಿರಲು ಬೇಡರು।
ಬಂದುವಂದಿಸುತವನೊಳೆಂದರು। ಚಂದದಿಂದ ॥ 3 ॥

(ದೂತನ ದೂರು)

ರಾಗ ಮುಖಾರಿ – ಏಕ ತಾಳ

ಚಿತ್ತವಿಸೀಗೆಮ್ಮ ನುಡಿಯ। ಭಕ್ತಿಯೊಳೆರಗಿ । ಬಿತ್ತರಿಸುವೆವು ನಮ್ಮೊಡೆಯ॥
ಮತ್ತಗಜಂಗಳ। ಮೊತ್ತವು ಕವಿಯುತೆ। ಮುತ್ತುತೆ ಬರುತಿಹ। ವಿತ್ತಲು ವಿಪಿನದ।
ಸುತ್ತಲು ಕವಿದಿಹ। ಕತ್ತಲೆಯಂದದಿ। ಕುತ್ತುರಿಯೆಡೆಯೊಳು। ಹತ್ತಿರವಾಗಿಯೆ ॥ 1 ॥
ವನದೊಳಗಿಹ ನಮ್ಮ ಶಬರ। ಸಂಕುಲವನ್ನು । ಮುನಿದು ಪೀಡಿಸಿ ವನ ಚರರ॥
ಮನೆಯನು ಕೆಡಹುತೆ। ಘನಗಜರಾಜನು।
ಮನುಜರ ತೆರದಲಿ। ಕನಲುತೆ ನುಡಿವನು।
ಬನದೊಳ ಪುಗುವುದ। ಕೆನಗತಿಭಯವಹು।
ದೆನೆ ಶಬರಾಧಿಪ। ನನುಚರಗೆಂದನು ॥ 2 ॥

ರಾಗ ಸೌರಾಷ್ಟ್ರ – ತ್ರಿವುಡೆ ತಾಳ

ಬೆದರದಿರಿ ವನಚರರೆ ಬಂದಿಹ। ಮದಗಜಾನೀಕವನು ತಡೆಯುತೆ।
ಸದೆದು ಸಂಹರಿಸುವೆನು ನಾನಿಂ। ದಧಿಕ ಬಲದಿ ॥ 1 ॥
ಆನೆ ಹುಲಿ ಕರಡಿಗಳು ನಮ್ಮಯ। ಕಾನನವ ಪುಗಲಂಜಿ ಭಯದಿಂ।
ದೀ ನೆಲದಕಡೆಗೈದಲಮ್ಮವು। ನಾನಿರಲ್ಕೆ ॥ 2 ॥
ಅರರೆ ಸೋಜಿಗವೆನಗೆ ಮದಸಿಂ। ಧುರವು ಮನುಜರ ನಡೆನುಡಿಯ ಕಲಿ।
ತಿರುವುದತಿಶಯವಿದಕೆ ಕಾರಣ। ವರಿಯದಕಟಾ ॥ 3 ॥
ಬಂದುದೊಳಿತಾಯ್ತೆನ್ನ ಭುಜಬಲ। ದಂದವನು ಮೆರೆಯಲ್ಕೆ ಶಬರರ।
ವೃಂದ ಬರಲೆನುತಾಜ್ಞೆಯಿತ್ತವ। ನಂದು ಪೊರಟ ॥ 4 ॥

(ಬೇಟೆ)

ರಾಗ ಭೈರವಿ – ತ್ರಿವುಡೆ ತಾಳ

ಬಂದನವನು। ಬೇಟೆಗೆ । ಬಂದನವನು ॥ ಪ ॥
ಮಂದಮತಿ ಶಬರರನು ಸೇರಿಸು।
ತಂದು ರೋಷಾವೇಶದಿಂದಲಿ ॥ ಅನು ಪಲ್ಲವಿ ॥
ಸಂದಿಗೊಂದಿನೊಳವಿತುಕೊಂಡಿಹ। ಹಂದಿಗಳ ಸದೆಬಡಿಯುತೆ॥
ಮಂದಿಮಾರ್ಬಲದೊಡನೆ ಹರಿಕರಿ। ವೃಂದಗಳ ಸೆರೆ ಪಿಡಿಯುತೆ॥
ಮುಂದುವರುಯುವ ವನ್ಯ ಪಶುಗಳ। ಕೊಂದು ತೀರಿಸಿ ನಡೆಯುತೆ॥
ನಿಂದು ಮಲೆವಾ ಖಡ್ಗ ಮೃಗಗಳ। ಸಂದಣಿಯ ಕಡಿಕಡಿಯುತೆ ॥ 1 ॥
ಬಡಿದು ಬಲ್ಲೆಗೆ ಬೊಬ್ಬೆಯೆಬ್ಬಸಿ। ಕಡುಹಿನಿಂ ಮೃಗಕುಲವನು॥
ಕೆಡಹಿ ಬಲೆಗಳ ಬೀಸಿ ಖಗಗಳ। ಪಿಡಿದು ಕಪಿ ಸಂಕುಲವನು॥
ಕಡಿದು ಸಂಹರಿಸುತ್ತೆ ಕಾನನ। ದೆಡೆಯೊಳವಿತಿಹ ಮೊಲವನು॥
ತಡೆದು ಕಾಲನ ಮನೆಗೆ ಕಳುಹಿಸು। ತೊಡನೆ ಮೆರೆಯುತೆ ಛಲವನು ॥ 2 ॥

(ಗಜರಾಜನ ಪ್ರವೇಶ)

ಕಂದ ಪದ್ಯ

ಈತೆರದಿಂ ಕಾನನದೊಳ್। ಖಾತಿಯೊಳವನ್ನೆದೆ ಬೇಂಟೆಯಾಡುತ್ತಿರೆ ನಿ॥
ರ್ಭೀತಿಯೊಳಲ್ಲಿಗೆ ಕುಂಜರ। ನಾಥಂ ಬಂದಾಂತನಮಿತ ಬಾಂಧವ ಸಹಿತಂ॥

(ಗಜರಾಜ * ಶಬರ)

ರಾಗ ಸೌರಾಷ್ಟ್ರ – ತ್ರಿವುಡೆ ತಾಳ

ಬಂದ ಗಜರಾಜನನು ತಡೆಯುತ। ಲೆಂದನಾ ವ್ಯಾಧೇಶನೆಲವೋ।
ಮುಂದುವರಿದರೆ ನಿನ್ನನೀ ದಿನ। ಕೊಂದು ಕಳೆವೆ ॥ 1 ॥
ಎಲವೊ ಶಬರಾಧಿಪನೆ ನೀಕರಿ। ಕುಲವ ಸಂಹರಿಸುತ್ತಲೀ ಪರಿ।
ಕೊಲೆಗಡುಕನಂದದೊಳು ಬಂದರೆ। ಕೊಲುವೆ ನಿನ್ನ ॥ 2 ॥
ಮಾತನಾಡುವ ನಿನ್ನ ರೀತಿಯು। ಭೂತಳದೊಳತಿ ಚೋದ್ಯವಹುದು ವಿ।
ಘಾತಿಸುವೆ ಕಪಟಿಗನೆ ನಿನ್ನನು। ಸಾತಿಶಯದಿ ॥ 3 ॥
ಕಪಟಿಗನು ನಾನಲ್ಲ ತೋರ್ಪೀ ವಿಪಿನದಧಿಪನು ನಾನು ಬರಿದೇ।
ದ್ವಿಪಕುಲವ ಕೊಂದವನ ಕೊಲುವೆನು। ಕುಪಿತನಾಗಿ ॥ 4 ॥

(ಶಬರನ ಸೋಲು)

ಭಾಮಿನೀ ಷಟ್ಪದಿ

ಬಿಟ್ಟ ಬಾಣವನೆಲ್ಲವನು ಪುಡಿ। ಗುಟ್ಟುತಿಭಪತಿ ಮುಳಿದು ಮುಂದಡಿ।
ಯಿಟ್ಟು ಹಿಡಿದು ನಿಷಾದಪತಿಯನು ಕೆಡಹಿ ರೋಷದಲಿ॥
ಮೆಟ್ಟಿ ಕೊಲ್ಲಲು ತಡೆದ ಶಬರರ। ನಟ್ಟಿ ಬಹು ಭೀಕರತೆಯಿಂ ಜಗ।
ಜಟ್ಟಿಯಂದದೊಳೆಸೆದನಹಿತರ ಕೆಡಹಿ ನಿರ್ಭಯದಿ॥

ಕಂದ ಪದ್ಯ

ಬಳಿಕಿಭರಾಜಂ ತನ್ನಯ। ಬಳಗವನೊಡಗೊಂಡು ಪೋಗಿ ಮಜ್ಜನ ಗೈಯಲ್॥
ಘಳಿಲನೆ ಪೊಕ್ಕಂ ಶೋಭಿಪ। ನಳಿನಾಕರಮೊಂದನಧಿಕ ಸಂಭ್ರಮದಿಂದಂ॥

(ಗಜರಾಜನ ಬಳಗದಿಂದ ನೀರಾಟ)

ರಾಗ ಪೂರ್ವಿ – ಅಷ್ಟ ತಾಳ

ಗಜರಾಜನಾಡಿದನು। ನೀರಾಟವ । ಗಜರಾಜನಾಡಿದನು॥ ಪ ॥
ತ್ರಿಜಗಕಚ್ಚರಿಯೆನಿಸುವ ತೆರದಿಂದ ನೀ। ರಜಗಳ ಕಿತ್ತಬ್ರಕೆಸೆಯುತಾರ್ಭಟಿಸಿ ॥ 1 ॥
ಸೊಂಡಿಲಿಂ ನೀರನೆತ್ತಿ। ಘೂತ್ಕರಿಸುತೆ । ಶುಂಡಾಲ ಕುಲವ ಮುತ್ತಿ॥
ಅಂಡಲೆಯುವ ಮಧುಕರಗಳನೋಡಿಸಿ
ಮಂಡಲಾಕೃತಿಯಿಂದ ಸುಳಿದು ಭೀಕರದಿ ॥ 2 ॥
ಜಲಚರ ಸಂಕುಲವ। ಬೆನ್ನಟುತೆ । ಛಲದಿಂದ ಪೀಡಿಸುವ॥
ಬಲಯುತ ಕಮಠ ನಕ್ರಾನೀಕವನು ಮೆಟ್ಟಿ।
ಕೊಲುತಲಿ ಜಲವನು ಕಲಕುತಾಕ್ಷಣದಿ ॥ 3 ॥

ವಾರ್ಧಕ ಷಟ್ಪದಿ

ಬಿಡದಿಂತು ಸರಸಿಯೊಳ್ ಬಹಳ ಕೋಲಾಹಲವ।
ನೊಡರಿಸುತ ನೀರಾಟವಾಡುತಿರಲನ್ನೆಗಂ।
ಪಿಡಿದುದಾ ದ್ವಿರದರಾಜನ ಕಾಲನೊಂದು ಭೀಕರ ನಕ್ರಮತಿ ಜವದೊಳು॥
ಜಡಿದು ನೆಗಹುತೆ ಮೆಟ್ಟಿ ಘೀಳಿಟ್ಟು ಹೂಂಕರಿಸಿ।
ಕೊಡಹಿದೊಡಮದು ಬಿಡದೆ ಸೆಳೆಯುತಿರೆ ಗಜಕುಲಂ।
ತಡಿಗಡರಿ ಬೆದರುತೋಡಲ್ಕೆ ಕರಿರಾಜನಳವಳಿದು ಮೊರೆಯಿಟ್ಟನಂದು॥

(ಗಜರಾಜನ ಆಕ್ರಂದನ)

ರಾಗ ಆನಂದ ಭೈರವಿ – ಏಕ ತಾಳ

ಅಕಟಯೆನ್ನ ಕಾಲನೊಂದು। ಮಕರ ಪಿಡಿಯುತಿಹುದು ಬಂದು।
ರಕ್ಷಿಸಿ । ಎನ್ನ । ನೀಕ್ಷಿಸಿ ॥ 1 ॥
ನೀರ ಮಧ್ಯದಲ್ಲಿ ಜೀವ। ಹೀರಲೆಂದು ಮೊಸಳೆ ನೋವ।
ನೀವುದು । ಬಂದು । ಕಾವುದು ॥ 2 ॥
ಮಡದಿ ಮಕ್ಕಳಾತ್ಮ ಬಂಧು। ಗಡಣ ಮಿತ್ರರೆಲ್ಲ ಬಂದು।
ಬಿಡಿಸಿರಿ। ಪ್ರಾಣ । ಕೊಡಿಸಿರಿ ॥ 3 ॥
ಕ್ಷಿತಿಯೊಳೆನ್ನ ಪೊರೆದು ಮಕರ। ತತಿಯ ತರಿವ ಬಂಧು ನಿಕರ।
ಬರ್ಪುದು । ಶೌರ್ಯ । ತೋರ್ಪುದು॥ 4 ॥

ಕಂದ ಪದ್ಯ

ಈತೆರದೊಳ್ ಗಜರಾಜಂ। ಭೀತಿಯೊಳಂದಳುತಿರಲ್ಕೆ ಬಂಧುಗಳವನೊಳ್।
ಪ್ರೀತಿಯನಿಡದೋಡಲ್ ಕಂ। ಡಾತಂ ಬಳಿಕ್ಕೈದೆ ನೆನೆದನಾ ಶ್ರೀಹರಿಯಂ॥

ರಾಗನೀಲಾಂಬರಿ – ರೂಪಕ ತಾಳ

ಚಕ್ರಧರನೆ ನೀನಲ್ಲದೆ। ನಕ್ರನ ಸಂಹರಿಸುವ ಬಹು।
ವಿಕ್ರಮಯುತರಾರಿಹರೆಲೆ। ಶಕ್ರ ವಿನುತ ದೇವ ॥ 1 ॥
ಸತಿಸುತರೆನ್ನನು ತೊರೆದರು। ಹಿತವಂತರು ಬಿಟ್ಟಗಲಿದ।
ರತಿಶಯ ಕಷ್ಟವ ಕಳೆಯುತೆ। ಗತಿದೋರೆಲೆ ದೇವ ॥ 2 ॥
ಕಾಡಿನ ಬೇಡರ ಕೊಂದೀ। ಡಾಡಿದ ಪಾತಕ ಫಲವೀ।
ಕೇಡನು ತಂದೊಡ್ಡಿತೆ ನೀ। ಗಾಡಿದನೆಲೆ ದೇವ ॥ 3 ॥
ಭಕ್ತೋದ್ಧಾರಕ ರಕ್ಷಿಪ। ಶಕ್ತನು ನೀನಹೆ ಕರುಣಿಸು।
ಮುಕ್ತಿಯನಿತ್ತೀ ದೀನವಿ। ರಕ್ತನನಿಂದೀಗ॥ 4 ॥

ಭಾಮಿನೀ ಷಟ್ಪದಿ

ಹರಿಯೆ ನೀನೇ ಗತಿಯೆನುತ್ತಲೆ। ಮೊರೆಯಿಡುವ ಗಜರಾಜನನು ನೆರೆ।
ಪೊರೆಯಲೆಂದಚ್ಯುತನು ತನ್ನ ಸುದರ್ಶನವ ಕರೆದು॥
ಭರದಿ ಕಳುಹಲು ಬಂದು ಚಕ್ರವು । ದುರುಳ ನಕ್ರನ ತರಿದು ಹರಿಕಂ।
ಕರನ ರಕ್ಷಿಸಲೊಡನೆ ಕಲಶಜನಲ್ಲಿಗೈತಂದ॥

(ಅಗಸ್ತ್ಯರ ಆಗಮನ)

ಸಾಂಗತ್ಯ – ರೂಪಕ ತಾಳ

ಬಂದ ಕುಂಭಜನನು ವಂದಿಸುತತಿ ಭಕ್ತಿ। ಯಿಂದೆ ನಿಂದಿಹ ನೃಪವರನ॥
ಚಂದದಿ ಪರಸುತ್ತಲಂದು ಮುನೀಶ್ವರ। ನೆಂದನು ಕರೆಯುತಲವನ ॥ 1 ॥
ನಿನಗೆ ಮೋಕ್ಷವನೀಯಲೆನುತೆ ಶಾಪವನಿಂತು। ಘನತರದಿಂದಿತ್ತೆ ನಾನು॥
ಮನದ ಬೇಸರವನೊಂದಿನಿತು ನೀನಿರಿಸದೆ। ವನಜಾಕ್ಷನೆಡೆಯ ಸೇರಿನ್ನು ॥ 2 ॥
ಬರುತಿರುವುದ ನೋಡು ವರವಿಮಾನವು ನಿನ್ನ। ಕರೆದೊಯ್ಯಲಾ ಹರಿಯೆಡೆಗೆ॥
ಪರಿತೋಷದಿಂದೆ ನೀ ತೆರಳೆನೆ ವಂದಿಸಿ। ನರಪತಿ ನಡೆದನಾ ಕಡೆಗೆ। ॥ 3 ॥

ಕಂದ ಪದ್ಯ

ಬಳಿಕಾ ಮುನಿಪತಿ ಮುದದಿಂ। ದಿಳೆಯೊಳಗಿರುತಿರ್ಪ ಸಕಲ ಪುಣ್ಯ ಸ್ಥಳಮಂ॥
ಘಳಿಲನೆ ಸುತ್ತುತೆ ತನ್ನಯ। ದಳಭವನವ ಸೇರ್ದು ತಪವನೆಸಗುತಿರ್ದಂ॥

ವಿಂಧ್ಯ ಗರ್ವಾಪಹಾರ

(ವಿಂಧ್ಯನ ಓಲಗ)

ರಾಗ ಭೈರವಿ – ಝಂಪೆ ತಾಳ

ಇತ್ತ ವಿಂಧ್ಯೇಶ್ವರನು ಮೆರೆವ ಶೈಲಪ್ರಸ್ಥ।
ಪತ್ತನದೊಳಧಿಕ ವೈಭವದಿಂದೆ ತಾನು॥
ಮತ್ತಕಾಶಿನಿಯರಂದೆಡಬಲದೊಳಿರುತಿರ।
ಲ್ಕಿತ್ತುವೊಡ್ಡೋಲಗವನಿಂತು ಪೇಳಿದನು ॥ 1 ॥
ಬಂಧುಗಳೆ ನೀವಿತ್ತ ಸಹಕಾರ ದಿಂದಾನು।
ಚಂದದಿಂ ಧರೆಯನಾಳಿದೆನಿನಿತು ದಿನವು॥
ಕುಂದಿನಿತು ಬಂದುದಿಲ್ಲೀತನಕವಾದರಿ।
ನ್ನೊಂದು ವಿಷಯವನೆಣಿಸೆ ಮನಕೆ ಬೇಸರವು ॥ 2 ॥
ಆರವಿಯು ದಿನದಿನವು ಸುತ್ತುವನು ಮುದದಿಂದೆ।
ಮೇರು ಪರ್ವತವನೆಂದರಿತಿಹೆನು ನಾನು॥
ಭೂರಿಬಲಯುತನೆನಿಸುವೆನ್ನನೇತಕೆ ಸುತ್ತ।
ದೀ ರೀತಿಯವಮಾನ ಗೈಯುತಿಹನವನು ॥ 3 ॥
ಬಿಡೆಬಿಡೆನು ನಾನವನ ತಡೆದು ಕೇಳುವೆನಿಂದು।
ಜಡಜಸಖನೆನಗೆ ಬಲವಂದು ಗೌರವವ॥

ಕೊಡದೊಡಾತನ ಮುಖವ ಪೊಡವಿಯೊಳ್ ಕಾಣಿಸ।
ಲ್ಕೆಡೆಗೊಡೆನು ಭಂಗಿಸುವೆನವನದಟುತನವ ॥ 4 ॥

ಕಂದ ಪದ್ಯ

ಎಂದೊರೆಯುತೆ ಸಭಿಕರನಾ। ವಿಂಧ್ಯಂ ಕಳುಹುತ್ತೆ ಬಂದು ರಾಜಾಂಗಣದೊಳ್।
ನಿಂದಾಕ್ಷಣ ಬಳೆದಂ ರವಿ। ಯಂದ್ಯೈತರುತಿರ್ಪ ಗಗನ ಪಥದೆಡೆಗಾಗಳ್॥

ಭಾಮಿನೀ ಷಟ್ಪದಿ

ಭೂಮಿಯಿಂ ಮೇಲೆದ್ದು ಗಗನದ। ಸೀಮೆಯನು ಮೀರಿಸುತೆ ವಿಲಯ।
ವ್ಯೋಮಕೇಶನ ತೆರದೊಳಿರ್ಪ ಮಹೋನ್ನತನ ಕಂಡು॥
ತಾಮರಸಸಖನಂದು ಚೋದ್ಯದೊಳೀಮಹಿಮನಾರೆಂದು ತಿಳಿಯಲು।
ಸಾಮದಿಂದಾತನನು ನುಡಿಸಿದನಂದು ನಸುನಗುತೆ॥

(ಸೂರ್ಯನ ಆಗಮನ)

ರಾಗ ತುಝಾವಂತು – ಝಂಪೆ ತಾಳ

ಯಾರಯ್ಯ ನೀನೀಗಳೇಕೆನ್ನ ತಡೆವೆ।
ಕಾರಣವನರುಹೀಗ ಪೇಳಲೆಡೆಗೊಡುವೆ ॥ ಪ ॥
ದಾರಿಯೊಳು ನಿನ್ನಂತೆ ನಿಂತು ತಡೆದವರು।
ಯಾರಿಲ್ಲವಿನಿತು ದಿನವೆನಗಹಿತ ಜನರು॥
ಧಾರಿಣಿಯ ಸೇವೆಗಾನ್ಯೈದುತಿರಲೆದುರು।
ಮೀರಿಬಂದುದಿದೇಕೆ ಕಾರಣವನರುಹು॥

ರಾಗ ಸೌರಾಷ್ಟ್ರ – ತ್ರಿವುಡೆ ತಾಳ

ಅರಿಯೆಯಾ ವಿಂಧ್ಯೇಶನನು ಮುನಿ। ವರಘಟೋದ್ಭವ ಶಿಶ್ಯನನು ಭೀ।
ಕರ ಮಹೋನ್ನತ ರೂಪನನು ಭಾ। ಸ್ಕರನೆ ನೀನು ॥ 1 ॥
ಮೇರುವಿಗೆ ಬಲವಂದು ಗೌರವ। ತೋರುತಿಹೆ ನೀನೇತಕೆನ್ನನು।
ಸಾರಿಸುತ್ತದೆ ಸುಮ್ಮನುಳಿದೆಯೊ। ಭೋರನುಸುರು ॥ 2 ॥
ಏನು ಕೊರತೆಯ ಕಾಣುತೆನಗವ। ಮಾನವನು ನೀ ಗೆಯ್ದೆ ಮೇರುವಿ।
ಗೇನಧಿಕ ಸೌಭಾಗ್ಯವಿರ್ಪುದೊ। ನೀನು ಪೇಳು ॥ 3 ॥

ಇದನು ತಿಳಿಯಲ್ಕಿಂತು ತಡೆದೆನು। ಮುದದೊಳುತ್ತರವೀಯದಿರೆ ಪೋ।
ಪುದಕೆ ಬಿಡೆನೆಂದೊರೆಯಲಾ ರವಿ। ಬೆದರಿ ನುಡಿದ ॥ 4 ॥

ಸಾಂಗತ್ಯ – ರೂಪಕ ತಾಳ

ವಿನುತ ವಿಂಧ್ಯೇಶನೆ ಮನದೊಳು ಬೇಸರ।
ವನು ತಾಳದಿರು ಪೇಳ್ವೆ ನಿಜದಿ॥
ಕನಕಾಚಲೇಶನಿಂ ಘನಮಹಿಮನು ನೀನು।
ಮುನಿ ಮೈತ್ರಾವರುಣಿಯ ದಯದಿ ॥ 1 ॥
ನಿನಗವಮಾನವ ನಿನಿತೆಸಗುವ ಮನ। ವೆನಗಿಲ್ಲ ಮೂರು ಮೂರ್ತಿಗಳ॥
ಘನತರದಾಜ್ಞೆಯ ನನುದಿನ ಪಾಲಿಸ। ಲೆನುತ ಸುತ್ತುವೆನಿಂತು ಬಹಳ ॥ 2 ॥
ಬರಿದೆ ನೀನಿಂದಾನು ಬರುವ ದಾರಿಯ ತಡೆ। ದರೆ ಧರೆಯೊಳು ಜನರೀಗ॥
ಪರಿತಪಿಸುವರೆನೆ ಭರಿತ ರೋಷದೆ ವಿಂಧ್ಯ। ನೊರೆದನು ಗರ್ಜಿಸುತಾಗ ॥ 3 ॥

ರಾಗ ಮಾರವಿ – ಏಕ ತಾಳ

ಏನೆಂದೆಯೊ ಹೇ ಭಾಸ್ಕರ ನೀನಭಿ। ಮಾನವ ತೊರೆಯುತ್ತೆ॥
ಹೀನನ ತೆರದೊಳು ನಡೆಯಲು ಬಿಡುವೆನೆ। ನಾನೀ ದಿನ ನಿನ್ನ ॥ 1 ॥
ಬಿಡೆ ಬಿಡೆನನುಚಿತ ಕಾರ್ಯವನೆಸಗಲು। ಮೃಡ ಹರಿ ಕಮಲಜರು॥
ತಡೆದರು ಬೆದರೆನು ನೀ ಬಲವಂದೆ। ನ್ನಡಿಗಳಿಗೆರಗದಡೆ ॥ 2॥
ಎಂದೊರೆಯುತಲಾ ವಿಂಧ್ಯನು ರೋಷದೊ। ಳಂದಡ್ಡವಿಸಲ್ಕೆ॥
ಮುಂದಾನಂದದೊಳಂಬುಜ ಸಖನಿಂ। ತೆಂದನು ವಿನಯದಲಿ ॥ 3 ॥

ರಾಗ ಬೇಗಡೆ – ಆದಿ ತಾಳ

ಕೇಳಯ್ಯ ಗಿರಿರಾಜ ವಂಶಾಗ್ರಗಣ್ಯಾ। ಪೇಳುವ ನುಡಿಯನು ಸುಜನವರೇಣ್ಯಾ ॥ ಪ ॥
ಕುಂಭಜ ಶಿಷ್ಯ ನೀನತಿ ಬಲಾನ್ವಿತನು।
ಶಂಭುವಿನಧಿಕ ಭಕ್ತನು ಗುಣಯುತನು॥
ಕುಂಭಿನಿಯನು ಬೆಳಗಿಸಲೆನ್ನ ನೀನು।
ನಂಬುತೆ ಕಳುಹಯ್ಯ ಪಡೆವೆ ಕೀರ್ತಿಯನು ॥ 1 ॥
ಮೂರು ಮೂರ್ತಿಗಳಾಜ್ಞೆಯೀಯಲಂತದನು।
ಮೀರಿ ವರ್ತಿಸುವ ಸ್ವತಂತ್ರರಾರಿನ್ನು॥

ಸಾರ ತ್ತ್ವವನಿದ ನರಿಯುತೆ ನೀನು।
ದಾರಿಯನೆನಗೀಯೊ ಬಿಡು ಛಲವನ್ನು ॥ 2 ॥
ಧರೆಯ ಕಟ್ಟಳೆಯನ್ನು ಮೀರುವೊಡರಿದು।
ದುರುಳ ಬುದ್ಧಿಗಳಿಂದ ಸಾರ್ಥಕವಿರದು॥
ಪರಹಿತಕಾಗಿ ಸ್ವಾರ್ಥವ ನಾವು ತೊರೆದು।
ನಿರತ ವರ್ತಿಸುವುದು ಗರ್ವವನುಳಿದು ॥ 3 ॥

ಭಾಮಿನೀ ಷಟ್ಪದಿ

ಎಂದು ರವಿ ವಿನಯದೊಳು ನೀತಿಯ। ನಂದೊರೆಯೆ ರೋಷದೊಳು ವಿಂಧ್ಯನ
ನೊಂದು ನುಡಿದನು ದಿನಕರನೆ ನೀನೆನಗೆ ಬಲವಂದು॥
ವಂದಿಸದೊಡಾನೀಗ ನಿನ್ನನು। ಮುಂದುವರಿಯಲು ಬಿಡೆನೆನಲ್ಕೈ।
ತಂದನಿನನತಿ ಚಿಂತೆಯಿಂದಜನೆಡೆಗೆ ವಹಿಲದಲಿ॥

(ಬ್ರಹ್ಮನ ಓಲಗ)

ರಾಗ ಕಾಂಬೋಧಿ – ಝುಂಪೆ ತಾಳ

ಇತ್ತಲಾ ಕಮಲಜನು ಸತ್ಯಲೋಕದೊಳು ತಾ।
ನಿತ್ತನೋಲಗವ ವಿಭವದಲಿ॥
ಮತ್ತಕಾಶಿನಿ ವಾಣಿ ಹತ್ತಿರದೊಳಿರುತಿರಲು।
ವೃತ್ತಕುಚೆಯರು ನರ್ತಿಸಿದರು ॥ 1 ॥
ವಂದಿಮಾಗಧರು ಜಯವೆಂದು ನುತಿಸುತ್ತಿರಲು।
ವೃಂದ ವೃಂದಾರಕರು ಮೆರೆವ॥
ಬಂಧುರದ ಸಭೆಗೆ ರವಿಯಂದು ಬಂದೆರಗಲಜ।
ನೆಂದನವನೊಳು ಚೋದ್ಯದಿಂದ ॥ 2॥
ಏನು ಕಾರಣ ಬಂದೆ ಹಾನಿ ಯಾರಿಂದಾಯ್ತು।
ಮ್ಲಾನ ಮುಖದಿಂದಿರ್ಪುದೇಕೆ॥
ನೀನೀಗ ಪೇಳ್ವುದೆನೆ ಸಾನಂದದಿಂ ಮಣಿದು।
ಭಾನುವಿಂತೆಂದನಜನೊಡನೆ॥ 3 ॥

(ಬ್ರಹ್ಮನಲ್ಲಿ ಸೂರ್ಯನ ದೂರು)

ರಾಗ ಸುರುಟಿ – ಏಕ ತಾಳ

ಅವಧರಿಸೆಲೆ ದೇವ। ಬಂದಿಹ । ಬವಣೆಯನಬ್ಜಭವ॥
ಅವನಿಯೊಲನುದಿನ। ಜವದಿಂ ಸುತ್ತುತೆ।
ಕವಿಯುವ ತಮವನು। ತವಿಸುತಲಿರ್ದೆನು ॥ 1 ॥
ಇಂತಿರುತಿರಲೆನಗೆ। ವಿಂಧ್ಯಕ । ನಂತರಿಸದೆ ಹೀಗೆ॥
ಹಂತಕನಂದದಿ। ಮುಂತೈದುತೆ ಗಂ। ಡಾಂತರವೆಸಗುವ। ನೆಂತಿದನೊರೆವೆನು ॥ 2 ॥
ಧರೆಯನು ಬೆಳಗಿಸುವ। ಮೇರುವ । ಬರದಿಂ ಬಲಬರುವ॥
ವರಕೃತ್ಯವನವ। ನುರೆತಡೆಯುತೆ ತನ। ಗೆರಗಿಪ್ರದಕ್ಷಿಣೆ। ಬರಬೇಕೆನುವನು ॥ 3 ॥
ಅತಿಬಲನಾಗಿಹನು। ವಿಂಧ್ಯನು । ಖತಿಯಿಂ ತಡೆಯುವನು॥
ಮತಿಯುತ ನೀನೇ। ಗತಿಯೆನೆ ಶರಣಾ। ಗತನೊಡನಜನತಿ।
ಹಿತದಿಂದೊರೆದನು ॥ 4 ॥

ರಾಗ ಕೇದಾರಗೌಳ – ಅಷ್ಟ ತಾಳ

ಕಮಲಬಾಂಧವನೆ ನೀನೊರೆದ ಸಂಗತಿಯೆನ್ನ। ಗಮನಕ್ಕೆ ಬಂತಿದನು॥
ಕ್ರಮದಿಂದ ಪರಿಹರಿಸುವ ಶಕ್ತರಿಲ್ಲವೀ। ಕಮಲಜಾಂಡದೊಳೀಗಿನ್ನು ॥ 1 ॥
ಎನಗೆ ಮೇಣಾಹರಿ ಹರ ನರ ಸುರರಿಗೊಂದಿ। ದಿನಿತಳುಕನು ವಿಂಧ್ಯನು॥
ಮುನಿ ಕುಂಭ ಜನ್ಮನ ಕರುಣಾಕವಚದಿಂದ। ಲನುದಿನ ನಿರ್ಭಯನು ॥ 2 ॥
ಆರೊರೆದರು ಕೇಳಲಾರನು ಭುವನಕ। ಪಾರ ಸಂಕಟವು ಬಂತು॥
ದೂರ ಬೇಕಿದನು ಕುಂಭಜಗವನತಿ ದಯೆ। ದೋರದಿರನು ಸಮಂತು ॥ 3 ॥
ಎಂದೊರೆಯುತ ವೇದ ವಂದ್ಯನು ಸೂರ್ಯನ। ನಂದೊಡಗೊಂಡು ತಾನು॥
ಮುಂದಗಸ್ತ್ಯನ ಪರ್ಣ ಮಂದಿರಕತಿಜವ। ದಿಂದಲಿ ನಡೆತಂದನು ॥ 4 ॥

(ಬ್ರಹ್ಮ, ಸೂರ್ಯರಿಗೆ ಅಗಸ್ತ್ಯರಿಂದ ಸ್ವಾಗತ)

ಭಾಮಿನೀ ಷಟ್ಪದಿ

ದೂರದಿಂ ಬರುತಿರ್ಪ ಕರುಣಾ। ಪಾರ ಮಹಿಮಾನ್ವಿತನ ಕಾಣುತೆ।
ಭೋರನೈತಂದವನು ಸತಿಸಹಿತೆರಗಿ ಕರೆತಂದು॥
ಸಾರತರ ವರ ಭಕ್ತಿಯಿಂದುಪ। ಚಾರವೆಸಗುತೆ ಬಳಿಕ ಬಂದಿಹ।
ಕಾರಣವದೇನೆಂದು ಬೆಸಗೊಳಲಜನು ಪೇಳಿದನು॥

ರಾಗ ಸೌರಾಷ್ಟ್ರ- ಅಷ್ಟ ತಾಳ

ಅತಿತೋಷವಾಂತೆನು ನಿನ್ನ ದರ್ಶನದಿಂದ ಯೋಗಿನಾಥ। ನಮಗೆ ।
ಹಿತವಂತರಿನ್ನಾರು ನಿನ್ನಿಂದಲಧಿಕರು ಯೋಗಿನಾಥ॥
ಅತಿಥಿ ಸತ್ಕಾರವ ಗೆಯ್ದೆ ಭಕ್ತಿಯೊಳೀಗ ಯೋಗಿನಾಥ। ನಿನ್ನ ।
ಸತಿಸಹಿತುಪಚಾರ ವೆಸಗಿದೆ ನಯದಿಂದ ಯೋಗಿನಾಥ ॥ 1 ॥
ಮೇರುವ ಸುತ್ತುವ ಬದಲಿಗೆ ಸೂರ್ಯನು ಯೋಗಿನಾಥ। ನಿತ್ಯ ।
ಲೋರಂತೆ ವಿಂಧ್ಯಕನನು ಸುತ್ತಬೇಕಂತೆ ಯೋಗಿನಾಥ॥
ಮೀರಿದರಿದಕಿಂತು ದಾರಿಯ ಬಿಡನಂತೆ ಯೋಗಿನಾಥ। ಲೋಕ ।
ಕೀರೀತಿಯುಪಟಳವೀಯುವನೆಲೆಂದ ಯೋಗಿನಾಥ ॥ 2 ॥
ಸಾರಸಸಖ ಸಾರಸೋದ್ಭವರಿರ್ವರು ಬ್ರಹ್ಮದೇವ। ಬಂದು ।
ಸೇರಿ ನಾಟಕವೊಂದನೆಸಗುವಿರೀ ದಿನ ಬ್ರಹ್ಮದೇವ॥
ಕಾರಣಿಕರು ನೀವು ನಿಮಗಲ್ಪ ವಿಂಧ್ಯನು ಬ್ರಹ್ಮದೇವ। ಇಂದು ।
ಭಾರಿ ಸಮಸ್ಯೆಯನಿತ್ತನೆಯೆನಲೆಂದ ಬ್ರಹ್ಮದೇವ ॥ 3 ॥

ವಾರ್ಧಕ ಷಟ್ಪದಿ

ಕುಂಭಜನೆ ನಿನ್ನಿಂದ ಸಾಗದಿಹ ಕಾರ್ಯವೀ।
ಕುಂಭಿನಿಯೊಳಾವುದಿದೆ ಮೊದಲು ಹರ ಗಿರಿಜೆಯರ।
ಸಂಭ್ರಮದ ವೈವಾಹ ಕಾಲಕುಪಹತಿಯಿತ್ತ ಭೂಕಂಪನವ ನಿಲಿಸಿದ॥
ಸಾಂಬಶಿವಭಕ್ತ ನೀನಿಂದು ವಿಂಧ್ಯಾಚಲದ।
ಜಂಬಮಂ ನಿಲಿಸಿ ಧರೆಯಂ ಪೊರೆವುದೆಂದೆನುತ।
ಅಂಬುಜಭವಂ ಪೇಳಲೊಡನೊಪ್ಪಿ ಮಣಿದು ಮುನಿ ನಡೆದನಾ ವಿಂಧ್ಯನೆಡೆಗೆ॥

(ವಿಂಧ್ಯನಲ್ಲಿಗೆ ಅಗಸ್ತ್ಯರಾಗಮನ)
ಸಾಂಗತ್ಯ – ರೂಪಕ ತಾಳ

ನೀರದ ಮಾರ್ಗದಿಂ ಭೋರನೆ ಬರುವ ಗಂ। ಭೀರ ಮೂರ್ತಿಯ ಕಂಡು ಬೇಗ॥
ಸಾರಿ ಸಮೀಪಕೆ ಸೇರಿ ವಿಂಧ್ಯನು ಪಾ। ದಾರವಿಂದಕೆ ಮಣಿದಾಗ ॥ 1 ॥
ಕರೆತಂದು ಮುನಿಯನು ವರಪೀಠದೊಳು ಕುಳ್ಳಿರಿಸಿ ಮನ್ನಿಸುತೆಂದನವನು॥
ಗುರುಗಳೆ ನಿಮ್ಮಯ ಚರಣ ದರ್ಶನದಿಂದೆ। ಪರಮ ಪಾವನನಾದೆ ನಾನು ॥ 2 ॥
ಇಂದು ನೀವಿಲ್ಲಿಗೆ ಬಂದ ಕಾರಣವನು। ಚಂದದಿಂದುಸುರಿದೊಡದನು॥
ಮುಂದಾಗಿ ನಡೆಸುವೆ ನೆಂದೆರಗಲು ಮುನಿ। ವಂದ್ಯನು ನಗುತೆ ಪೇಳಿದನು ॥ 3 ॥

ರಾಗ ಎರಕಲ ಕಾಂಬೋಜಿ – ಅಷ್ಟ ತಾಳ

ಅತಿ ತೋಷವಾಯ್ತೆನಗೆಲೆ ಪರ್ವತೇಂದ್ರ।
ಕ್ಷಿತಿಯೊಳು ನೀನಹೆ ಸದ್ಗುಣ ಸಾಂದ್ರ ॥ ಪ ॥
ಅತಿಶಯ ಗುರುಭಕ್ತಿಯಿಂದ ಶೋಭಿಪ ಬಲ।
ಯುತನುರ್ವಿಯೊಳು ನಿನ್ನ ಪೋಲುವ ಬಹು ಮಹೋ।
ನ್ನತರನು ನಾ ಕಾಣೆನು॥ ನೀನೀ ವಸು ।
ಮತಿಯೊಳು ವಿಖ್ಯಾತನು॥ ಸೌಭಾಗ್ಯ ಶೋ ॥
ಭಿತ ಕೀರ್ತಿ ಸಂಪದನು॥ ಸದ್ಧರ್ಮರಂ ।
ಜಿತನಯವಿದನು ಕೋವಿದನು ॥ 1 ॥
ಇಂದು ನಾನೊಂದು ಕಾರ್ಯವ ನೆನೆ ದಿಲ್ಲಿಗೈ।
ತಂದೆನು ನೀನದ ನೀಕ್ಷಣ ನಡೆಸುವೆ।
ನೆಂದು ಭಾಷೆಯನೀವುದು॥ ಬೇಸರವಿರ್ದೊ ।
ಡಂದದಿಂದೊರೆಯುವುದು॥ ಶಿಷ್ಯನ ಭಕ್ತಿ ।
ಗೊಂದುದಾಹರಣೆಯಿದು॥ ಪೇಳೆನೆ ವಿಂಧ್ಯ ।
ನೆಂದನು ವಿನಯದಿಂ ಮಣಿದು ॥ 2 ॥

(ವಿಂಧ್ಯ ಗರ್ವಾಪಹಾರ)
ವಾರ್ಧಕ ಷಟ್ಪದಿ

ಗುರುದೇವ ನಿಮ್ಮಭೀಷ್ಟವನಿಂದು ಸಲಿಸದಿರೆ।
ಹರಿಹರ ವಿಬೇಧಮಂ ಗೈದ ಧೂರ್ತಗೆ ದೊರೆವ।
ನಿರಯ ನಿಳಯಂ ಪ್ರಾಪ್ತಮಾಗಲೇನಿದೆ ನಿಮ್ಮ ಮನದಿಷ್ಟವದನೀಕ್ಷಣ॥
ನೆರವೇರಿಸುವೆನೆಂದು ಸುಪ್ರತಿಜ್ಞೆಯ ಗೈದು।
ಚರಣಕಾನತನಾಗೆ ಮನಿ ನುಡಿದನವನೊಳೀ।
ತೆರದಿಂದ ವಂದಿಸುತಲಿರು ನೀನು ನಾನಿಲ್ಲಿ ಬರ್ಪನ್ನೆವರಮೇಳದೆ॥

ಕಂದ ಪದ್ಯ

ಎಂದಾ ಮುನಿಪತಿಯೊರೆಯಲ್।
ವಿಂಧ್ಯಂ ನಿರುಪಾಯನಾಗಿ ತನ್ನೊಪ್ಪಿಗೆಯಂ॥
ಚಂದದೊಳಿತ್ತಾ ಗುರುವಿಗೆ।
ವಂದಿಸಲವನೊಡನೆ ಕುಂಭಜಂ ಬಳಿಕಿಂತೆಂದಂ॥

ಭಾಮಿನೀ ಷಟ್ಪದಿ

ಧರೆಯೊಳಗೆ ಗುರುಭಕ್ತನೆನಿಸುತೆ। ಮೆರೆದು ಸತ್ಕೀರ್ತಿಯನು ಪಡೆಯೆಂ।
ದೊರೆದು ಪರಸುತೆ ಕಲಶಜನು ಪೊರಮಡಲು ವಿಂಧ್ಯಕನು॥
ಶರವ ನೆಗಹದೆ ಮಣಿದು ಗುರುವಿನ। ಚರಣಕಮಲವ ನೆನೆದು ಭಕ್ತಿಯೊ।
ಳಿರುತಿರಲು ರವಿ ರಥವನೇರಿದನಧಿಕ ವಿಭವದಲಿ॥

ನಹುಷ ಗರ್ವಭಂಗ

(ನಹುಷನ ಓಲಗ)

ರಾಗ ಸೌರಾಷ್ಟ್ರ – ತ್ರಿವುಡೆ ತಾಳ

ಇತ್ತ ಗಜನಗರದೊಳು ನಹುಷ ನೃ। ಪೋತ್ತಮನು ಹರಿವಿಷ್ಟರವನೇ।
ರುತ್ತ ನುಡಿದನು ಬಹಳ ಧೀರೋದಾತ್ತನೆನಿಸಿ ॥ 1 ॥
ಕ್ಷಿತಿಯನತಿ ವೈಭವದೊಳಾಳುತೆ। ಶತಮಖವ ಗೈದಮಲ ಕೀರ್ತಿಯ।
ನತಿಶಯದಿ ಪಡೆದಿರ್ಪನಪ್ರತಿ। ರಥನೆನಿಸುತೆ ॥ 2 ॥
ರೋಗಭಯ ದುರ್ಭಿಕ್ಷವಿರದೆ ಸ। ರಾಗದಿಂದೀ ಧರೆಯ ಜನರನು।
ರಾಗದಿಂದಿರುತಿಹರು ಸೌಖ್ಯದೊ। ಳೀಗ ಮುದದಿ ॥ 3 ॥

(ಮಾತಲಿಯ ಆಗಮನ)

ಭಾಮಿನೀ ಷಟ್ಪದಿ

ಎಂದೊರೆವ ಸಮಯದೊಳು ಮಾತಲಿ। ಬಂದು ವಂದಿಸೆ ಚೋದ್ಯದೊಳು ನೃಪ।
ನಂದು ಸನ್ಮಾನಿಸುತೆ ಬಂದಿಹ ಹದನವೇನೆಂದು॥
ಚಂದದಿಂ ಕೇಳಲ್ಕೆ ನಸುನಗೆ। ಯಿಂದಲಾ ಸುರಸೂತನವನಿಪ।
ಗಂದದಿಂ ಬಿನ್ನವಿಸಿದನು ವಿಧಿ ವಿಧಿಸಿದಾಜ್ಞೆಯನು॥

ರಾಗ ಮುಖಾರಿ – ಏಕ ತಾಳ

ಮಾನವೇಶ್ವರ ಲಾಲಿಸೀಗ। ಬಂದಿಹೆನಬ್ಜ । ಸೂನುವಿನಾಜ್ಞೆಯಿಂ ಬೇಗ॥
ನೀನೀ ಕ್ಷಣ ಪೊರಡುತೆ ಸುರಲೋಕಕೆ।
ಸಾನಂದದೆ ಬರಬೇಕೆಂದಜನಭಿ।
ಮಾನದೊಳೊರೆದಿಹನೆನಲವನಿಪನನು।
ಮಾನದೊಳಾಸುರ ಸೂತನೊಳೊರೆದನು॥

ಸಾಂಗತ್ಯ – ರೂಪಕ ತಾಳ

ಸುರ ಸೂತ ಲಾಲಿಸು ಸುರಪಾಲನಿಲ್ಲದೆ। ಸುರಲೋಕ ರಕ್ಷಕನಾಗಿ॥
ಬರಿದೇತಕೆನ್ನನು ಬರಹೇಳಿದರೊಯೆನ। ಲೊರೆದನು ಮಾತಲಿಯೆರಗಿ॥

ರಾಗ ಮುಖಾರಿ – ಏಕ ತಾಳ

ಸುರನಾಥನಿಲ್ಲದೆ ನಮ್ಮ। ರಾಜ್ಯವನಾಳ್ವ । ದೊರೆಯಾರೆಂದರಿಯದೆ ಬೊಮ್ಮ॥
ಭರದಿಂ ಶತಮಖವನು ಗೈದಿಹ ಭೂ। ವರನಾಗಿಹ ನಿನ್ನನು ಕರೆದೊಯ್ಯುತೆ।
ಸುರಪಟ್ಟವ ನಿನಗೀಯುವೆನೆನಲಾ। ನರಪಾಲಕನತಿ ಚೋದ್ಯದೊಳೊರೆದನು॥

ಸಾಂಗತ್ಯ – ರೂಪಕ ತಾಳ

ಈಗ ದೇವೇಂದ್ರನು ಸಾಗಿದನೆಲ್ಲಿಗೆ। ಹೀಗೇತಕೆಸಗಿದನಯ್ಯ॥
ಬೇಗನೆ ಪೇಳೆನಲಾಗ ಮಾತಲಿಯು ಸ। ರಾಗದಿಂದೊರೆದನು ವಿಷಯ॥

ವಾರ್ಧಕ ಷಟ್ಪದಿ

ವೃತ್ರಸಂಹಾರದಿಂದೊದಗಿರ್ದ ಪಾಪದಪ।
ವಿತ್ರತೆಗೆ ಹೇಸಿ ಸುರಪಂ ತನ್ನ ಬಾಂಧವಕ।
ಛತ್ರರಂ ತೊರೆದು ತಾನಜ್ಞಾತನಾಗೆ ಕಮಲೋದ್ಭವಂ ನಹುಷ ನೃಪನು॥
ಕ್ಷತ್ರಿಯೋತ್ತಮನು ಶತಯಾಗಮಂ ಗೈದು ಸುಪ।
ವಿತ್ರನಾಗಿಹನೆಂದು ನಿರ್ಧರಿಸಿ ಬಳಿಕ ಲೋ।
ಕತ್ರಯಾಧೀಶ್ವರತ್ವದ ಸುರಪ ಪದವಿಯಂ ನಿನಗೀವನಂತೆ ದಯದಿ॥

ಕಂದ ಪದ್ಯ

ಅದರಿಂದೀಗಳ್ ನೀನತಿ। ಮುದದಿಂದ್ಯೈತರ್ಪುದಮರ ಪುರಕೆನೆ ಭೂಪಂ॥
ವಿಧಿಯಾಜ್ಞೆಯಿದೆಂದಾತ್ಮಜ। ಗಧಿಕಾರವನಿತ್ತು ಬಳಿಕ ದಿವಕೈತಂದಂ॥

(ನಹುಷನ ದೇವಲೋಕ ಪ್ರವೇಶ)

ರಾಗ ಭೈರವಿ – ಝಂಪೆ ತಾಳ

ಇತ್ತಸುರರಜನ ನೇಮದೊಳಮರ ಪತ್ತನವ। ನುತ್ತಮದ ತೋರಣಗಳಿಂದಲೆಲ್ಲೆಲ್ಲು॥
ಚಿತ್ತಶುದ್ಧಿಯೊಳು ಸಿಂಗರಿಸಿ ನಹುಷೇಂದ್ರನನು।
ಮತ್ತೆ ಸುಸ್ವಾಗತಿಸೆ ಸಿದ್ಧರಾಗಿರಲು ॥ 1 ॥

ದೂರದಿಂದ್ಯೆತರ್ಪ ದೇವರಥದೊಳ್ ನಹುಷ।
ನೇರಿ ಮಾತಲಿಯೊಡನೆ ಬರುವ ದೃಶ್ಯವನು॥
ಭೋರನಾಕ್ಷಣ ಕಂಡು ದೇವಗುರು ಸಹಿತ ವೃಂ।
ದಾರಕರು ಬಯಸಿದರು ಸುಸ್ವಾಗತವನು ॥ 2 ॥
ಒಡನೆ ನಹುಷನು ಬಂದು ಪೊಡಮಡಲು ಕಮಲಜನು।
ಪಿಡಿದೆತ್ತಿ ಕರೆತಂದು ವರಮಕುಟವನ್ನು॥
ಸಡಗರದೊಳವನ ತಲೆಗಿಟ್ಟು ಹರಿಪೀಠದೊಳು।
ಬಿಡದೆ ಕುಳ್ಳಿರಿಸುತೆಲ್ಲರೊಳು ಪೇಳಿದನು ॥ 3 ॥

ರಾಗ ಕಾಂಬೋಧಿ – ಝಂಪೆ ತಾಳ

ಸುರರೆಲ್ಲ ಲಾಲಿಪುದು ದೇವಲೋಕವನಿನ್ನು।
ಪೊರೆಯುವನು ನಹುಷೇಂದ್ರವರನು॥
ನಿರತನೀವಾತನಿಗೆ ಸಹಕಾರ ವೀಯಲನ।
ವರತ ನಿಮ್ಮನು ಪಾಲಿಸುವನು ॥ 1 ॥
ಶತಮಖವಗೆಯ್ದ ಸಾಹಸಿಯಿವನು ಭುವನದೊಳ।
ಗತುಲ ವಿಕ್ರಮನು ಗುಣಯುತನು॥
ಮತಿವಂತ ನಹುಷ ಭಯ ಬೇಡ ನಿಮಗೆನುತೆ ನರ।
ಪತಿಗಿತ್ತನಧಿಕಾರವನ್ನು ॥ 2 ॥

ಕಂದ ಪದ್ಯ

ಇಂತಧಿಕಾರವನಿತ್ತಜ। ನಂತರಿಸದೆ ನಡೆಯೆ ನಹುಷನೆಲ್ಲರೊಳಾಗಳ್॥
ಸಂತಸದಿಂದೊರೆದಂತ। ನ್ನಂತಸ್ಥವನಮರ ಸಭೆಯೊಳಂದತಿ ಹಿತದಿಂ॥

ರಾಗ ಸೌರಾಷ್ಟ್ರ – ತ್ರಿವುಡೆ ತಾಳ

ಸಭಿಕ ಬಾಂಧವರೆಲ್ಲ ಕೇಳಿರಿ। ಶುಭ ಮುಹೂರ್ತದೊಳೆನ್ನನಮರರ।
ವಿಭುವೆನಿಸಿ ಮನ್ನಿಸಿದ ಕಾರ್ಯವು। ವಿಭವವಲ್ತೆ ॥ 1 ॥
ಮುನ್ನಿನಂದದೊಳಖಿಳ ಸುರನರ। ಪನ್ನಗರು ಸಹಕಾರವೀಯುತೆ।
ಮನ್ನಿಸುವುದೆನ್ನಾಜ್ಞೆಯನು ನೆರ। ವನ್ನು ನೀಡಿ ॥ 2 ॥
ಅರಿಗಳಿಂದುಪಹತಿಯು ಬಾರದ। ತೆರದೊಳೆಲ್ಲರ ಪೊರೆಯುವೆನು ಕ।
ರ್ಬುರರು ಬಂದರೆ ತರಿದು ಕೊಲುವೆನು। ಹರಿಯ ದಯದಿ ॥ 3 ॥

(ನಹುಷನಿಗೆ ದೇವಲೋಕ ದರ್ಶನ)

ಭಾಮಿನೀ ಷಟ್ಪದಿ

ಎಂದು ಸುರಸಂದೋಹಕಭಯವ। ನಂದು ನಹುಷ ಮಹೇಂದ್ರನಿತ್ತಾ
ನಂದದಿಂ ಕಳುಹುತ್ತೆ ತನ್ನಧಿಕಾರ ಪರಿಮಿತಿಗೆ॥
ಬಂದ ಸಕಲ ಸುವಸ್ತು ನಾರೀ। ವೃಂದವನು ತೋರಿಸಲು ಸಚಿವನೊ।
ಳೆಂದೊಡಾಕ್ಷಣ ಕಾಣಿಸಲು ಕರೆದೊಯ್ದು ವಿವರಿಸಿದ॥

ರಾಗ ಸಾಂಗತ್ಯ – ರೂಪಕ ತಾಳ

ಒಡೆಯ ನಿನ್ನಾಜ್ಞೆಯನೊಡನೆ ಪಾಲಿಸಲೆಮ್ಮ। ಪೊಡವಿಯ ವಿವಿಧ ವಸ್ತುವನು॥
ಕಡುಸೊಬಗಿನ ಗೃಹ। ದೆಡೆಯ ಸುಸ್ಥಳವನು। ಬಿಡದೆ ತೋರಿಸುವೆನೆಲ್ಲವನು ॥ 1 ॥
ಇದು ರತ್ನ ಭಂಡಾರವಿದು ಹೇಮ ಭಂಡಾರ। ವಿದು ಪುಣ್ಯ ಗ್ರಂಥ ಭಂಡಾರ॥
ಇದು ನಾಣ್ಯ ಭಂಡಾರವಿದು ವಸ್ತ್ರ ಭಂಡಾರ। ವಿದು ನವಧಾನ್ಯ ಭಂಡಾರ ॥ 2 ॥
ಇಲ್ಲಿದೆ ನಂದನವಿಲ್ಲಿದೆ ಚಂದನ। ವಿಲ್ಲಿದೆ ಸುರರಾಜ ಸದನ॥
ಇಲ್ಲಿದೆ ಪರಿಜನ ವಿಲ್ಲಿದೆ ಪುರಜನ। ವಿಲ್ಲಿದೆ ಸುರವರ ವ್ಯಜನ ॥ 3 ॥
ನೋಡಿಲ್ಲಿ ಗಜಕುಲ ನೋಡಿಲ್ಲಿ ಹಯಕುಲ। ನೋಡಿಲ್ಲಿ ಶಕಟ ಸಂಕುಲವ॥
ನೋಡಿಲ್ಲಿ ಗುರುಕುಲ ನೋಡಿಲ್ಲಿ ಗಿರಿಕುಲ। ನೋಡಿಲ್ಲಿ ಶಸ್ತ್ರ ಸಂಕುಲವ ॥ 4 ॥

ವಾರ್ಧಕ ಷಟ್ಪದಿ

ಅನಲ ಯಮ ಮುಖ್ಯ ದಿಕ್ಪತಿಗಳರಮನೆಗಳಂ।
ಮುನಿಪ ಗುರುವರ ಬೃಹಸ್ಪತಿಯ ದಳಭವನಮಂ।
ವಿನುತ ಸುರ ಗರುಡ ಗಂಧರ್ವ ಗೇಹಂಗಳಂ ರಂಭೆ ಮೇನಕೆ ಮುಖ್ಯರ॥
ಮನೆಗಳಂ ಕಂಡಬಳಿಕಾ ಶಚಿಯ ವರನಿಕೇ।
ತನದ ಹೊರಗಿರ್ದ ಪೌಲೋಮಿಯಂ ಕಂಡೊಡನೆ।
ಮನಸಿಜನ ಶರಕೆ ಗುರಿಯಾಗಿ ನಹುಷೇಂದ್ರನಿಂತೆಂದನಾ ಸಚಿವನೊಡನೆ॥

(ನಹುಷನಿಗೆ ಶಚಿಯ ಬಯಕೆ)

ರಾಗ ಯಮುನಾ ಕಲ್ಯಾಣಿ –ಅಷ್ಟ ತಾಳ

ಯಾರಿವಳಿಲ್ಲಿ ನಿಂತಿಹ ಬಾಲೆ। ಆಹಾ ।
ಚಾರು ಸುಂದರ ಗುಣಗಣ ಮಾಲೆ ॥ ಪ ॥
ನೀರೆಯೀಕೆಯ ಪೋಲ್ವವರ ಕಾಣೆ। ನಾನು ।
ಧಾರಿಣಿಯೊಳು ಪುಷ್ಪಶರನಾಣೆ॥
ಭಾರಿ ಸೌಂದರ್ಯಾತಿಶಯಯುಕ್ತೆ। ಈಕೆ ।
ನೀರೇಜ ಮುಖಿ ಮನ್ಮಥನ ಭಕ್ತೆ ॥ 1 ॥
ಕುಡಿಹುಬ್ಬು ಕಾಮನ ಸಿಂಗಾಡಿ। ನೋಡು ।
ಮುಡಿಯಿದೆ ಕಾಲಾಹಿಯೋಲ್ನೀಡಿ॥
ನಡುವಿದೆ ಸಿಂಹದ ಕಟಿಯಂತೆ। ಚೆಲ್ವ ।
ನಡೆಯಿಹುದಂಚೆಯು ಬಂದಂತೆ ॥ 2 ॥
ಕಂಬುಕಂಠಿನಿ ಕಲರವವಾಣಿ। ಭವ್ಯ । ಬಿಂಬಾಧರಾಮಲ ಕಲ್ಯಾಣಿ॥
ಶಂಬರಾರಿಯ ಸದನದ ರಾಣಿ। ಕಾಮ ।
ನಂಬಿನ ಕೋವಿದೆ ಗೀರ್ವಾಣಿ ॥ 3 ॥

ಕಂದ ಪದ್ಯ

ಎನೆ ಸಚಿವಂ ನಹುಷನ ಪದ।
ವನಜಕ್ಕಭಿವಂದಿಸುತ್ತೆ ಭಕ್ತಿಯೊಳಾಗಳ್॥
ವಿನಯದೆ ನುಡಿದಂ ಮುಂದಿನ।
ಘನವಿಷಯವನಧಿಕ ದುಃಖ ಸಂತಪ್ತತೆಯಿಂ॥

ರಾಗ ಮಧ್ಯಮಾವತಿ – ಏಕ ತಾಳ

ಕೇಳೆನ್ನ ಮಾತನು ನಹುಷಾಮರೇಂದ್ರ।
ಪೇಳುವೆ ವಿಷಯವ ಬಹುಗುಣ ಸಾಂದ್ರ ॥ ಪ ॥
ಇದು ಶಚಿಯರಮನೆಯಾಗಿದೆ ತೋರುವ।
ಸುದತಿಯು ಪೌಲೋಮಿಯಹಳು॥
ಹೃದಯೇಶನೆಲ್ಲಿಗೆ ಪೋದನೆಂದರಿಯದೆ।
ಮುದವಳಿದಿಂತು ತಾನ್ನೆದೆ ದುಃಖಿಪಳು ॥ 1 ॥

ಪರಮ ಪತಿವ್ರತೆ ಪರಸತಿಯೀಕೆಯ।
ಬರಿದೆ ದುರ್ಭಾವನೆಯಿಂದ ॥
ಪರಿಕಿಸದಿರು ನೀನು ವರಸಹೋದರಿಯೆಂದು।
ಪರಿಭಾವಿಸೆನೆ ನೃಪ ನವನೊಳಿಂತೆಂದ ॥ 2 ॥

ರಾಗ ಸೌರಾಷ್ಟ್ರ- ತ್ರಿವುಡೆ ತಾಳ

ಸಚಿವಪತಿ ನೀನೀಗ ಪೇಳ್ದಿ। ಶಚಿಯ ವಿಷಯದ ಧರ್ಮ ಬೋಧನೆ।
ಯುಚಿತವಲ್ಲಾನರಿವೆ ನೀಕೆಯ। ಶುಚಿತನವನು ॥ 1 ॥
ಅತ್ರಿ ಸತಿಯೊಡನೀಕೆ ಬಹಳ ವಿ। ಚಿತ್ರ ಮತ್ಸರವೆಸಗಿ ಸೋತ ಚ।
ರಿತ್ರವರಿಯೆನೆ ನುಡಿಯದಿರು ನೀ ಮಿತ್ರನಂತೆ ॥ 2 ॥
ಸರ್ವ ಸುರರಿಂದೆನ್ನವರು ಶಚಿ। ಯೊರ್ವಳನ್ಯರದೆಂದು ನುಡಿಯ।
ಲ್ಕುರ್ವಿ ನಗದೇ ಸುಜನರೆಂಬರು। ಗರ್ವವೆಂದು ॥ 3 ॥
ಸುರಪಪದವಿಯೊಳುಳ್ಳ ವಿಭುವಿನ। ಪರಮ ಶಾಸನಗಳನು ಸಕಲರು॥
ಪೊರೆವುದೆಂದಜ ಹರಿ ಹರರು ನೆರೆ। ಯೊರೆದರಲ್ತೆ ॥ 4 ॥
ಆದ ಕಾರಣ ಪೋಗಿ ಶಚಿಯನು। ಮೋದದಿಂದೆನ್ನವಳನಾಗಿಸು।
ಸಾದರದೊಳೆನೆ ನಡೆದನವನು ಹ। ಸಾದವೆಂದು॥ 5 ॥

(ನಹುಷನ ಆಜ್ಞೆಯನ್ನು ತಿಳಿಸಲು ಶಚಿಯಲ್ಲಿಗೆ ಮಂತ್ರಿಯ ಆಗಮನ)
ಕಂದ ಪದ್ಯ

ಒಡನೆಯೆ ಮನದೊಳ್ ಸಚಿವಂ।
ಕಡುದುಗುಡವನಾಂತು ಬಂದು ಶಚಿಯಡಿಗೆರಗಲ್॥
ನುಡಿದಳ್ ಚೋದ್ಯದೊಳೆನ್ನಯ।
ಬಿಡದಿಗೆ ನೀನೇಕೆ ಬಂದೆಯೆನಲವನೆಂದಂ॥

ರಾಗ ಬೇಗಡೆ – ತ್ರಿವುಡೆ ತಾಳ

ಎಂತಾನು ಪೇಳ್ವೆನಮ್ಮ। ಈ ವಿಷಯವ। ನೆಂತಾನು ಪೇಳ್ವೆನಮ್ಮ ॥ ಪ ॥
ಎಂತುನಿನ್ನೊಡನಿದನು ಪೇಳುತೆ। ಸಂತಸವ ಕೆಡಿಸುತಲಿ ಬಹು ವಿಧ।
ಚಿಂತೆಯನು ನಿನಗಿತ್ತ ಬಳಿಕ। ತ್ಯಂತ ಕಷ್ಟವನೀವೆನೋ ಹಾ ॥ ಅನು ಪಲ್ಲವಿ ॥
ಸುರಪತಿ ನಹುಷೇಂದ್ರನು। ನಿಷ್ಕರುಣದೊ । ಳೊರೆದಿತ್ತನಾಜ್ಞೆಯನ್ನು॥
ತ್ವರಿತದೊಳು ನೀನಿಂದು ಪೊರಟವ। ನರಮನೆಯ ಸೇರುತ್ತಲಾತನ।

ಮೆರೆವ ಪಟ್ಟದ ಮಹಿಷಿಯಹುದೆಂ। ದುರುತರಾಜ್ಞೆಯನಿತ್ತು ಮಲ್ಲಿಗೆ।
ಗೆರೆದಿಹನು ಬಿಸಿನೀರ ನೆನೆಪಂ। ಕರುಹಮುಖಿ ನೆಲೆದಪ್ಪಿ ಕೊಳದಿಂ।
ಧರೆಗೆ ಬಿಸುಟಂಬುಜದ ತೆರದಿಂ। ದುರುಳಿ ದುಗುಡದೊಳೆಂದಳಾಕ್ಷಣ॥

(ಶಚಿಯ ದುಃಖ)

ರಾಗ ನೀಲಾಂಬರಿ – ರೂಪಕ ತಾಳ

ಆರೊಡನುಸುರುವೆ ಸಚಿವನೆ। ದಾರುಣ ದುಃಖವನೆನ್ನಯ।
ನೀರನು ಸನಿಹದೊಳಿಲ್ಲದ। ಕಾರಣವಿನಿತಾಯ್ತೆ ॥ 1 ॥
ಹರನೇ ದುರುಳನು ಬಂದೀ। ತೆರದಿಂದೆನ್ನಭಿಮಾನಕೆ।
ಕೊರತೆಯನೊಡ್ಡುವನಕಟಾ। ಕರುಣಾನಿಧಿ ಪೊರೆಯೊ ॥ 2 ॥
ಪತಿಯಿಲ್ಲಿರ್ದೊಡೆಯಿಂತೀ। ಪತಿತನು ನುಡಿಯಲು ಶಕ್ತನೆ।
ಗತಿಹೀನೆಯು ನಾನಾಗಿಹೆ। ನತಿದಯೆ ದೋರಿಂದು ॥ 3 ॥
ಸುಡುತಿದೆ ದಾವಾನಲವೀ। ಗಡವಿಯ ಲತೆಯನು ಕರುಣಾ।
ಜಡಧಿಯೆ ಪೊರೆದಯೆಯೆಂಬೀ। ಜಡಿಮಳೆಯನು ಸುರಿದು ॥ 4 ॥

(ನಾರದನ ಆಗಮನ)

ಭಾಮಿನೀ ಷಟ್ಪದಿ

ಎಂದು ಬಹುವಿಧದಿಂದ ಮರುಗುವ। ಮಂದಗಾಮಿನಿಯೆಡೆಗೆ ದಯೆಯಿಂ।
ಬಂದನಾ ನಾರದನು ನಾರಾಯಣನ ನುತಿಸುತಲಿ॥
ಚಂದದಿಂದಾಕ್ಷನದೊಳಾ ಶಚಿ। ವಂದಿಸುತೆ ಕಂಬನಿಯ ಸುರಿಸ।
ಲ್ಕೆಂದನಾಶೀರ್ವದಿಸುತವಳೊಡನಾ ಮುನೀಶ್ವರನು॥

ರಾಗ ಮಧುಮಾಧವಿ – ಏಕ ತಾಳ

ಮರುಗದಿರೆಲೆ ಸುರರೆರೆಯನ ರಾಣೀ।
ವರಧೈರ್ಯವನು ತಳೆ ಪರಮ ಕಲ್ಯಾಣೀ ॥ ಪ ॥
ಅರಿತು ಬಂದೆನು ನಿನ್ನ ಶೋಕವೆಲ್ಲವನು।
ಹರಿಸಲೆಂದಿಲ್ಲಿಗೆ ಯೋಚಿಸುತಿನ್ನು॥
ಒರೆವೆನು ನಿನಗೊಂದುಪಾಯವ ನಾನು।
ಪರಿಹರಿಸುವುದಿದು ನಿನ್ನ ದುಃಖವನು ॥ 1 ॥

ನಿನ್ನನು ಬಯಸಿದೊಡಾನಹುಷನನು।
ಮನ್ನಿಪ ಮೊದಲು ಮಾಡೊಪ್ಪಮದವನ್ನು॥
ಮುನ್ನಾತ ನಿಲ್ಲಿಗೆ ಸುರರಂದಣವನು। ಸನ್ನುತಿಯಿಂದೇರಿ ಬರಲಿ ಪೇಳಿನ್ನು ॥ 2 ॥
ಆದೊಡಾ ಪಲ್ಲಕಿಯನು ಕುಂಬೋದ್ಭವನು। ಮೊದದಿಂ ಸಪ್ತರ್ಷಿ ಸಹಿತ ಪೊತ್ತಿನ್ನು॥
ಬೀದಿಯೊಳ್ ಬಂದಿಲ್ಲಿಸೇರಲಾತನನು। ಸಾದರದಿಂದೊಪ್ಪಿ ಕರಪಿಡಿ ನೀನು ॥ 3 ॥

ಭಾಮಿನೀ ಷಟ್ಪದಿ

ನಿನ್ನನೆಳಸಿದ ಭೂಪನಂದಣ। ವನ್ನು ಕುಂಭಜ ಮುಖ್ಯ ಮುನಿಗಳು।
ಪನ್ನತಿಕೆಯಿಂ ಪೊತ್ತು ನಿನ್ನರಮನೆಗೆ ನಹುಷನನು॥
ಮನ್ನಿಸುತೆ ಕರೆತರಲವನಮನ। ದನ್ನೆಯಹೆನೆಂದೊರೆದೊಡದರಿಂ।
ಬನ್ನ ಬಾರದು ನಿನಗೆನುತ ಮುನಿ ಪರಸಿ ಗಮಿಸಿದನು॥

ಕಂದ ಪದ್ಯ

ಒಡನೆಯೆ ಸಚಿವನೊಳನಿಮಿಷ। ರೊಡೆಯಂಗಿದನೊರೆವುದೆಂದು ಶಚಿ ಪೇಳ್ದವನಂ॥
ತಡೆಯದೆ ಕಳುಹಲ್ಕಾತಂ। ಬಿಡದಾ ನಹುಷನೆಡೆಗೆ ಬಂದಿಂತೆಂದಂ॥

(ಮಂತ್ರಿ ಶಚಿಯ ಅಪೇಕ್ಷೆಯನ್ನು ನಹುಷನಿಗೆ ತಿಳಿಸುವುದು)

ರಾಗ ಕಾಂಭೋಜ – ಅಷ್ಟ ತಾಳ

ಸುರರಾಜ ಕೇಳೆನ್ನ ಸೊಲ್ಲ। ನಿನ್ನೊ । ಳರುಹುವೆ ವಿಷಯವನೆಲ್ಲ॥
ವರಶಚಿಯೆನ್ನೊಡನೊರೆದಳು ನಿನ್ನನು।
ಪರಿತೋಷದಿಂದಲಿ ವರಿಸಲಿಚ್ಛಿಪೆನೆಂದು ॥ 1 ॥
ಆದರೆ ನಿನ್ನ ವೈಭವವ। ಕಂಡು । ಸಾದರದಿಂದಾಕೆಯಿರುವ॥
ಆದಿವ್ಯ ಭವನಕೆ ಮೋದದಿಂದಲಿ ನೀನು।
ಬೀದಿಯೊಳ್ ಮೆರವಣಿಗೆಯೊಳೈದಬೇಕಂತೆ ॥ 2 ॥
ಪೋಪಾಗ ಪಲ್ಲಕಿ ಹತ್ತಿ। ಸಪ್ತ । ತಾಪಸರಿಂದದನೆತ್ತಿ॥
ಭಾಪೆಂದು ಕುಂಭಜ ಸಹಿತ ಹೊತ್ತಂದಣ।
ವೀಪುರ ಭವನದಿಂದಲಿ ಬರಬೇಕಂತೆ ॥ 3 ॥
ಆಗ ನಿಮಗೆ ಸುಸ್ವಾಗತವ। ನೀಡಿ । ನಾಗಗಮನೆ ನಿಮ್ಮ ಕರವ॥
ಬೇಗನೆ ಪಿಡಿಯುವಳಂತೆಯೆಂದೆನಲು ಸ।
ರಾಗದಿಂದೊಪ್ಪಿ ಮಂತ್ರಿಯೊಳಾಗಳೆಂದನು ॥ 4 ॥

ವಾರ್ಧಿಕ ಷಟ್ಪದಿ

ಎಲವೊ ಮಂತ್ರೀಶ್ವರನೆ ಬರಿಸಖಿಳ ತಾಪಸರ।
ನೊಲವಿನಿಂದಂದಣವನಣಿಗೊಳಿಸು ಮೆರವಣಿಗೆ।
ಯಲಿ ಬರಲಿ ಸಕಲ ದಿಕ್ಪಾಲ ಸುರ ಗರುಡ ಗಂಧರ್ವ ಗುಹ್ಯಕ ಸಿದ್ಧರು॥
ಲಲನೆಯರು ಕಲಶ ಕನ್ನಡಿವಿಡಿಯುತ್ತೈತರಲಿ।
ಸುಲಲಿತಾಲಂಕಾರ ವಾದ್ಯ ವೈಭವ ಸಹಿತ।
ನಲವಿಂದಲೆಮ್ಮ ಮೆರವಣಿಗೆ ಪೊರಡಲೆನಲ್ಕೆ ಮಂತ್ರಿಯಣಿಗೆಯ್ದನಿಂತು॥ 1 ॥
ಎತ್ತನೋಡಲ್ಮಕರ ತೋರಣಗಳೋರಣಗ। ಳೆತ್ತ ನೋಡಲ್ವಾದ್ಯ ಘೋಷಗಳ ತೋಷಗಳ।
ದೆತ್ತನೋಡಲ್ಪುಷ್ಪ ಹಾರ ನೀಹಾರ ನೀರಜಕುಮುದಮುದವೀವವು॥
ಎತ್ತ ನೋಡಲ್ಕುಸುಮ ವಲ್ಲಿಗಳ ಝುಲ್ಲಿಗಳ।
ದೆತ್ತ ನೋಡಲ್ಮೆರೆವ ದಾರಿಗಳ ಕೇರಿಗಳ।
ದೆತ್ತ ನೋಡಲ್ದೇವ ಪುರದ ಗೋಪುರದ ಗೋಡೆಗಳು ಮೆರೆಮೆರೆದುದಂದು॥ 2 ॥

ಭಾಮಿನೀ ಷಟ್ಪದಿ

ಪುರವ ಶೃಂಗರಿಸುತ್ತೆ ಸಕಲರ। ಬರಿಸಿ ಕುಂಭಜಮುಖ್ಯಮುನಿಗಳ।
ಕರೆತರಿಸಿ ಪೊನ್ನಂದಣವ ಸಿಂಗರಿಸಿ ಮಂತ್ರೀಶ॥
ಮೆರವಣಿಗೆಗಣಿಗೈದು ನಹುಷನೊ। ಳೊರೆಯೆ ಮುದದಿಂದಂದಣವನತಿ।
ಭರದೊಳೇರಲು ಪೊತ್ತು ನಡೆದರು ವರತಪೋಧನರು॥

ರಾಗ ಶಂಕರಾಭರಣ – ಅಷ್ಟ ತಾಳ

ನಡೆದರೂ। ಪಲ್ಲಕಿಯನಾಂತು ಮುನಿಗಳು । ನಡೆದರೂ ॥ ಪ ॥
ನಡೆದರಂದಣವನು ಹೊತ್ತು। ಮುಂದೆ ತಡೆಯದೆ ಬಹಳ ಬೇಸತ್ತು। ಮೆಲ್ಲ।
ನಡಿಯಿಟ್ಟು ಪೋದರು ಕಡುಮುಳಿಯದೆಮತ್ತೂ। ದೃಢಮನದಿಂದಲಂದೆಡಹಿ
ನೋಯುತಲತ್ತು॥ ಅನು ಪಲ್ಲವಿ ॥
ಬಡ ಕಿತ್ತಡಿಗಳಂದು ಬಾಡಿ। ತಮ್ಮ । ನಡೆಯನು ಮೆಲ್ಲನೆ ಮಾಡಿ। ಸಾಗ ।
ಲೊಡನೆ ಪಲ್ಲಕಿಯೊಲೆದಾಡಿ। ಕೈಯ । ಕೊಡಹಿ ಕುಂಭಜ ನಿಲೆ ನೋಡಿ।
ಬೇಗ । ನಡೆಯೆಂದಗಸ್ತ್ಯನ ನೃಪನೊದೆದನು ಕಾಡಿ।
ಕಡುಮುಳಿಯುತೆ ಸರ್ಪ ಸರ್ಪವೆಂದೆನುತಾಡಿ॥

(ಅಗಸ್ತ್ಯರ ಶಾಪ)
ರಾಗ ಸೌರಾಷ್ಟ್ರ – ತ್ರಿವುಡೆ ತಾಳ

ಒಡನೆ ಮುನಿ ಕುಂಭಜನು ಕೋಪವ। ತಡೆಯದಾ ಪಲ್ಲಕಿಯನಿಳುಹುತೆ।
ಹೆಡೆದುಳಿದ ಫಣಿಯಂತೆ ತಲೆಯನು। ಕೊಡಹಿ ನುಡಿದ ॥ 1 ॥
ಎಲವೆಲವೊ ನೀನಿಂದು ನಿನ್ನಯ। ನೆಲೆಯನರಿಯದೆ ಬಹಳ ಗರ್ವವ।
ತಲೆಯೊಳಾಂತೀಗೆನ್ನ ಶಿರವನು। ಛಲದೊಳೊದೆದೆ ॥ 2 ॥
ಸರ್ಪ ಸರ್ಪನುತೊದೆದ ನಿನ್ನಯ। ದರ್ಪವನು ನಾನಿಳಿಸುವೆನು ಕಂ।
ದರ್ಪಹರನಡ್ಡೈಸೆ ಬಡುವೆನೆ। ಸರ್ಪನಾಗು ॥ 3 ॥

(ಪಶ್ಚಾತ್ತಾಪ, ಪರಿಹಾರ)
ಸಾಂಗತ್ಯ ರೂಪಕ ತಾಳ

ಭೂಪನಾಕ್ಷಣ ಮುನಿ ಶಾಪವನಾಲಿಸು। ತಾಪಲ್ಲಕಿಯ ಕೆಳಗಿಳಿದ॥
ತಾಪಸನಡಿಗೆ ಸಂತಾಪದಿಂದೆರಗಿ ಮ। ಹಾಪರಾಧವ ಕ್ಷಮಿಸೆಂದ ॥ 1 ॥
ಮತ್ತನಾಗುತೆ ಕಾಮೋನ್ಮತ್ತತೆಯಿಂದಲಿ। ಮತ್ತಕಾಶಿನಿಯನು ಬಗೆದೆ॥
ಮತ್ತವಿನಯದಿಂದೆ ಮತ್ತಾಪಸರಿಗೆ ಮೇಣ್। ಮತ್ತಪಕಹಿತವ ಗೈದೆ ॥ 2 ॥
ವಿನಯದಿಂದಲಿ ಪಾದ ವನಜಕೆ ಮಣಿದ ಭೂ।
ಪನ ದುರ್ಗತಿಯ ನೆನೆದೊಡನೆ॥
ಮುನಿಸನು ತೊರೆಯುತೆ ಮನದೊಲವನು ತೋರಿ।
ಮುನಿ ನುಡಿದನು ನೃಪನೊಡನೆ ॥ 3 ॥
ಇದರಿಂದ ನಿನಗೆ ಬಂದೊದಗಿದ ಶಾಪದ।
ಭ್ಯುದಯದ ಪರಿಹಾರ ಹೀಗೆ॥
ಸದಮಲ ಧರ್ಮಜನುದಿಸಿ ತತ್ತ್ವವ ಪೇಳ।
ಲದನಾಲಿಸಲು ಮೋಕ್ಷ ನಿನಗೆ ॥ 4 ॥

ಭಾಮಿನೀ ಷಟ್ಪದಿ

ಎಂದು ನುಡಿಯುತೆ ಶಚಿಗೆ ಬಂದಿಹ। ದಂದುಗವಪರಿಹರಿಸಿ ಕುಂಭಜ।
ನಂದು ಗಮಿಸಲ್ಕಮರರಾನಂದವನು ಪೊಂದಿದರು॥
ಮಂದ ಭಾಗ್ಯನು ನಹುಷನನ್ನೆಯ। ದಿಂದ ತನಗಿಂತಾಯ್ತೆನುತ್ತಲಿ।
ದಂದಶೂಕನ ರೂಪವಾಂತಿಳೆಗಿಳಿದನತಿಜವದಿ॥

ಇಲ್ವಲಾಸುರ ಸಂಹಾರ

(ಇಲ್ವಲಾಸುರನ ಓಲಗ)

ರಾಗ ಭೈರವಿ – ಝಂಪೆ ತಾಳ

ದನುಜನಿಲ್ವನಿತ್ತ ದನುಜರಿಂದೊಡಗೂಡಿ।
ವಿನುತ ಗೋದಾವರೀ ತೀರದೊಳು ಮೆರೆವ॥
ಮನೆಯ ಮಾಯಕದಿಂದಲನುಗೈದು ಭೂಸುರರ।
ಘನವೇಷವಾಂತು ಸಹಜರೊಳೊರೆದನಿರವ ॥ 1 ॥
ಅನುಜಾತರಿರ ಕೇಳಿರನಿಮಿಷರು ನಮ್ಮವರ।
ಹನನಗೈವರು ಮೊಸದಿಂದಲನವರತ॥
ಅನುದಿನದೊಳವರನಾ ವನಜಭವ ಹರಿಹರರು।
ಮನವಚನ ಕಾಯದಿಂ ಪೊರೆಯುವರು ನಿರತ ॥ 2 ॥
ಧರೆಯ ಸಜ್ಜನರು ವಿಪ್ರರು ಮುನಿಗಳೊಂದಾಗಿ।
ಪರಮ ಯಜ್ಞಾದಿಗಳನೆಸಗುತಮರರಿಗೆ॥
ವರಹವ್ಯ ಕವ್ಯದಿಂ ನಿರತ ಸಂತುಷ್ಟಿಯನು।
ದೊರಕಿಸುವರದರಿಂದಲಧಿಕರವರಿಳೆಗೆ ॥ 3 ॥

ವಾರ್ಧಕ ಷಟ್ಪದಿ

ಸೋದರರೆ ವರಪೈತೃಕದ ನಿಮಂತ್ರಣವಿತ್ತು।
ಭೂದಿವಿಜರನು ಬರಿಸಿ ಮನ್ನಿಸುತೆ ಬಳಿಕ ಸು।
ಸ್ವಾದುತರದಾಹಾರ ರೂಪಮಂ ಧರಿಸಿ ಮಾಯಕದೊಳಾ ವಾತಾಪಿಯು॥
ಮೋದದಿಂದಿರಲವನು ಬಂದವರ್ಗಿಕ್ಕಿಯುಣಿ।
ಸಾದ ಬಳಿಕಾನು 'ವಾತಾಪಿ ಬಾ'ಎನಲುದರ।
ಬೇಧನಂ ಗೆಯ್ದುವರ ಕೊಲ್ವುದೆಂದಿಲ್ವಲಂ ಹಂಚಿಕೆಯ ಗೈದನಂದು॥

(ಅಗಸ್ತ್ಯಾಗಮನ)

ಕಂದ ಪದ್ಯ

ಅನ್ನೆಗಮಲ್ಲಿಗೆ ಬಂದಂ। ಸನ್ನುತ ಕುಂಭಜನದೊರ್ಮೆ ತೀರ್ಥಾಟನೆಯಂ॥
ತನ್ನಿಂತಾನೆಸಗುತೆ ಕಪ। ಟೋನ್ನತರಿರ್ಪೆಡೆಗೆ ವಿಪ್ರಗೃಹವೆಂದೆನುತಂ॥

ರಾಗ ಕೇದಾರ ಗೌಳ – ಅಷ್ಟ ತಾಳ

ಬಂದ ವಿಪ್ರನ ಕಂಡು ವಂದಿಸುತಸುರನು। ಮಂದಿರದೊಳು ಮನ್ನಿಸಿ॥
ಚಂದವಾಯಿತ್ತಿಲ್ಲಿಗೈತಂದುದರಿಂದಲೀ। ಗೆಂದೊರೆದನು ನಮಿಸಿ ॥ 1 ॥
ಇಂದೆಮ್ಮ ಮನೆಯೊಳು ತಂದೆಯ ಪೈತೃಕ। ವೆಂದಿರ್ಪ ಕಾರಣದಿ॥
ಬಂದ ನೀವೀಗಿದ ಚಂದದಿ ನಡೆಸುವು। ದೆಂದನು ಖಳನಂದದಿ ॥ 2 ॥
ಅದಕೊಪ್ಪಿ ಮುನಿಪತಿ ಮುದದಿಂದೆ ಕಾರ್ಯವ। ವಿಧಿವಿಹಿತದೊಳೆಸಗಿ॥
ಮದಮುಖನಿತ್ತ ಭೋಜ್ಯದ ವಸ್ತುಗಳನುಂಡ। ನಧಿಕ ತುಷ್ಟಿಯೊಳು ತೇಗಿ ॥ 3 ॥

(ವಾತಾಪಿಯ ನಾಷ)

ಭಾಮಿನೀ ಷಟ್ಪದಿ

ಮುನಿಪತಿಯು ಕುಳಿತಿರಲು ಬಳಿಕಾ। ದನುಜನಾ ವಾತಾಪಿಯನು ಬಾ।
ರೆನುತ ಕರೆಯಲಗಸ್ತ್ಯನುದರದೊಳವನು ಘುಡುಘುಡಿಸೆ॥
ಮನದೊಳರಿತವನುರವನು ಕರ। ವನಜದಿಂ ಪೂಸುತ್ತೆ ನುಡಿದನು।
ಘನತೆಯಿಂ 'ವಾತಾಪಿ ಜೀರ್ಣೋಭವ" ಎನುತ್ತೊಡನೆ॥

(ಇಲ್ವಲನ ಕೋಪ, ಘೋರರೂಪಿಯ ಸೃಷ್ಟಿ)

ರಾಗ ಸೌರಾಷ್ಟ್ರ – ತ್ರಿವುಡೆ ತಾಳ

ಈತೆರದೊಳಾ ಮುನಿಯು ನುಡಿದಿಹ। ಮಾತನಾಲಿಸುತಸುರನರಿತನು।
ಖಾತಿಯಿಂ ತಮ್ಮನನು ಕೊಂದಿಹ ನೀತನೆಂದು ॥ 1 ॥
ಆಗ ವಿಪ್ರನ ವೇಷವನು ಮರೆ। ಯಾಗಿಸುತೆ ದಾನವನ ರೂಪನು।
ಬೇಗ ಕೈಗೊಂಡಾರ್ಭಟಿಸಿ ಮುಂ। ದಾಗಿ ಬಂದು ॥ 2 ॥
ಬಿಡದೆ ಮೈತ್ರಾವರುಣಿಯೆಡೆಗವ। ನಡಿಯಿಡುತೆ ಖಡ್ಗವನು ಝಳಪಿಸಿ।
ಕಡಿದು ಕೊಲ್ಲುವೆನೆಂದು ಬರೆ ಮುನಿ। ತಡೆದು ನುಡಿದ ॥ 3 ॥
ದಾನವನೆ ನಿಲ್ಲೆಲವೊ ಮುಂದಕೆ। ನೀನಡಿಯನಿಡೆ ನಿನ್ನನೀಗನು।
ಮಾನಿಸದೆ ಕೊಲ್ಲುವೆನು ಚಾನಾ। ಹಾನಿಯೆಸಗಿ ॥ 4 ॥
ಎಂದು ಗರ್ಜಿಸಿ ಖಾತಿಯಿಂಧರೆ। ಗಂದು ಮುನಿಯೊದೆಯಲ್ಕೆ ಜನಿಸುತೆ।
ಬಂದುವಂದಿಸಿ ಘೋರ ರೂಪನು। ನಿಂದು ನುಡಿದ ॥ 5 ॥

ರಾಗ ಮಾರವಿ – ಏಕ ತಾಳ

ತಾತನೆ ನೀನಿಂದೇತಕೆ ಸೃಜಿಸಿದೆ। ಭೂತಳದೊಳು ನಿನ್ನ॥
ಪ್ರೀತಿಸದರಿಗಳ ಘಾತಿಸುವೆನು ಬಹು। ಸಾತಿಶಯದೆ ಮುನ್ನ ॥ 1 ॥
ಕೊಡುಕೊಡು ನೀನಿಂದೆನಗಪ್ಪಣೆಯನು। ನಡೆಸುವೆ ನಾನದನು॥
ಮೃಡ ಹರಿ ಸುರಪತಿ ಜಡಜಜ ಮುಖ್ಯರು। ತಡೆದರು ನಾ ಬಿಡೆನು ॥ 2 ॥
ಎಂದೆನುತವನ್ನೆತಂದಾ ಮುನಿಪಗೆ। ವಂದಿಸಿ ವಿನಯದಲಿ॥
ನಿಂದಿರೆ ಕುಂಭಜನೆಂದನು ತನಯನ। ನಂದದಿ ಪರಸುತಲಿ ॥ 3 ॥

ರಾಗ ಮಧು ಮಾಧವಿ – ತ್ರಿವುಡೆ ತಾಳ

ದುರುಳ ಸಂಕುಲವೆಲ್ಲ ಸೇರುತ। ಧರೆಯ ಸುಜನರನ್ನೆದೆ ಪೀಡಿಸು।
ತಿರಲವರ ಕೊಲ್ಲಲ್ಕೆ ನಿನ್ನನು। ಭರದಿ ಸೃಜಿಸಿದೆ ತರಳನೆ ॥ 1 ॥
ಸದಮಲದ ಖಡ್ಗವನಿದನುನಾ। ನಧಿಕ ತಪದಿಂ ಪಡೆದೆನಸುರರ।
ವಧೆಗೆನುತಲಿದು ಕರದೊಳಿರೆ ಬಂ। ದೊದಗುವುದು ಧುರ ವಿಜಯವು ॥ 2 ॥
ತೆರಳು ನೀನೀ ವರಕಠಾರಿಯ। ಕರದೊಳಾಂತರಿವರ್ಗವನು ನೆರೆ।
ತರಿಯೆನುತಲದನಿತ್ತು ಪರಸಲು। ಧುರಕೆ ಪೊರಟನು ಶೀಘ್ರದಿ ॥ 3 ॥

(ಘೋರರೂಪಿ * ಇಲ್ವಲ)

ರಾಗ ಸಾವೇರಿ – ಮಟ್ಟೆ ತಾಳ

ಬರ್ಪ ಘೋರ ರೂಪವನ್ನು ಕಾಣುತಿಲ್ವಲ।
ದರ್ಪದಿಂದೆ ಮುಂದೆ ಬಂದು ನುಡಿದನೆಲೆ ಭಲಾ॥
ಸರ್ಪಶಯನನಂತೆ ತೋರ್ಪ ನೀನದಾರೆಲಾ।
ದರ್ಪಕಾರಿಯಾದೊಡಿಂದು ಬೆದರೆನಿದು ಭಲಾ ॥ 1 ॥
ಎನ್ನನರಿತು ನಿನಗೆ ಲಾಭವೇನು ದನುಜನೆ।
ನಿನ್ನ ಕೊಲ್ವ ಮೃತ್ಯುವಾನು ತಿಳಿಯೊ ಬೇಗನೆ॥
ಪನ್ನತಿಕೆಯ ತೋರ್ಪ ಬಯಕೆಯಿದ್ದೊಡೆನ್ನನೆ।
ಮುನ್ನ ಕರೆಯೆನಲ್ಕೆ ದನುಜ ನುಡಿದ ಘಳಿಲನೆ ॥ 2 ॥
ಇಂತು ನೀನು ಪೇಳ್ವೊಡಾನು ಬೆದರಲಾರೆನು।
ಕಂತುಹರನ ಭೃತ್ಯನಹೆನು ಮೃತ್ಯುವೆನ್ನನು॥
ಚಿಂತಿಸಲ್ಕಸಾಧ್ಯವೀಗ ನೀನು ಸುಳ್ಳನು।
ನಿಂತು ನುಡಿದೊಡಾನು ಬೆದರೆ ನೆಂದು ಬಡಿದನು ॥ 3 ॥

(ಇಲ್ವಲನ ಸೋಲು)

ವಾರ್ಧಿಕ ಷಟ್ಪದಿ

ಇಂತಿಲ್ವಲನು ತನ್ನ ನಿಖಿಲಾಯುಧಂಗಳ್ ಸ।
ಮಂತು ತೀರಲ್ಬಳಿಕ ಜಯದಾಸೆಯಂ ತೊರೆದು।
ಚಿಂತೆವೆತ್ತನುವರವನುಳಿದೋಡಿ ಸಾಗರದೊಳಡಗಲಳಿದುಳಿದ ಖಳರು॥
ಸಂತಸವನುಳಿದು ಕಂಡೆಡೆಗೋಡಿ ಬಳಿಕಲ।
ತ್ಯಂತ ಭಯದಿಂ ಶರಧಿಯೊಳಗವಿತರೆಂದು ವಿಲ।
ಯಾಂತ ಕೋಪಮಘೋರ ರೂಪನರಿತಿನ್ನೇವೆನೆಂದೆನಲ್ ಮುನಿಯೊರೆದನು॥

ಸಾಂಗತ್ಯ – ರೂಪಕ ತಾಳ

ಇದಕೆ ಚಿಂತಿಪುದೇತಕುದಧಿಯೊಳವಿತಿರ್ಪ।
ಮದಮುಖರನು ಕೊಲಲೆಂದು॥
ಸದಮಾಲಾಂಬುಧಿಯೊಳುಳ್ಳುದಕವನೆಲ್ಲವ।
ಮುದದಿಂದೆ ಕುಡಿವೆ ನಾನಿಂದು ॥ 1 ॥
ಒಡನೆಯೆ ನೀನು ಮುಂದಡಿಯಿಟ್ಟು ದನುಜನ। ಕೆಡಹುತೆ ಭೂಭಾರವನ್ನು॥
ಕಡುಹಿನಿಂ ಕಳೆಯುತೆ ಪೊಡವಿಯ ಪೊರೆಯೆನೆ।
ಪೊಡಮಡುತೊಪ್ಪಿದನವನು ॥ 2 ॥

ಭಾಮಿನೀ ಷಟ್ಪದಿ

ಇಂತು ನಿಶ್ಚೈಸುತ್ತೆ ಬಹುಮುದ। ವಾಂತು ಬಳಿಕವರಿರ್ವರಾಕ್ಷಣ।
ನಿಂತರಾ ಶರನಿಧಿಯ ತೀರದೊಳಲ್ಲಿ ಮುನಿ ಮತ್ತೆ॥
ಕಂತುಹರನನು ನೆನೆದು ಜಲಧಿಯ। ನಂತ ಜಲವನು ಕರೆಯಲಾಕ್ಷಣ।
ಬಂತಖಿಲ ಜಲವವನ ಬೊಗಸೆಗೆ ಬಿಂದು ರೂಪಿನಲಿ॥

ಕಂದ ಪದ್ಯ

ಅದನಾಕ್ಷಣದೊಳ್ ಕುಡಿಯುತೆ। ಮದಮುಖರಂ ಕೊಲ್ಲುದೆಂದು ಕುಂಭಜನೊರೆಯಲ್॥
ಮದವಳಿದಿಲ್ವಲನೈತಂ। ದೊದರುತೆ ಘನ ಘೋರ ರೂಪಿಯೊಡನಿಂತೆಂದಂ॥

(ಇಲ್ವಲ * ಘೋರರೂಪಿ)

ರಾಗ ಭೈರವಿ – ಏಕ ತಾಳ

ಬಂದೆಯೊಭೀಕರ ರೂಪಿ। ರಣ । ಕೆಂದಿಲ್ಲಿಗೆ ಬಹು ಪಾಪಿ॥
ಕೊಂದಿಕ್ಕುವೆ ನಾನೀಗ। ನಡೆ । ಹಿಂದಕೆ ಭಯವಿರೆ ಬೇಗ ॥ 1 ॥
ಅರಿತಿಹೆ ನಿನ್ನಯ ಬಲವ। ಸಂ । ಗರದೊಳು ಬೆದರುತೆ ಜಲವ॥
ತ್ವರಿತದೆ ಪೊಕ್ಕಿಹ ಹೇಡಿ। ಪದ । ಕೆರಗುತೆ ನೀ ಬದುಕೋಡಿ ॥ 2 ॥
ನಿನ್ನನು ಕೊಲ್ಲುತೆ ಮುನಿಯ। ತಲೆ । ಯನ್ನುರುಳಿಸಿ ನಾ ಮನೆಯ॥
ಚೆನ್ನಾಗಿಯೆ ಸೇರುವೆನು। ಭಯವಿನ್ನಿರೆ ನಡೆನಡೆ ನೀನು ॥ 3 ॥
ಆದೊಡೆ ನೋಡುವೆನೆಂದು। ಖಳ । ಮೋದಲು । ತಡೆಯುತೆ ನಿಂದು॥
ಕಾದಿದರವರೆಡೆಬಿಡದೆ। ಮುಂ । ದಾದರು ಪರಿಭವ ಪಡದೆ ॥ 4 ॥

(ಇಲ್ವಲನ ವಧೆ)

ಭಾಮಿನೀ ಷಟ್ಪದಿ

ಬಳಿಕ ಸರಿಮಿಗಿಲೆಂಬ ತೆರದೊಳು। ಕೊಳುಗುಳವನೆಸಗುತ್ತಲಿಲ್ವಲ।
ನಳವಳಿಯೆ ಘನ ಘೋರ ರೂಪನು ಖಡ್ಗವನು ನೆಗಹಿ॥
ಖಳನ ತಲೆಯನು ಕಡಿಯುತಾತನ। ಬಳಗದವರೆಲ್ಲರನು ಕೊಲ್ಲಲು।
ಘಳಲನಾ ಸುಮನಸರು ಸುಮ ವೃಷ್ಟಿಯನು ಸುರಿಸಿದರು॥

ರಾಗ ಮಧ್ಯಮಾವತಿ – ತ್ರಿವುಡೆ ತಾಳ

ಇದನು ಕಂಡಾ ಮುನಿಯು ತನ್ನಯ।
ಹೃದಯದೊಳು ಸಂತಸವ ತಾಳುತೆ।
ವಿಧವಿಧದೊಳಾತ್ಮಜನ ಮನ್ನಿಸು।
ತಧಿಕ ಮಮತೆಯೊಳೊರೆದನು॥ ಸದಯನಾಗಿ ॥ 1 ॥
ತರಳ ನೀನಿಂದಧಿಕ ದುಷ್ಟರ। ತರಿದು ಭೂಭಾರಾಪಹಾರದ।
ಪರಮ ಕಾರ್ಯವ ಗೆಯ್ದು ಸುಜನರ। ಪೊರೆದು ಪುಣ್ಯವ ಪೊಂದಿದೆ॥
ಧರೆಯೊಳಿಂದು ॥ 2 ॥
ಮದಮುಖರ ಕೊಲಲೆಂದು ನಾನಿಂ।
ದುದಧಿಯನು ಕುಡಿದಿರ್ಪೆನದನೀ।
ಗುದಕ ಕುಂಭದ ಜಲವನೆರೆಯುತೆ। ಮೊದಲಿನಂತೆಯೆ ಗಯ್ವೆನು॥
ಮುದದೊಳೀಗ ॥ 3 ॥

ಇರುತಿರೆನ್ನೊಡನಿನ್ನು ನೀನನ। ವರತ ವಾರಿಗು ಕಾಣಿಸದವೊಲು।
ಕರೆಯೆ ಬರ್ಪುದು ಜವದೊಳೆನಲವ।
ನೆರಗುತೊಪ್ಪಿದನಾಕ್ಷಣ॥ ಹರುಷದಿಂದ ॥ 4 ॥

ಭಾಮಿನೀ ಷಟ್ಪದಿ

ಆನಕನಿಂದಪ್ಪಣೆಯ ಪಡೆಯುತ। ಲನಘವಾಗಿಹ ಘೋರ ರೂಪನು।
ವಿನಯದಿಂದಲದೃಶ್ಯ ರೂಪವನಾಂತು ವಹಿಲದಲಿ॥
ಮುನಿಯ ಸೇವೆಯನೆಸಗುತಿರಲಾ। ಘನಮಹಿಮ ಕುಂಭಜನು ತೀರ್ಥಾ।
ಟನೆಯ ನೆಸಗುತೆ ಬಂದನಾ ಸಹ್ಯಾದ್ರಿ ಸಾನುವಿಗೆ॥

ಕಾವೇರೀ ಮಾಹಾತ್ಮ್ಯೆ
(ಕವೇರ ಮುನಿಯ ಪ್ರವೇಶ)
ರಾಗ ಭೈರವಿ – ಝಂಪೆ ತಾಳ

ಇತ್ತಲಾ ಬ್ರಹ್ಮಗಿರಿಯುತ್ತುಂಗ ಶಿಖರಿಯಲಿ।
ಕೃತ್ತಿವಾಸನ ತಪವನೆಸಗುತತಿ ಹಿತದಿ॥
ಮತ್ತಾ ಕವೇರ ಮುನಿಪೋತ್ತಮನು ತಾನೊರ್ಮೆ।
ಚಿತ್ತದೊಳು ಯೋಚಿಸುತಲಿರ್ದನತಿಶಯದಿ ॥ 1 ॥
ಹರನ ಭಜಿಸುತಲೊಲಿಸಿ ಧರೆಗೆ ಹಿತವನು ಗೈವ।
ವರಸುಪುತ್ರಿಯನು ಪಡೆದೊಡನೆ ಬಹುಮುದದಿ॥
ಪೊರೆದು ಕಾವೇರಿಯಂಬುರುತರದ ನಾಮದಿಂ।
ಕರೆದು ಪೆಸರಿಟ್ಟೆನಾನಧಿಕ ಸಂಭ್ರಮದಿ ॥ 2 ॥
ಇವಳೀಗ ಬಳೆದು ನವಯುವತಿಯೆನಿಸಿರ್ಪಳೀ।
ಕುವರಿಗೊಪ್ಪುವ ವರನನರಸಿ ಮದುವೆಯನು॥
ಜವದಿಂದೆ ಗೆಯ್ಯಬೇಕವನಿಯೊಳಗಾರಿಹರು।
ಭುವನನುತ ಮಹಿಮರೆಂದೆನುತೆ ಯೋಚಿಪೆನು ॥ 3 ॥

ಭಾಮಿನೀ ಷಟ್ಪದಿ

ಆ ತಪೋಧನ ವರಕವೇರಕ। ನೀತೆರದೆ ಯೋಚಿಸುತೆ ಬಳಿಕ ಮ।
ಹಾತಿಶಯ ಸುಜ್ಞಾನ ದೃಷ್ಟಿಯೊಳೀಕ್ಷಿಸಲ್ಕೊಡನೆ॥

ಖ್ಯಾತ ಕಲಶಜನೊರ್ವನೇ ತನುಜಾತೆಗೊಪ್ಪುವ ವರನೆನುತೆ ತಿಳಿ।
ದಾತನಾಕ್ಷಣ ಸುತೆಯ ಕರೆದರುಹಿದನು ಮನದಿರವ॥

(ಕಾವೇರಿಯ ಪ್ರವೇಶ)

ರಾಗ ಮಧುಮಾಧವಿ – ಏಕ ತಾಳ

ಮಗಳೆ ಬಾ ಸನಿಹಕೆ ಕೇಳೆನ್ನ ಮಾತನು।
ನಗುಮೊಗದಿಂದಿರ್ದು ಮುದವಾಂತು ನೀನು ॥ ಪ ॥
ಮಿಗೆ ನಮ್ಮ ಮಲ್ಲಿಕಾ ಲತೆಯನು ನಾನು।
ಸೊಗದಿಂದ ಮಾಮರಕೀವೆನೆಂಬುದನು॥
ಬಗೆಯೊಳು ನಿರ್ಧರಿಸಿದೆನದಕಿನ್ನು।
ಸುಗುಣೆ ನೀನೀಯಬೆಕೊಪ್ಪಿಗೆಯನ್ನು ॥ 1 ॥

ರಾಗ ಕಲ್ಯಾಣಿ – ಝಂಪೆ ತಾಳ

ಪಿತನೆ ನೀನೊರೆದ ನುಡಿಯರಿಯದಾಯ್ತಿಂದು।
ಹಿತದಿಂದೆ ತಿಳಿಸು ನೀನೆನಗೆ ಗುಣಸಿಂಧು॥
ನವಮಲ್ಲಿಕಾಲತೆಯ ಮಾಮರದ ಮದುವೆ।
ಸವನಿಪುದೆನಿಪ್ಪ ಸಂಗತಿಯು ತಾ ನಿಜವೆ ॥ 1 ॥
ಈ ಮದುವೆಗೊಪ್ಪಿಗೆಯ ನಾನೀಯಬೇಕೆ।
ಸಾಮದಿಂ ಪೇಳ್ವುದೆನಗಿದಿದಕೆ ಮರೆಯೇಕೆ ॥ 2 ॥
ನಿನ್ನ ನಿಶ್ಚಯಕೆನ್ನತಡೆಯಿಹುದೆಯೆಂದು।
ಬಿನ್ನವಿಸಿ ಮಣಿದ ಸುತೆಗವನೊರೆದನಂದು ॥ 3 ॥

ವಾರ್ಧಕ ಷಟ್ಪದಿ

ತರಳೆ ಕೇಳನ್ನ ಗೇಹೋದ್ಯಾನದೊಳ್ ಬಳೆದ।
ಪರಮ ವಾತ್ಸಲ್ಯಯುತೆಯೆನಿಪ ನೀನೇ ಮೆರೆವ।
ವರಮಲ್ಲಿಕಾಲತೆಯೆನುತ್ತೆ ಬಗೆದಿರ್ಪೆನಿಂದೀ ಬ್ರಹ್ಮಗಿರಿಗೆ ಬಂದ॥
ಗುರುಮೂರ್ತಿ ಕುಂಭಜನೆ ನಿನಗೆ ತಕ್ಕವನೆಂದು।
ಪರಿಗಣಿಸುತೀ ಮಾಮರಕೆ ಮಲ್ಲಿಕಾಲತೆಯ।
ಪರಿಣಯವ ಗೆಯ್ವೆನೆನಲೊಡನವಳು ಮುಗುಳುನಗೆಯಿಂದಿತ್ತಳೊಪ್ಪಿಗೆಯನು॥

(ಅಗಸ್ತ್ಯರಲ್ಲಿಗೆ ಕವೇರನ ಆಗಮನ)

ಭಾಮಿನೀ ಷಟ್ಪದಿ

ತನಯೆಯಿಂದೊಪ್ಪಿಗೆಯ ಪಡೆಯುತೆ। ಮುನಿಕವೇರಕನೊಡನಗಸ್ತ್ಯನ।
ಸನಿಹಕೈತಂದೆರಗಲಾತನನೆತ್ತಿ ಮನ್ನಿಸುತೆ॥
ವಿನಯದಿಂ ನಡೆತಂದ ಕಾರ್ಯದ। ಘನತೆಯೇನೆನಲಾ ಕವೇರಕ।
ನನುನಯದೊಳುಸುರಿದನು ವಿನಮಿತ ಭಕ್ತಿ ಭಾವದಲಿ॥

ರಾಗ ನವರೋಜು – ಏಕ ತಾಳ

ಮುನಿಪಾಲಾ ದಯವಿಟ್ಟು ಕೇ । ಳೆನುವುದನೂ ಕಿವಿಗೊಟ್ಟು॥
ಮನದೊಲವಿನೊ। ಳೆಮ್ಮನು ಪರಿಪಾಲಿಸೆ।
ಮನೆಗೈ ತರಬೇ। ಕೆನುವೆನು ನಿನ್ನೊಳು ॥ 1 ॥
ಬರುವೆನು ನಾ ನಿನ್ನೊಡನೆ। ಬೇ । ಸರಿಸದಿರೀಗೆನ್ನೊಡನೆ॥
ತ್ವರಿತದೊಳೇಳೆಂ। ದೊರೆಯುತ ಮೈತ್ರಾ
ವರುಣಿಯು ಪೊರಟನು। ಭರದಿಂದಾಕ್ಷಣ ॥ 2 ॥

ಸಾಂಗತ್ಯ – ರೂಪಕ ತಾಳ

ಬಂದ ಮುನೀಶನ ಚಂದದಿಂ ಕರೆತಂದು। ಮಂದಿರದೊಳಗಾಸನದೊಳು॥
ಹೊಂದಿದಾನಂದೊಳಂದು ಕುಳ್ಳಿರಿಸುತೆ। ವಂದಿಸಿದನು ವಿನಯದೊಳು ॥ 1 ॥
ಬಳಿಕರ್ಘ್ಯ ಪಾದ್ಯಾದಿಗಳನಿತ್ತು ಮನ್ನಿಸಿ। ತಳುವದೆ ಮಂಗಳಾರತಿಯ॥
ಬೆಳಗುವಾತನ ಕಂಡು ಘಳಿಲನೆ ತೋಷವ।
ಗೊಳುತೊರೆದನು ಮುನಿರಾಯ ॥ 2 ॥

ರಾಗ ಬೇಗಡೆ – ಆದಿ ತಾಳ

ಅಧಿಕ ತೊಷವನಾಂತೆನೀಗ ಕವೇರ।
ವಿಧಿವಿಹಿತದೊಳು ನೀನಿತ್ತಸತ್ಕಾರ॥
ಆದ ಕಾರಣ ನಿನ್ನ ಮನದಿಷ್ಟವನ್ನು।
ಮೋದದಿಂದರುಹಯ್ಯ ನಡೆಸುವೆನದನು॥

(ಕಾವೇರಿಯ ಮದುವೆ ಪ್ರಸ್ತಾಪ)

ವಾರ್ಧಕ ಷಟ್ಪದಿ

ಕಲಶಸಂಭವ ಲಾಲಿಸಭವನತಿ ದಯೆಯಿಂದೆ।
ಜಲಜಾಯತಾಕ್ಷಿ ಕಾವೇರಿಯೆಂಬಾತ್ಮಜೆಯ।
ನೊಲವಿನಿಂ ಪಡೆದೆನೀ ಭುವನದುದ್ಧಾರಾರ್ಥಮಾಕೆಗನುರೂಪನಾಗಿ॥
ಕುಲಶೀಲ ಸುಗುಣಯುತನೆನಿಸಿ ಬಂದಿರ್ಪ ನಿನ।
ಗೊಲಿದೆನ್ನ ನಂದನೆಯ ನೀವೆನೀ ಕನ್ನಿಕೆಯ।
ನೊಲವಿನಿಂ ಸ್ವೀಕರಿಸಿ ಲೊಕಹಿತವೆಸಗಬೇಕೆನಲಗಸ್ತ್ಯಂ ನುಡಿದನು॥

ರಾಗ ಸೌರಾಷ್ಟ್ರ – ತ್ರಿವುಡೆ ತಾಳ

ವರಕವೇರಕ ಕೇಳು ಮನೆಯೊಳ। ಗಿರುತಿಹರು ಸತಿಸುತರೆನಗೆ ನೀ।
ನರಿಯದೀ ಪರಿಣಯವ ಗೈವುದು। ಸರಿಯೊ ಪೇಳು ॥ 1 ॥
ಒಂದು ಮೋರೆಗೆ ತಿಲಕವೆರಡಿರ। ಲಂದವಹುದೇ ಹೇಳು ಯೊಚಿಸಿ॥
ಮುಂದಣುಚಿತವನೆಸಗುವುದುತಾ। ನಂದವಲ್ತೆ ॥ 2 ॥
ತರಳೆಯೊಡನಿದನರುಹಲಾಕೆಯು। ವರಿಸಲೊಪ್ಪಿಗೆಯೀವಳೇಯೆಂ।
ದರಿತು ಪೇಳೆನಲಾಕವೆರಕ। ನೆರಗಿ ನುಡಿದ ॥ 3 ॥

ರಾಗ ಕೇದಾರಗೌಳ – ಅಷ್ಟ ತಾಳ

ನಿನ್ನ ಯೋಗ್ಯತೆಯನು ಮುನ್ನವೆ ತಿಳಿದುನಾ। ನೆನ್ನ ನಂದನೆಯೊಡನೆ॥
ನಿನ್ನೆಯೆ ಕೇಳಲು ತನ್ನೊಪ್ಪಿಗೆಯನಿತ್ತ। ಳಿನ್ನೀಗ ಬಿಡು ಯೋಚನೆ ॥ 1 ॥
ಏಕಮುಖಕ್ಕೆ ತಾನೇಕ ತಿಲಕ ಮುಖ್ಯ। ಲೋಕಮುಖಕ್ಕೆ ಸಾಕೆ॥
ಏಕ ತಿಲಕವಿದಕೇಕೆ ಚಿಂತಿಸುತಿಹೆ। ಲೋಕದುದ್ಧಾರವಕ್ಕೆ ॥ 2 ॥

(ಮದುವೆಗೆ ಒಪ್ಪಿಗೆ)

ಭಾಮಿನೀ ಷಟ್ಪದಿ

ಮುನಿಯೆ ಲಾಲಿಸು ದಾನವೀಯುವ। ಮನವು ನಿನಗಿರಲಿದನುಪೇಕ್ಷಿಪು।
ದನುಚಿತವು ಕೊಡು ನಿನ್ನ ಸುತೆಯನೆನಲ್ಕೆ ತೋಷದಲಿ॥
ವಿನುತ ಸುಹುಮೂರ್ತದೊಳು ತನಯೆಯ। ನನಘಗಿತ್ತು ವಿವಾಹವೆಸಗ।
ಲ್ಕನಿಮಿಷರು ಸುಮವೃಷ್ಟಿಯನು ಸುರಿಸಿದರು ಸಂತಸದಿ ॥ 1 ॥

ಪರಿಣಯದ ಸಮನಂತರದೊಳಾ। ಹರಿಯು ಪಾಲ್ಗಡಲಿನಲಿ ನೆಲೆಸಿದ।
ಪರಿಯೊಳಾ ಹರನುಮೆಯ ವರಿಸಿದ ಬಳಿಕ ಕೈಲಾಸ॥
ಗಿರಿಯೊಳಿರ್ದಂದದೊಳಗಸ್ತ್ಯನು। ಪರಮ ಸಂತೋಷದಲಿ ತನ್ನಯ।
ತರುಣಿಯೊಡನಾ ಬ್ರಹ್ಮಗಿರಿಯಲಿ ತಪವನೆಸಗಿದನು ॥ 2 ॥

(ಸುರಪದ್ಮನ ಓಲಗ)

ವಾರ್ಧಕ ಷಟ್ಪದಿ

ಇತ್ತಲಾ ಬ್ರಹ್ಮಗಿರಿಯನತಿ ದೂರದಶಿಖರ।
ದುತ್ತರದೊಳಿರ್ದ ವರಬ್ರಹ್ಮ ನಗರದೊಳು ದೈ।
ತ್ಯೋತ್ತಮಂ ಸುರಪದ್ಮನಿರ್ದನತಿ ವಿಭವದಿಂದಸುರ ಸಂಕುಲ ಸಹಿತಲಿ॥
ಚಿತ್ತಜಾರಿಯ ಭಕ್ತನೆನಿಸಿ ನಿರ್ಭೀತಿಯಿಂ।
ಮತ್ತನಾಗುತಲೊರ್ಮೆ ಸಕಲ ದನುಜರ ಬರಿಸಿ।
ಮತ್ತೆತಾನೊಡ್ಡೋಲಗವನಿತ್ತು ನುಡಿದನತಿ ತೋಷದಿಂದೆಲ್ಲರೊಡನೆ॥

ರಾಗ ಸೌರಾಷ್ಟ್ರ ತ್ರಿವುಡೆ ತಾಳ

ದನುಜವರ್ಯರೆ ಲಾಲಿಸಿರಿನಿಮ। ಗಿನಿತು ದಿನ ನಾನರಸೆನಿಸಿ ಕುಂ।
ಭಿನಿಯ ಪೊರೆದೆನು ವೈರಿಗಳ ತರಿ। ದನುವರದೊಳು ॥ 1 ॥
ಅಜನ ತಪದಿಂ ಮೆಚ್ಚಿಸುತೆ ಭೂ। ಭುಜರನೆಲ್ಲರ ಮಂತ್ರ ಮಾಯಾ।
ವ್ರಜದ ಬಲದಿಂ ಗೆಲುವ ವರವನು। ನಿಜದಿ ಪಡೆದೆ ॥ 2 ॥
ಎನ್ನ ಮಾಯಾ ಮಂತ್ರವನು ಹರಿ। ಪನ್ನಗಾಭರಣರಿಗೆ ತಡೆಯುವ।
ಪನ್ನತಿಕೆ ತಾನಿರದು ಸುಜನರ। ನಿನ್ನು ಕೊಲುವೆ ॥ 3 ॥
ಎನಗೆ ಬೆಂಬಲವಾಗಿ ಬರ್ಪುದು। ದನುಜರೆಲ್ಲರು ಮಾಯೆಯಿಂದಾ।
ಮನುಜರನು ಸಂಹರಿಸಬೇಕೀ। ದಿನವೆ ಪೋಗಿ ॥ 4 ॥
ರೋಗ ಭಯ ದುರ್ಭಿಕ್ಷವನು ಬೂ। ಭಾಗದೊಳು ಪಸರಿಸುತ ಮಳೆಬೆಳೆ।
ಯಾಗದವೊಲೆಸಗುವುದು ಮಾಯೆಯೊಳೀಗ ನಾವು ॥ 5 ॥

(ಸಜ್ಜನರಿಗೆ ಉಪಟಳ)

ಭಾಮಿನೀ ಷಟ್ಪದಿ

ದುರುಳನಸುರರಿಗಿಂತನುಜ್ಞೆಯ। ನೊರೆದು ಕಳುಹಲ್ಕವರು ಬಂದೀ।
ಧರಣಿಯೊಳು ವಿಧವಿಧದ ಮಾಯಾ ಮಂತ್ರಜಾಲವನು॥

ಭರದಿ ಪಸರಿಸೆ ಸಕಲ ಸಜ್ಜನ। ರೊರಲಿ ಕಂಗೆಡಲವರ ಸತಿಯರು।
ಮರುಗುತ್ತೈತಂದೊರೆದರಾ ಕಾವೇರಿಯೊಡನವರು॥

(ಕಾವೇರಿಯಲ್ಲಿ ದೂರು)

ರಾಗ ಸುರುಟಿ – ರೂಪಕ ತಾಳ

ಅಮ್ಮಲಾಲಿ। ಸೆಮ್ಮ ನುಡಿಯ। ನೊಮ್ಮೆ ಮುದದಲಿ॥
ನಿಮ್ಮ ದಯೆಯೊ। ಳುಮ್ಮಳಗಳು। ಗಮ್ಮನೈದಲಿ ॥ 1 ॥
ಕುಂದಿ ಕಷ್ಟ। ಹೊಂದಿ ನಾವು। ಬಂದೆವಿಲ್ಲಿಗೆ॥
ಚಂದದಿಂದ। ಬಂದು ಪಾಲಿ। ಸಿಂದು ಮೆಲ್ಲಗೆ ॥ 2 ॥
ಮಳೆಯು ಯಿಲ್ಲ। ದಿಳೆಯ ಜನರು। ಬೆಳೆಯ ಬೆಳೆಸಲು॥
ತಿಳಿಯದ್ವೈಸೆ। ಕಳವಳವನು। ತಳೆವರೆತ್ತಲು ॥ 3 ॥
ಭೋಗ ಭಾಗ್ಯ। ನೀಗಿ ನಾವು। ರೋಗಿಯಾಗಿರೆ॥
ಬೇಗ ಪೊರೆ ಸ। ರಾಗದಿಂದ। ಲೀಗ ದಯವಿರೆ ॥ 4 ॥
ನೀನೆ ಧರೆಯ। ಮಾನವರನು। ಸಾನು ಮತದಲಿ॥
ತಾನೆ ಪೊರೆವ। ನೂನ ಕಾಮ। ಧೇನು ದಿಟದಲಿ ॥ 5 ॥

ರಾಗ ಕಾಪಿ – ಅಷ್ಟ ತಾಳ

ಸುದತಿಯರೆಲ್ಲರು ಕೇಳಿ। ದುಃಖ ।
ದುದಧಿಯೊಳ್ ಮುಳುಗದೆ ಧೈರ್ಯದಿಂದೇಳಿ॥
ಮುದದಿಂದ ನಿಮ್ಮನೆಲ್ಲರನು। ಬಾಧೆ ।
ಯೊದಗದ ತೆರದಿಂದೆ ಪೊರೆಯುವೆ ನಾನು ॥ 1 ॥
ಎನ್ನ ವಲ್ಲಭನೊಳು ಪೇಳಿ। ನಿಮ್ಮ ।
ಬನ್ನವ ಪರಿಹರಿಸುವೆನೀಗ ತಾಳಿ॥
ಇನ್ನೇಕೆ ಚಿಂತೆಯು ನಿಮಗೆ। ನೀವು ।
ಖಿನ್ನರಾಗದೆ ಬೇಗ ನಡೆಯಿರಿ ಮನೆಗೆ ॥ 2 ॥

(ಪತಿಯಲ್ಲಿ ಕಾವೇರಿಯ ನಿವೇದನೆ)

ಕಂದ ಪದ್ಯ

ಇಂತತಿ ಧೈರ್ಯವನೊರೆಯುತೆ। ಕಾಂತೆಯರಂ ಕಳುಹುತಾ ಕವೇರಜೆ ಜವದಿಂ॥
ಕಾಂತನ ಬಳಿಗೈದುತೆ ತ। ನ್ನಂತಸ್ಥವ ನೊರೆದಳೆರಗಿ ವಿನಯದೊಳಾಗಳ್॥

ರಾಗ ಧನಶ್ರೀ – ಅಷ್ಟ ತಾಳ

ಲಾಲಿಸು। ಕಾಂತ । ಲಾಲಿಸು॥ ಪ ॥
ಶೀಲವಂತೆಯರೆನ್ನೊಳೊರೆದ ಸಂಗತಿಯನು ॥ ಅನು ಪಲ್ಲವಿ ॥
ಧರೆಯೊಳು ಮಳೆಬೆಳೆಯಿಲ್ಲದೆ ಸಕಲರು।
ಬರಗಾಲದಿಂದತಿ ಸುಖ ಭೋಗ। ವಿಲ್ಲ ।
ದುರುತರ ಕಷ್ಟಕೆ ಬಲುಬೇಗ। ಸಿಕ್ಕಿ ।
ನರಳುತಲಿರ್ಪರು ಬಹು ರೋಗ। ಬಂದು ।
ನೆರೆದೀಗಳವರೆನ್ನೊಳೊರೆದಾಗ। ನಿಮ್ಮ ।
ಚರಣದೆಡೆಗೆ ಬರ್ಪ ವರಯೋಗ। ಬಂತು ।
ಕರುಣಿಸಿ ಪೊರೆ ಬೀರುತನುರಾಗ॥

ರಾಗ ಸುರುಟಿ – ಏಕ ತಾಳ

ರಮಣೀ ಮಣಿ ಕೇಳು। ವಿಷಯವ । ಗಮನಿಸಿ ನೀ ತಾಳು॥
ಸುಮಕೋಮಲೆ ವಿ। ಭ್ರಮೆಗೊಳದಿರು ಬಂ।
ದಮಿತಾನರ್ಥವು। ಸಮನಿಸಿತೆನುತಲಿ ॥ 1 ॥
ಎಲ್ಲಕು ಬರಬೇಕು। ಕಾಲವು । ತಲ್ಲಣವಿದು ಸಾಕು॥
ಸಲ್ಲದ ಕಾರ್ಯವ। ಮೆಲ್ಲನೆ ಗೆಯ್ದಾ। ರೆಲ್ಲಿಗೆ ಪೋಪರು। ಕೊಲ್ಲುವನಾ ಹರಿ ॥ 2 ॥
ಅದರಿಂ ನಾವಿದಕೆ। ಚಿಂತೋ । ದಧಿಯೊಳಗಿಂತೇಕೆ॥
ಮುದವಡಗುತೆ ಬೇ। ಗಿದಿಯಿಂ ಮುಳುಗುವು।
ದಿದು ನಿಷ್ಫಲವೆನೆ। ಸುದತಿಯು ನುಡಿದಳು ॥ 3 ॥

ರಾಗ ಮಧ್ಯಮಾವತಿ ತ್ರಿವುಡೆ ತಾಳ

ದೇವರೇ ಸರ್ವವನು ಗೈವುತೆ। ಸಾವಧಾನದೊಳಿಳೆಯನು॥
ಕಾವನೆಂದಾಶಿಪುದು ಸರಿಯೇ। ನಾವು ಗೈಯದದೇನನು॥ ಪ್ರಾಣ ಕಾಂತ॥
ಗಿರಿಯ ಮಣಿಸುತೆ ಕುಡಿದು ಶರಧಿಯ। ದುರುಳರನು ಸಂಹರಿಸಿದ॥
ವರಮಹಿಮಗಸದಳವಿದೆನಲೀ। ಧರೆಯೊಳಿದು ಹಾಸ್ಯಾಸ್ಪದ॥ ಪ್ರಾಣ ಕಾಂತ ॥
ಆದಕಾರಣ ನೀವು ಧರಣಿಯ। ಬಾಧೆಯನು ಪರಿಹರಿಸುತೆ॥
ಸಾದರದೊಳೆಲ್ಲರನು ಪೊರೆವುದು। ಮೇದಿನಿಯನುದ್ಧರಿಸುತೆ॥ ಪ್ರಾಣ ಕಾಂತ ॥

(ಕಾವೇರಿಗೆ ಸಮಾಧಾನ)

ವಾರ್ಧಕ ಷಟ್ಪದಿ

ಚರಣದೆಡೆಯೊಳು ಬಿದ್ದು ಪೊರೆವುದೆಂದಳಲುತ್ತ।
ಲಿರುವ ಮನದನ್ನೆಯನು ಕುರುಳ ನೇವರಿಸುತ್ತೆ।
ಕರವ ಪಿಡಿದೆತ್ತಿ ಮುನಿವರನುಸುರಿದನು ಮುದದೊಳಳಲದಿರು ರಮಣಿ ನೀನು॥
ಪರಮ ಸಂಧ್ಯಾ ಸಮಯ ಬರುತಿಹುದು ನಾನೀಗ।
ತೆರಳುವೆನು ನಿನ್ನ ಮನ ಮರುಕಮಂ ಕಳೆದು ಧರೆ।
ಯರಿಯೆ ಪಾಲಿಸುವೆನ್ನೆತರಲಿ ಸತ್ಕಾಲಮೆಂದೊರೆದು ನಡೆದನು ಶೀಘ್ರದಿ॥

ಪರಿವರ್ಧಿನೀ ಷಟ್ಪದಿ

ಇಂತು ಕವೇರಕ ತನುಜೆಯು ಮನದೊಳು। ಚಿಂತಿಸುತಿರುತಿರಲಾಕ್ಷಣ ಪೂರ್ವದಿ।
ಶಾಂತದೊಳರುಣೋದಯವಾಯ್ತೆನುತಲಿ ಹಕ್ಕಿಗಳುಲಿಯುತಿರೆ॥
ಸಂತಂ ಕುಕ್ಕಟ ರಾಜಂ ಶಬ್ದಿಸ। ಲಂತದನರಿತಾ ಕುಂಭಜನಾಕ್ಷಣ।
ಕಾಂತೆಯ ಬಳಿಗೈತರಲೆರಗಿದ ಸತಿಯೊಡನವನಿಂತೆಂದಂ॥

(ಕಾವೇರಿ, ಅಗಸ್ತ್ಯರ ಸಂಭಾಷಣೆ)

ಭಾಮಿನೀ ಷಟ್ಪದಿ

ತರುಣಿ ಕೇಳನುದಿನವು ನಾವಾ। ತರಣಿಯುದಯದೊಳೆದ್ದು ಜಲಜಾ।
ಕರದ ಬಳಿಗೈದುತಲಿ ಮಜ್ಜನವೆಸಗಿ ತೋಷದೊಳು॥
ಪರಮ ಸಂಧ್ಯಾವಂದನೆಯ ನೀ। ವರೆಗೆ ಗೈಯುತಲಿರ್ದುದಿಂದಿಗೆ।
ಮರೆಯಿತೇ ಪೇಳೆನಲು ವಂದಿಸಿ ನುಡಿದಳಿನಿಯನೊಳು॥

ರಾಗ ಕಾಪಿ – ಅಷ್ಟ ತಾಳ

ಪತಿದೇವ ಕೇಳೆನ್ನ ಮಾತ। ದುಃಖ । ದತಿಶಯದಿಂದಿರ್ಪೆನಿಂದು ವಿಖ್ಯಾತ॥
ಪ್ರತಿ ವಚನವನಾಡಲಾರೆ। ನಿನ್ನ । ಹಿತದಂತೆ ನಾನೀಗಳೈತರಲಾರೆ ॥ 1 ॥
ತನುವಿನಾರೋಗ್ಯವು ಕೆಟ್ಟು। ಹೀಗೆ । ಮನದೊಳು ಬೇಸರಕಿಂದೆಡೆಗೊಟ್ಟು॥
ಘನತರ ವೈರಾಗ್ಯವಾಂತು। ಸರ್ವ ।
ವನು ತೊರೆದೆನು ದುಃಖದಿಂದ ನಾನಿಂತು ॥ 2 ॥
ಬರಿದೇಕೆ ನೀನೆನ್ನ ಕರೆದು। ಚಿಂತಾ ।
ಶರಧಿಯೊಳದ್ದಿ ತೋಷವನ್ನೆದೆ ತೊರೆದು॥

ತರತರದಿಂ ಪೀಡಿಸುವುದು। ಬೇಡ ।
ಬರಲಾರೆನೆನೆ ಮುನಿಯೊರೆದ ಪಲ್ಮೊರೆದು ॥ 3 ॥

ರಾಗ ಸೌರಾಷ್ಟ್ರ – ತ್ರಿವುಡೆ ತಾಳ

ನೀರೆ ನೀನೀ ತೆರದಿನಾನಾ। ಕಾರಣವನೊಡ್ಡುತಲಿ ಸುಮ್ಮನೆ।
ಬಾರದೇ ಕುಳಿತಿರಲು ಬಿಡುವೆನೆ। ಭೋರನೀಗ ॥ 1 ॥
ಧರ್ಮ ಕಾರ್ಯವ ಗೈವವನು ಸಹ। ಧರ್ಮಿಣಿಯನುಳಿಯುವುದು ವಿಹಿತವೆ।
ಕರ್ಮ ಬಾಹಿರನೆನಿಸುವನು ದುಃಷ್ಕರ್ಮದಿಂದೆ ॥ 2 ॥
ಬಾರೆನೆಂದರೆ ಬಿಡುವೆನೇಕಾ। ವೇರಿ ನಿನ್ನನು ನೀರನಾಗಿಸಿ।
ಸೇರಿಸುವೆನೀ ಕರಕಮಂಡಲ। ವಾರಿಯಲ್ಲಿ ॥ 3 ॥

(ಕಾವೇರಿ ನದಿಯಾಗಿ ಹರಿದುದು)

ವಾರ್ಧಕ

ಎಂದೊರೆದು ಕುಂಭಜನು ಬಳಿಕ ವನಿತೆಯನು ಜಲ।
ಬಿಂದುವಿನ ತೆರದಿಂದೆ ರೂಪಾಂತರಂ ಗೊಳಿಸು।
ತಂದದಿಂ ಕರಕಂಡಲದೊಳಿರಿಸುತೆ ಬಳಿಕ ವರಸರೋವರ ಸನಿಹಕೆ॥
ತಂದು ತೀರದೊಳಿರಿಸಿ ಜಲಕಿಳಿದು ಮೀಯುತಿರ।
ಲಂದು ವಿಘ್ನೇಶ್ವರನು ಹಂಸ ರೂಪಿಂದಲೈ।
ತಂದಾ ಕಮಂಡಲವ ಕೆಡಹಲಾಕ್ಷಣ ನದಿಯ ರೂಪಿಂದೆ ಪೊರಟಳವಳು॥

ಭಾಮಿನೀ ಷಟ್ಪದಿ

ಸ್ನಾನ ನಿತ್ಯಾಹ್ನಿಕವ ತೀರಿಸಿ। ಮಾನಿನಿಯ ಕರೆದೊಯ್ವೆನೆಂದಾ।
ಮಾನನಿಧಿ ನಿಜಕರಕಂಡಲ ವಿದ್ದೆಡೆಗೆ ಬಂದು॥
ಸಾನುನಯದಿಂದೀಕ್ಷಿಸಲ್ಕದು। ತಾನಿರಿಸಿದಂತಿರದೆ ಬಿದ್ದು ನಿ।
ಧಾನದಿಂ ಪ್ರವಹಿಸುವುದನು ಕಂಡೊಡನೆ ಯೋಚಿಸಿದ॥

(ಅಗಸ್ತ್ಯರ ಕೋಪ)

ಸಾಂಗತ್ಯ – ರೂಪಕ ತಾಳ

ಯಾರಿಂದು ಬಂದೆನ್ನ ನೀರಿನ ಪಾತ್ರೆಯ।
ನೀರೀತಿಯುರುಳಿಸುತೀಗ॥

ಚೋರರಂದದೊಳಿಲ್ಲಿ ಭಾರಿ ಮೋಸವಗೆಯ್ದು।
ಸಾರಿ ಪೋದರೊ ಬಲು ಬೇಗ ॥ 1 ॥
ನೀರೆಯೆನ್ನವಳಿಂದು ನೀರಾಗಿ ಪರಿದಳು। ಭೂರಿನದಿಯ ರೂಪವಾಂತು॥
ಘೋರನೀಕೆಯನವಿಚಾರಿಗಳಾರು ಕೈ। ಮೀರುವಂತೆಸಗಿದರಿಂತು ॥ 2 ॥
ಜಲ ಪಾತ್ರೆಯನ್ನಿಟ್ಟ ನೆಲದಿಂದಲುರುಳಿಸಿ। ಸಲಿಲವ ನೆಲಕೆ ಬೀಳಿಸಿದ॥
ಬಲು ಮೋಸಗಾರನ ನೆಲೆಯನಾಕ್ಷಣ ತಪೋ।
ಬಲದಿಂದಲರಿತು ಕೋಪಿಸಿದ ॥ 3 ॥

ರಾಗ ಸೌರಾಷ್ಟ್ರ – ತ್ರಿವುಡೆ ತಾಳ

ಅರರೆ ಹಂಸನ ರೂಪವನು ನೆರೆ। ಧರಿಸಿ ಗಜಮುಖನೆನ್ನ ಪಾವನ।
ಕರಕಮಂಡಲವನ್ನು ಧರಣಿಯೊ। ಳುರುಳಿಸಿದನೆ ॥ 1 ॥
ಇಂತವನು ಮೊಸವನು ಗೈಯುತ। ಕಾಂತೆಯನು ಕಡಲೆಡೆಗೆ ಕಳುಹಿಸು।
ತಂತರಿಸಿದನೆ ಧೈರ್ಯದಿಂದೆ ಮ। ಹಾಂತನಾಗಿ ॥ 2 ॥
ಬಿಡೆಬಿಡೆನು ನಾನಿವನನೀಕ್ಷಣ। ಸುಡುವೆ ಶಾಪವನಿತ್ತೆನುತೆ ಪಲ್।
ಗಡಿಯೆ ಬಂದಾತನೊಳು ನುಡಿದನು। ಮೃಡನ ಸುತನು ॥ 3 ॥

(ಗಣಪತಿ ಪ್ರತ್ಯಕ್ಷ)

ರಾಗ ಕಾಪಿ – ಅಷ್ಟ ತಾಳ

ಮುನಿವರ್ಯ ಕೇಳೆನ್ನ ನುಡಿಯ। ನಿನ್ನೊ।
ಳೆನುವೆನು ನಡೆದಿರ್ಪ ಸರ್ವ ಸಂಗತಿಯ ॥ ಪ ॥
ದನುಜನು ಸುರಪದ್ಮನೀಗ। ಸರ್ವ।
ಜನರನು ಮಂತ್ರಮಾಯಕದಿಂದ ಬೇಗ॥
ಮನಬಂದ ತೆರದಿ ಕೊಲ್ಲುವನು। ದುಷ್ಟ।
ತನದಿಂದ ಬರಗಾಲವನು ಬರಿಸಿಹನು ॥ 1 ॥
ಅವರ ಬಿನ್ನಹವನ್ನು ಕೇಳಿ। ಬೇಗ।
ಭುವನದ ಜನರೊಳು ದಯೆಯನು ತಾಳಿ॥
ತವ ಜಲಪಾತ್ರೆಯನಿಲ್ಲಿ। ನಾನು।
ಜವದಿಂದೆ ಕೆಡಹಿದೆ ಹಂಸ ರೂಪಿನಲಿ ॥ 2 ॥
ಇದಕೀಗ ಕಾರಣವಿಹುದು। ನಿನ್ನ।
ಸುದತಿಯ ಜನ್ಮ ಸಾರ್ಥಕವೆನಿಸುವುದು॥

ಪದುಳದೆ ದುರುಳರ ನಾಶ। ಬೇಗ ।
ನೊದಗಿ ನಿನ್ನಿಂದಪ್ಪುದಿಳೆಗೆ ಸಂತೋಷ ॥ 3 ॥
ಇನ್ನೀಗ ನೀನು ಚಿಂತಿಸದೆ। ದುಷ್ಟ ।
ರನ್ನು ಸಂಹರಿಸುವುದೈದೆ ಯೋಚಿಸದೆ॥
ನಿನ್ನ ತಪೋಬಲ ಹೊರತು। ಸಾಗ ।
ದನ್ಯರಿಂದೀ ಕಾರ್ಯವೆಂದೀಗಳರಿತು ॥ 4 ॥

(ಕೋಪ ಉಪಷಮನ)

ಕಂದ ಪದ್ಯ

ಮುನಿಪತಿಯೊಪ್ಪಿದೊಡೊಡನೆಯೆ।
ಬೆನಕಂ ನಡೆಯಲ್ಕೆ ಕುಂಭ ಸಂಭವನಾಗಳ್॥
ಮನದೊಲವಿಂ ಕರೆಯಲ್ ಬಂ।
ದನುನಯದಿಂ ಘೋರರೂಪನೆರಗುತೆ ನುಡಿದಂ॥

(ಘೋರರೂಪಿ ಪ್ರತ್ಯಕ್ಷ)

ರಾಗ ಮಾರವಿ – ಏಕ ತಾಳ

ಏತಕೆ ಕರೆದಿಹೆ ತಾತನೆ ನೀನಿಂ। ದೀ ತರಳನನೀಗ॥
ಪ್ರೀತಿಯೊಳೊರೆಯುತ ಮಾತೆನಗಿತ್ತರೆ। ನಾ ತಳುವದೆ ಗೈವೆ ॥ 1 ॥
ಕೊಡುಕೊಡು ನೀನಿಂದೆನಗಪ್ಪಣೆಯನು। ಮೃಡ ಹರಿ ಕಮಲಜರ॥
ಕಡೆಗಣಿಸುತೆ ನಿನ್ನಾಜ್ಞೆಯ ನಡೆಸುವೆ। ನೊಡನೆಯೆ ಶೀಘ್ರದಲಿ ॥ 2 ॥
ಆರೆಸಗಿದರಹಿತವನೆಂದೆನ್ನೊಳು ಘೋರನೆ ಪೇಳಿದೊಡೆ।
ಸಾರುತೆ ಕೊಲುವೆನೆನಲ್ಕಾ ಮುನಿಪನು। ಧೀರನೊಳಿಂತೆಂದ ॥ 3 ॥

ರಾಗ ಬೇಗಡೆ – ಏಕ ತಾಳ

ಕಂದ ಲಾಲಿಸು ಚಂದದಿಂದೀಗ। ನಾನೊರೆವ ವಚನವ ।
ನೊಂದನುಳಿಯದೆ ಮುಂದೆ ಬಲು ಬೇಗ॥
ಮಂದಮತಿ ಖಳ ವೃಂದ ಸುಜನರ। ಮುಂದುಗೆಡಿಸುತೆ ನಿಂದು ಬಹುವಿಧ।
ದಿಂದ ಮೆರೆಯುವರೆಂದು ತಿಳಿದೆನು॥ ಕೊಂದು ಬಾ ನೀನಿಂದು ದುರುಳರ॥

ಕಂದ ಪದ್ಯ

ಎಂದಾಜ್ಞೆಯನೀಯಲ್ ಮುನಿ।
ವಂದ್ಯಂಗಭಿನಮಿಸಿ ಘೋರರೂಪಾಖ್ಯಂ ತಾ।
ನಂದಾ ಸುರಪದ್ಮನ ವರ।
ಮಂದಿರದೆಡೆಗೈದಿ ಧುರಕೆ ಕರೆದಂ ಖಳರಂ॥

ಭಾಮಿನೀ ಷಟ್ಪದಿ

ಘೋರರೂಪನ ದನಿಯನಾಲಿಸಿ। ವೀರ ಸುರ ಪದ್ಮಾಖ್ಯ ದಾನವ।
ನಾರಿದೆಂದಾರ್ಭಟಿಸಿ ಖಳಪರಿವಾರವನು ನೆರಹಿ॥
ಭೋರನಾಕ್ಷಣ ಬಂದು ಬಹುಗಂ। ಭೀರ ತರದಿಂ ತಡೆದು ನುಡಿದನು।
ದಾರಬಲ ಮಹಿಮಾನ್ವಿತನೊಳತಿ ಧೈರ್ಯಯುತನಾಗಿ॥

(ಸುರಪದ್ಮ * ಘೋರರೂಪಿ)
ರಾಗ ತೋಡಿ – ಅಷ್ಟ ತಾಳ

ಎಲ್ಲಿಗೆ। ಪೋಪು । ದೆಲ್ಲಿಗೆ ॥ ಪ ॥
ಎಲ್ಲಿಗೆ ಪೋಗುವೆ ನಿಲ್ಲೊ ಕುರೂಪಿ।
ಮಲ್ಲತನವ ತೋರೆ ಕೊಲ್ಲುವೆ ಪಾಪಿ ॥ ಅನು ಪಲ್ಲವಿ ॥
ಬಂದೆನ್ನ ಮಂದಿರಕಿಂದೀಗ ನೀನು। ಮಂದಮತಿಯ ತೆರದಿಂ ಪೇಳ್ವುದೇನು॥
ಮುಂದಾಗಿ ಯುದ್ಧಕೆ ಬಂದರೆ ನಿನ್ನ। ಕೊಂದು ನಾ ಕೆಡಹುವೆ ಧೂರ್ತನೆ ಮುನ್ನ॥

ರಾಗ ಸೌರಾಷ್ಟ್ರ – ತ್ರಿವುಡೆ ತಾಳ

ಆನು ಖಳರನು ಕೊಲ್ವ ಮೃತ್ಯುಸ। ಮಾನನೆಂದೇ ಬಗೆಯೊ ಧೂರ್ತನೆ।
ದಾನವಾಂಬುಧಿ ವಡಬನಹೆ ಬಾ। ನೀನು ಧುರಕೆ ॥ 1 ॥
ಬಾರದಿರುವೆನೆ ಘೋರರೂಪಿಯೆ। ಮೀರಿ ನೀನೈತಂದು ಕರೆದರೆ।
ತೊರುವೆನು ನಿನಗಂತಕನ ಪರಿ। ವಾರವನ್ನು ॥ 2 ॥
ಧರೆಯ ಜನರನು ತರಿದು ಧರ್ಮವ।ತೊರೆವ ದುಷ್ಪರಿಗಂತಕನು ಪರಿ।
ಚರರು ಮೈದೋರುವರು ನೀನಿದ। ನರಿಯೊ ದುರುಳ ॥ 3 ॥
ಆದೊಡೀಕ್ಷಣ ಕಾಣಬಹುದೆಂ। ದಾದುರುಳನೈತಂದು ಗದೆಯಿಂ।
ಮೋದಿದೊಡೆ ಭೀಕರನು ತಡೆದನು। ಬಾಧೆ ಪಡದೆ ॥ 4 ॥

ರಾಗ ಶಂಕರಾಭರಣ - ಮಟ್ಟೆ ತಾಳ

ಗದೆಯನೊಡನೆ ಘೋರರೂಪ। ನಧಿಕ ಸತ್ತ್ವದಿಂದ ಸೆಳೆಯು।
ತುದಧಿಯೆಡೆಗೆ ಬಿಸುಡಲಸುರ। ನೊದರಿ ತುಳಿದನು ॥ 1 ॥
ತುಳಿದ ಕಾಲುಗಳನು ಪಿಡಿದು। ಕೊಳುಗುಳದೊಳು ಘೋರರೂಪ।
ನಿಳೆಗೆ ಬಡಿದು ಖಳನ ಯಮನ। ನಿಳಯಕಟ್ಟಿದ ॥ 2 ॥

(ಸುರಪದ್ಮನ ವಧೆ)

ವಾರ್ಧಕ ಷಟ್ಪದಿ

ಸುರಪದ್ಮನಿಂತು ಜೈಮಿನಿಯೆಡೆಗೆ ತೆರಳಲ್ಕೆ।
ದುರುಳರೊಟ್ಟೈಸಿ ಬಂದಾ ರೌದ್ರರೂಪನಂ।
ಭರದಿಂದ ಮುತ್ತಲವರೆಲ್ಲರಂ ಕಡಿಕಡಿದು ಭೂತ ಭೇತಾಳ ಗಣಕೆ॥
ಕರೆಕರೆದು ಬಲಿಯಿತ್ತು ನಿರ್ನಾಮವೆಸಗುತ್ತೆ।
ಧರೆಯ ಭಾರವನಿಳುಹಿ ಬಳಿಕ ಮುನಿಪತಿಯ ಪದ।
ಕೆರಗಿ ಬೆಸನೇನೆನಲ್ಕಾತನಂ ಪರಸುತ್ತೆ ಕುಂಬೋದ್ಭವಂ ನುಡಿದನು॥

(ಅಗಸ್ತ್ಯರಿಂದ ಪ್ರಶಂಸೆ)

ರಾಗ ನವರೋಜು - ಏಕ ತಾಳ

ಸಂತಸವಾಂತೆನು ಮಗನೆ। ಗುಣ । ವಂತನೆ ಬಾ ಚೆನ್ನಿಗನೆ॥
ಹಂತಕರೆನಿಸಿದ। ನಂತ ಖಳರ ನೀ। ನಂತರಿಸದೆ ಯಮ।
ನಂತೆಯೆ ತರಿದಿಹೆ ॥ 1 ॥
ಅದರಿಂದೀ ದಿನ ಮೆರೆವ। ಭೂ । ಸುದತಿಯ ದುರ್ಗತಿ ಪರಿವ॥
ಸುದಿನವು ಬಂದಿಂ। ತೊದಗಿತು ಭೂಸುರ। ರಧಿಕಾನಂದವ।
ಪದುಳದೆ ಪಡೆದರು ॥ 2 ॥
ಆದುದರಿಂದಲೆ ನಿನ್ನ। ನಾ । ನಾದರಿಸುತ್ತಿಹೆ ಮುನ್ನ॥
ಮೇದಿನಿಯೊಳು ಕ್ರ। ವ್ಯಾಧರ ತರಿಯುವ। ಸಾಧನೆಯಿಂದಿರು।
ಬಾ ಧರ್ಮಾತ್ಮನೆ ॥ 3 ॥

ಭಾಮಿನೀ ಷಟ್ಪದಿ

ನಂದನಂಗೀ ತೆರದೊಳಭಯವ। ನಂದದಿಂದಿತ್ತೊಡನೆ ಮಾಯಕ।
ದಿಂದವನು ತನ್ನೊಡನೆ ಬರ್ಪಂತಾಜ್ಞೆಯನು ವಿಧಿಸಿ॥

ಚಂದದಿಂ ನಿಜ ನಿಳಯಕವನೈ। ತಂದು ಸತಿಸುತ ಸಹಿತ ತಾಪಸ।
ವೃಂದಿಂದೊಡಗೂಡಿ ತಪವೆಸಗಿದನು ಕುಂಭಜನು॥

ಶ್ರೀರಾಮ ದರ್ಶನ

(ಶ್ರೀರಾಮ, ಲಕ್ಷ್ಮಣ ಸೀತೆಯರು ಅಡವಿಯಲ್ಲಿ)

ರಾಗ ಭೈರವಿ – ಝಂಪೆ ತಾಳ

ತಂದೆಯಪ್ಪಣೆಯನ್ನು ಚಂದದಿಂ ಪಾಲಿಸಲು।
ಬಂದನಾ ರಾಘವನು ಸತಿಸಹೋದರರ॥
ಮುಂದಾಗಿ ವನಕೆ ಕರೆತಂದು ತಾಪಸರ ತೆರ।
ದಿಂದಲೀರೇಳು ವರ್ಷವ ಕಳೆಯಲೆನುತೆ ॥ 1 ॥
ವನವನವ ಸುತ್ತುತ್ತಲನಸೂಯೆಯತ್ರಿಯರ।
ಮನೆಯ ಪೊಕ್ಕಲ್ಲಿಂದ ವರವಿರಾಧನನು॥
ಕಿನಿಸಿನಿಂ ನೆರೆತರಿದು ಮುನಿಪ ಶರಭಂಗನನು।
ಮನದೊಲವಿನಿಂ ಮನ್ನಿಸುತ್ತೆ ಮುಂದರಿದು ॥ 2 ॥
ಬರುತೆ ಬಹು ಮುನಿಗಳಿಂ ಪರಮ ಸತ್ಕಾರವನು।
ಪಿರಿದಾಗಿ ಕೈಗೊಡು ವನನಿವಾಸಿಗಳ॥
ಕರುಣದಿಂ ಕಾಣುತ್ತೆ ಭರಿತ ಸಂತೋಷದಿಂ।
ತೆರಳೆ ಕಾಣಿಸಿತು ಘಟಭವನ ದಳಭವನ ॥ 3 ॥
ಒಡನೆ ರಾಘವನು ಮುನಿಯೊಡೆಯನನು ಕಾಣಲಾ।
ಬಿಡದಿಯೆಡೆಗನುಜ ಸತಿ ಸಹಿತ ನಡೆತರಲು॥
ತಡೆಯದಾ ಕಲಶಜನು ಮಡದಿಯೊಡನೈತಂದು।
ಜಡಜನಾಭನ ಪಾದಕೆರಗಿ ಮನ್ನಿಸಿದ ॥ 4 ॥

(ಅಗಸ್ತ್ಯಾಶ್ರಮಕ್ಕೆ ಬಂದ ರಾಮನಿಗೆ ಸ್ವಾಗತ)

ರಾಗ ಮಧುಮಾಧವಿ – ತ್ರಿವುಡೆ ತಾಳ

ಕರೆದು ತಂದಾ ತರಣಿ ಕುಲಜರ। ಚರಣಕಮಲವ ತೊಳೆದು ತೀರ್ಥವ।
ಶಿರದೊಳುರೆ ಧರಿಸುತ್ತೆ ಪೂಜೆಯ। ಭರದೊಳೆಸಗಿದನಾಕ್ಷಣ ॥ 1 ॥
ಬಳಿಕ ಮಂಗಳದಾರತಿಯನುರೆ। ಬೆಳಗುತತಿ ಭಕ್ತಿಯಲಿ ತನ್ನಯ।
ದಳಭವನದೊಳು ಮುನಿಪತಿಯು ಶ್ರೀ। ನಲಿನನಾಭನ ಭಜಿಸಿದ ॥ 2 ॥

ಅಂದು ವಿಧವಿಧದಿಂದ ಮನ್ನಿಸು। ತೆಂದನಾ ರಾಘವನೊಳೆಲೆ ಗುಣ।
ಸಿಂಧು ನೀನ್ನೈತಂದ ಕಾರಣ। ವಿಂದು ಧನ್ಯರು ನಾವಲ್ಲೈ ॥ 3 ॥
ದುರುಳರನು ಸಂಹರಿಸಿ ಧರಣಿಯ। ಪೊರೆವ ಶ್ರೀಹರಿ ನೀನು ದುರಿತವ।
ಪರಿಹರಿಸಿ ಪಾಲಿಪುದು ಮುಕ್ತಿಯ। ಕರುಣಿಸುತಲೆಂದೆರಗಿದ ॥ 4 ॥

(ಶಸ್ತ್ರಾಸ್ತ್ರ ಪ್ರದಾನ)
ವಾರ್ಧಕ ಷಟ್ಪದಿ

ಮುನಿಪತಿಯು ಬಳಿಕ ರಘುಪತಿಗೆ ವಜ್ರಾವರ್ತ।
ಧನುವನಕ್ಷಯ ನಿಷಂಗವನಧಿಕ ಶರಗಳನು।
ಕನಕಮಯ ದುರ್ಭೇದ್ಯ ಕವಚ ಶೀರ್ಷಕ ಬಾಹುರಕ್ಷೆಗಳನೊಲಿದೀಯುತೆ॥
ವಿನುತ ಭಾಸ್ಕರ ಮಂತ್ರದುಪದೇಶಮಂ ಗೈದು।
ದನುಜರಂ ಬಿಡದೆ ಶಿಕ್ಷಿಪುದೆಂದು ಬಿನ್ನವಿಸು।
ತನುನಯದೊಳ್ಳೈದೆ ತನ್ನಾಶ್ರಮದೊಳವರನುಪಚರಿಸಿದಂ ಸಂತಸದೊಳು॥

ಭಾಮಿನೀ ಷಟ್ಪದಿ

ಒಂದು ತಿಂಗಳವರೆಗೆ ದಶರಥ। ನಂದನರ ಸತ್ಕರಿಸುತತ್ಯಾ।
ನಂದದಿಂ ಕುಂಭಜನು ಸತಿಸುತ ಸಹಿತಲಿರುತಿರ್ದ॥
ಮುಂದವರ ಕಳುಹುತ್ತೆ ತಾಪಸ। ವೃಂದದಿಂದೊಡಗೂಡಿ ತಪವನು।
ಚಂದದಿಂದೆಸಗುತ್ತೆ ತಾನತಿ ಧನ್ಯನೆನಿಸಿದನು॥

ಮಂಗಲ
ರಾಗ ಮೋಹನ – ಆದಿತಾಳ

ಮಂಗಲಂ ಜಯ ಮಂಗಲಂ ॥ ಪ ॥
ಮಂಗಲ ಜಯಜಯ ಶ್ರೀವರಗೆ। ಜಯ । ಮಂಗಲ ಸನ್ನುತ ಯದುವರಗೆ॥
ಮಂಗಲ ಸುರನುತ ರಘುವರಗೆ। ಶುಭ । ಮಂಗಲ ಗುಣಯುತ ಭೂವರಗೆ ॥ 1 ॥
ಮಂಗಲ ದುಷ್ಟ ವಿನಾಷನಿಗೆ। ಜಯ । ಮಂಗಲ ಶಿಷ್ಟ ಸುಪೋಷನಿಗೆ॥
ಮಂಗಲಮಯ ಸಂತೋಷನಿಗೆ। ಶುಭ । ಮಂಗಲ ಚರಿತ ವಿಶೇಷನಿಗೆ ॥ 2 ॥
ಮಂಗಲ ಭಕ್ತಾನಂದನಿಗೆ। ಜಯ । ಮಂಗಲ ವಿಜಯ ಮುಕುಂದನಿಗೆ॥
ಮಂಗಲ ಸದ್ಗುಣ ವೃಂದನಿಗೆ। ಶುಭ । ಮಂಗಲ ವರಗೋವಿಂದನಿಗೆ ॥ 3 ॥

~~***~~

ಕಥೆಯಲ್ಲಿ ಬರುವ ಪಾತ್ರಗಳು

1. ದೇವೇಂದ್ರ
2. ಅಗ್ನಿ
3. ವಾಯು
4. ಇಲ್ವಲಾಸುರ
5. ವಾತಾಪಿ
6. ಬ್ರಾಹ್ಮಣರು
7. ಬ್ರಾಹ್ಮಣ ಸ್ತ್ರೀಯರು
8. ಮಿತ್ರಾವರುಣ ಮುನಿ
9. ಬಾಲಕ ವಸಿಷ್ಠ
10. ಬಾಲಕ ಅಗಸ್ತ್ಯ
11. ಕಾಶ್ಯಪ ಮುನಿ
12. ಊರ್ವಶಿ
13. ದಾಸಿಯರು (ನೀರಾಟದವರು)
14. ಹಿಮವಂತ
15. ಅಗಸ್ತ್ಯ
16. ಶಿವದೂತ
17. ಶಿವ
18. ಲೋಪಾಮುದ್ರೆ
19. ಇಂದ್ರದ್ಯುಮ್ನ
20. ದೂತ
21. ಶಬರವರ್ಮ
22. ಕಿರಾತರು
23. ಗಜರಾಜ
24. ನಕ್ರರಾಜ
25. ವಿಂಧ್ಯೇಶ್ವರ
26. ಸೂರ್ಯ
27. ಬ್ರಹ್ಮ
28. ನಹುಷ
29. ಮಾತಲಿ
30. ಇಂದ್ರಮಂತ್ರಿ
31. ನಾರದ
32. ಸಪ್ತರ್ಷಿಗಳು
33. ಬೃಹಸ್ಪತಿ
34. ಬ್ರಾಹ್ಮಣ ಇಲ್ವಲ
35. ಬ್ರಾಹ್ಮಣ ವಾತಾಪಿ
36. ಘೋರರೂಪಿ
37. ಕವೇರ ಮುನಿ
38. ಕಾವೇರಿ
39. ಮುನಿವಟುಗಳು
40. ಸುರಪದ್ಮಾಸುರ
41. ಗಣಪತಿ
42. ರಾಮ
43. ಲಕ್ಷ್ಮಣ
44. ಸೀತೆ

ಕಥಾ ಸಾರ

ದಾನವ ಪಲಾಯನ: ಮರೀಚಿ ಮುನಿಯು ಬ್ರಹ್ಮ ಮಾನಸ ಪುತ್ರ, ಅವನ ಮಗ ಕಶ್ಯಪ. ಅವನಿಗೆ ದಕ್ಷಸುತೆಯಾದ ದನುವಿನಲ್ಲಿ ವಿಪ್ರಚ್ಛೇತ್ತಿಯೆಂಬ ಮಗನು ಹುಟ್ಟುವನು. ಅವನಿಗೆ ಸಿಂಹಿಕೆ(ಹಿರಣ್ಯಾಕ್ಷ ಹಿರಣ್ಯಕಶಿಪರ ಸಹೋದರಿ)ಯನ್ನು ಮದುವೆಯಾಗಿ, ಆಕೆಯಲ್ಲಿ ಇಲ್ವಲ, ವಾತಾಪಿ, ಕಾಲನಾಭ, ಸ್ವರ್ಭಾನು, ನರಕ, ನಭ, ಖಸ್ರಮ, ವಕ್ತ್ರಯೋನಿ, ತ್ರ್ಯಂಶ, ಶಲ್ಯ, ನಮುಚಿಗಳೆಂಬ ಹನ್ನೊಂದು ಪುತ್ರರ ಜನನವಾಗುತ್ತದೆ.

ಹಿರಿಯನಾದ ಇಲ್ವಲನು ಕಾಲರಜನಿಯೆಂಬ ರಾಕ್ಷಸಿಯನ್ನು ಮದುವೆಯಾಗಿ ಮಣಿಮತೀ ಪುರದಲ್ಲಿ ದಶಸಹೋದರರಿಂದೊಡಗೂಡಿ ರಾಜ್ಯಭಾರ ಮಾಡುತ್ತಿದ್ದನು. ಅವನಿಗೆ ಹೇಗಾದರೂ ಸ್ವರ್ಗದ ಅಧಿಕಾರಿಯಾಗುವ ಆಸೆ. ದೇವೇಂದ್ರನಿಗೆ ತ್ರಿಮೂರ್ತಿಗಳ ಬೆಂಬಲವೂ, ಬ್ರಾಹ್ಮಣರ ಯಜ್ಞದ ಬಲವೂ ಇರುವುದರಿಂದ ದೇವತೆಗಳನ್ನು ಸೋಲಿಸಲು ತೊಡಕೆಂದು ಭಾವಿಸಿದ. ಆದುದರಿಂದ ಬ್ರಾಹ್ಮಣರನ್ನು ಪೀಡಿಸಿ, ಯಜ್ಞ ಯಾಗಾದಿಗಳನ್ನು ಹಾಳು ಮಾಡಲು ತನ್ನ ತಮ್ಮಂದಿರೊಂದಿಗೆ ಹೊರಟ. ಬ್ರಾಹ್ಮಣರ ಮೊರೆಯನ್ನಾಲಿಸಿ ಇಂದ್ರನು ಅಗ್ನಿ ವಾಯುಗಳನ್ನು ರಾಕ್ಷಸರ ಸಂಹಾರಕ್ಕೆ ಕಳುಹಿಸುವನು. ಯುದ್ಧದಲ್ಲಿ ಸೋತ ರಾಕ್ಷಸರು ಓಡಿಹೋಗಿ ಸಮುದ್ರದಲ್ಲಿ ಅಡಗುವರು. ಯುದ್ಧಧರ್ಮದ ಪ್ರಕಾರ ಅವರನ್ನು ಕೊಲ್ಲುವುದು ನ್ಯಾಯಸಮ್ಮತವಲ್ಲವೆಂದು ದೇವತೆಗಳು ಹಿಂತಿರುಗುವರು. ಇದರಿಂದ ಕ್ರುದ್ಧನಾದ ಇಂದ್ರನು ಭೂಮಿಯಲ್ಲಿ ಹುಟ್ಟಿಬರುವಂತೆ ಶಪಿಸುತ್ತಾನೆ. ದುಃಖಿತರಾದ ಅವರನ್ನು ಬಳಿಕ ಮನ್ನಿಸಿ ಭೂಲೋಕದ ಕಷ್ಟವನ್ನು ನಿವಾರಿಸುವ ಮಹಾಪುರುಷರಾಗಿ ಹುಟ್ಟಿಬಂದು ಹಲವು ಕಲ್ಯಾಣಕಾರಕ ಕೆಲಸಗಳನ್ನು ಗೈದು ಮರಳಿ ದೇವಲೋಕವನ್ನು ಸೇರುವಿರೆಂದು ಸಮಾಧಾನಪಡಿಸುತ್ತಾನೆ.

ಅಗಸ್ತ್ಯೋದ್ಭವ: ದೇವಸ್ತ್ರೀ ಊರ್ವಷಿಯು ಸಖಿಯರಿಂದೊಡಗೂಡಿ ಪಾಲ್ಗಡಲಲ್ಲಿ ಆಟಕ್ಕೆ ತೆರಳುವಳು. ವೈಕುಂಠದರ್ಶನಕ್ಕೆ ಹೋಗಿದ್ದ ಮಿತ್ರಾವರುಣ ಮಹಾಮುನಿಗಳು ಊರ್ವಷಿಯನ್ನು ನೋಡುತ್ತಾರೆ. ಆಕೆ ಅವರಿಗೆ ಮೊಡಮಟ್ಟಾಗ ವಿಚಲಿತ ಮನಸ್ಕರಾದ ಅವರ ವೀರ್ಯ ಸ್ಖಲನವಾಗುವುದನ್ನು ಗಮನಿಸಿ, ಅದು ವ್ಯರ್ಥವಾಗಕೂಡದೆಂದು ಆಕೆ ಅದನ್ನು ತನ್ನ ಬೊಗಸೆಯಿಂದ ಎರಡು ಬಾರಿ ಎತ್ತಿ

ತನ್ನ ಉದಕ ಕುಂಭದಲ್ಲಿರಿಸಿದಳು. ಅದನ್ನು ಜತನದಿಂದ ಕಾಪಾಡಬೇಕೆಂಬ ಅವ ಸೂಚನೆಯ ಮೇರೆಗೆ ಕಶ್ಯಪರ ಆಶ್ರಮದಲ್ಲಿ ಆ ಕುಂಭವನ್ನಿಟ್ಟು ಕಾಪಾಡುವಳು.

ಹೀಗೆ ಹುಟ್ಟಿದ ಮಕ್ಕಳಿಗೆ ಕಶ್ಯಪರು ವಸಿಷ್ಠ, ಅಗಸ್ತ್ಯರೆಂದು ಹೆಸರಿಟ್ಟು ಸಕಲ ಸಂಸ್ಕಾರಗಳನ್ನು ನೆರವೇರಿಸುವರು. ಕುಶಾಗ್ರಮತಿಗಳಾದ ಮಕ್ಕಳು ವಿದ್ಯಾಭ್ಯಾಸಪಡೆದು, ವೇದವೇದಾಂಗ ಪಾರಂಗತರಾದರು. ಕಶ್ಯಪರ ನಿರ್ದೇಶನದಂತೆ ಅವರು ಘೋರ ತಪಸ್ಸನ್ನಾಚರಿಸಿ ಬ್ರಹ್ಮನನ್ನು ಮೆಚ್ಚಿಸುತ್ತಾರೆ. ಅವರನ್ನು ಬ್ರಹ್ಮರ್ಷಿಗಳನ್ನಾಗಿ ಮಾಡಿ ನಿಗ್ರಹಾನುಗ್ರಹ ಶಕ್ತಿಯನ್ನು ಬ್ರಹ್ಮ ನೀಡುತ್ತಾನೆ. ಆಮೇಲೆ ವಸಿಷ್ಠರು ವಸಿಷ್ಠಾಶ್ರಮವನ್ನು ಸ್ಥಾಪಿಸಿ, ನಾರದರ ಸಹೋದರಿ ಅರುಂಧತಿಯನ್ನು ಮದುವೆಯಾಗಿ, ಮಹಾಮಹಿಮರಾದ ಶಕ್ತಿಮುನಿಯನ್ನು ಪಡೆದು, ಸೂರ್ಯವಂಶದ ಅರಸರಿಗೆ ಕುಲಗುರುಗಳಾದರು.

ಅಗಸ್ತ್ಯರು ಬ್ರಹ್ಮರ್ಷಿಗಳಾಗಿ ಅಗಸ್ತ್ಯಾಶ್ರಮವನ್ನು ಸ್ಥಾಪಿಸಿ, ವಿದರ್ಭ ರಾಜಕುಮಾರಿಯಾದ ಲೋಪಾಮುದ್ರೆಯನ್ನು ಮದುವೆಯಾಗಿ, ದೃಢಾಸ್ಯನೆಂಬ ಮಗನನ್ನುಪಡೆದರು. ಅವನು ತನ್ನ ತಾಯಿಯ ಗರ್ಭದಲ್ಲಿ ಏಳು ವರ್ಷವಿದ್ದು ಜನಿಸಿದನು. ಪೂರ್ವಸಂಸ್ಕಾರ ಬಲದಿಂದ ಗುರುವಿಲ್ಲದೆಯೇ ವೇದ ವೇದಾಂಗ ಪಾರಂಗತನಾದನು. ಅವನು ಸಾವಿರ ಮಂದಿ ಹೊತ್ತುತರುವಷ್ಟು ಇಧ್ಮ(ಕಟ್ಟಿಗೆ)ವನ್ನು ತರುತ್ತಿದ್ದುದರಿಂದ ಅಗಸ್ತ್ಯರು ಅವನನ್ನು ಇಧ್ಮವಾಹ ಎಂದು ಕರೆಯುತ್ತಿದ್ದರು.

ಉಮಾಮಹೇಶ್ವರ ವಿವಾಹ: ಒಂದು ದಿನ ಶಿವದೂತರ ಕರೆಯ ಮೇರೆಗೆ ಶಿವನ ಮದುವೆಗೆ ಹೋಗುತ್ತಾರೆ. ಶಿವನ ವಿವಾಹವನ್ನು ನೋಡುವ ಬಯಕೆಯನ್ನು ಲೋಪಾಮುದ್ರೆ ವ್ಯಕ್ತಪಡಿಸುತ್ತಾಳೆ. ಆದರೆ ಆಕೆ ಹೋದರೆ ಆಶ್ರಮದ ವ್ಯವಸ್ಥೆಗೆ ತೊಡಕಾಗುವುದೆಂದು, ಆಕೆಗೆ ಶಿವನ ವಿವಾಹವನ್ನು ನೋಡಲು ದಿವ್ಯದೃಷ್ಟಿಯನ್ನಿತ್ತು ತೆರಳುತ್ತಾರೆ. ಓಷಧಿಪ್ರಸ್ಥ ಪುರದಲ್ಲಿ ನಡೆಯುವ ಶಿವನ ಮದುವೆಗೆ ಜನ ಕಿಕ್ಕಿರಿದು ಸೇರಿದ್ದರು. ಇದರಿಂದಾಗಿ ಭೂಮಿಯ ಸಮತೋಲನ ತಪ್ಪಿ ಭೂಮಿ ನಡುಗತೊಡಗಿತು. ಭೂಕಂಪವೆಂದು ಜನ ಹೆದರಿದರು. ಹಿಮವಂತನು ಭೀತನಾಗಿ ಶಿವನಲ್ಲಿ ಹೇಳಿದಾಗ, ಅಗಸ್ತ್ಯನನ್ನು ಕರೆದು ಕನ್ಯಾಕುಮಾರಿಗೆ ಹೋಗುವಂತೆ ಹೇಳಿದನು. ಅಗಸ್ತ್ಯನು ಅಲ್ಲಿಗೆ ಹೋಗುವುದರಿಂದ ಭೂಭಾರವು ಸಮತೋಲನಗೊಂಡು ಕಂಪನ ನಿಲ್ಲುವುದೆಂದು ಶಿವನಿಗೆ ತಿಳಿದಿತ್ತು. ವಿವಾಹವನ್ನು ಕಾಣುವ ಬಯಕೆ ಅಗಸ್ತ್ಯರಿಗಿದ್ದುದರಿಂದ ಅದನ್ನು ಕಾಣುವ ದಿವ್ಯದೃಷ್ಟಿಯನ್ನು ಅವರಿಗಿತ್ತು ಕಳುಹಿಸಿದ.

ಇಂದ್ರದ್ಯುಮ್ನೋಪಾಖ್ಯಾನ: ಅಗಸ್ತ್ಯರು ಹಲವು ತೀರ್ಥಕ್ಷೇತ್ರಗಳನ್ನು ಸಂದರ್ಶಿಸುತ್ತಾ ಪಾಂಡ್ಯ ದೇಶಕ್ಕೆ ಬಂದರು. ಅಲ್ಲಿ ಹರಿ ಭಕ್ತನಾಗಿದ್ದ ಇಂದ್ರದ್ಯುಮ್ನನೆಂಬ ರಾಜನು ಆಳುತ್ತಿದ್ದನು. ಅವನಂತೆಯೇ ಅವನ ಪ್ರಜೆಗಳೂ ವಿಷ್ಣು ಭಕ್ತರೂ, ಸಜ್ಜನರೂ ಆಗಿದ್ದರು. ಅಗಸ್ತ್ಯರು ಬರುವಾಗ ರಾಜನು ಪೂಜಾ ನಿರತನಾಗಿದ್ದನು. ತನ್ನನ್ನು ರಾಜನು ಸತ್ಕರಿಸಲಿಲ್ಲವೆಂದು ಕೋಪಿಸಿ ಅಗಸ್ತ್ಯರು ಬಾಗಿಲ ಭಟನನ್ನು ಜರೆದು ರಾಜನಿಗೆ ಮದಗಜವಾಗುವಂತೆ ಶಪಿಸಿದರು. ರಾಜನು ಕ್ಷಮೆಯನ್ನು ಕೇಳಿದಾಗ ಗಜವಾದರೂ ಮಾನವನಂತೆ ಮಾತನಾಡುವ ಶಕ್ತಿ ಒದಗುವುದೆಂದೂ, ಸುದರ್ಶನದ ದರ್ಶನದಿಂದ ಮೋಕ್ಷ ದೊರೆಯುವುದೆಂದೂ ಹರಸಿದರು.

ಇಂದ್ರದ್ಯುಮ್ನನು ವಿಂಧ್ಯಾಟವಿಯಲ್ಲಿ ಆನೆಯಾಗಿ ಹುಟ್ಟಿದನು. ತನ್ನ ಬಳಗದವರನ್ನು ಕೂಡಿಕೊಂಡು ಕಾಡಿನಲ್ಲೆಲ್ಲಾ ಸಂಚರಿಸುತ್ತಾ, ಸಿಕ್ಕಿದವರಿಗೆ ಉಪಟಳವನ್ನು ಕೊಡುತ್ತಾ ಸಂಚರಿಸುತ್ತಿದ್ದನು. ಶಬರರ ದೂರನ್ನಾಲಿಸಿ ಬೇಟೆಗೆ ಬಂದ ಶಬರ ರಾಜ ಶಬರವರ್ಮನು ಆನೆಯಿಂದ ಅಸುನೀಗುತ್ತಾನೆ. ಗಜರಾಜನು ಆಯಾಸ ಪರಿಹಾರಕ್ಕಾಗಿ ನೀರಿಗಿಳಿದು ಜಲಕೇಳಿಯಲ್ಲಿ ತೊಡಗಿದಾಗ ಮೊಸಳೆಯೊಂದು ಕಾಲನ್ನು ಹಿಡಿಯುತ್ತದೆ. ಬಿಡಿಸಲಾರದೆ ಹರಿಗೆ ಮೊರೆಯಿಟ್ಟಾಗ ನಕ್ರನನ್ನು ಸುದರ್ಶನದಿಂದ ತರಿದು ಗಜರಾಜನನ್ನು ವಿಷ್ಣು ರಕ್ಷಿಸುತ್ತಾನೆ. ಇಂದ್ರದ್ಯುಮ್ನನಿಗೆ ಮೋಕ್ಷವಾಗುವುದು.

ವಿಂಧ್ಯ ಗರ್ವಾಪಹಾರ: ಶೈಲಪ್ರಸ್ಥಪುರದಲ್ಲಿ ಅಗಸ್ತ್ಯ ಶಿಷ್ಯನಾದ ವಿಂಧ್ಯನು ರಾಜ್ಯಭಾರ ಮಾಡುತ್ತಿದ್ದನು. ಸೂರ್ಯನು ಮೇರುಪರ್ವತಕ್ಕೆ ಸುತ್ತು ಬರುತ್ತಿದ್ದ. ತಾನು ಮೇರುವಿಗಿಂತ ಕಮ್ಮಿಯೇ? ತನಗೇಕೆ ಅವನು ಸುತ್ತುಬರಬಾರದು? ಎಂದು ಸೂರ್ಯನನ್ನು ಅಡ್ಡಗಟ್ಟುತ್ತಾನೆ. ಸೂರ್ಯನು ಬ್ರಹ್ಮನಲ್ಲಿ ದೂರಿದಾಗ, ಅಗಸ್ತ್ಯರ ಮೂಲಕ ಅವನ ಗರ್ವಾಪಹಾರ ಮಾಡಬೇಕೆಂದು ಬ್ರಹ್ಮ ಎಣಿಸುತ್ತಾನೆ. ಬ್ರಹ್ಮನ ಆದೇಶದಂತೆ ಅಗಸ್ತ್ಯರು ವಿಂಧ್ಯನಲ್ಲಿಗೆ ಹೋಗುತ್ತಾರೆ. ಅಪ್ಪಣೆಯೇನೆಂದು ವಿಂಧ್ಯ ಕೇಳಿ ತಲೆಬಾಗಿದಾಗ, ನಾನು ಹೇಳುವಲ್ಲಿಯವರೆಗೆ ಹೀಗೆಯೇ ನಿಂತಿರೆಂದು ಹೇಳಿ ಹೊರಟು ಹೋದರು. ವಿಂಧ್ಯನ ಬಾಗಿದ ತಲೆ ಹಾಗೆಯೇ ಇತ್ತು. ಸೂರ್ಯನ ಹಾದಿ ಸುಗಮವಾಯಿತು.

ನಹುಷ ಗರ್ವ ಭಂಗ: ಹಸ್ತಿನಾವತಿಯ ರಾಜ ನಹುಷ. ಶತಮುಖಗಳಿಂದ ದೇವಸಿಂಹಾಸನಕ್ಕೆ ಅವನು ಅರ್ಹನಾಗಿದ್ದನು. ವೃತ್ರಸಂಹಾರದಿಂದ ದೇವೇಂದ್ರನು

ದೋಷಿಯಾಗಿ ಸ್ವರ್ಗದಿಂದ ಎತ್ತಲೋ ಹೋಗಿದ್ದನು. ಆದುದರಿಂದ ದೇವಸಾರಥಿಯಾದ ಮಾತಲಿಯು ಬಂದು ನಹುಷನನ್ನು ಸ್ವರ್ಗವನ್ನೇರುವಂತೆ ಬಿನ್ನವಿಸುತ್ತಾನೆ. ನಹುಷನು ಸ್ವರ್ಗದ ಅಧಿಕಾರಿಯಾದೊಡನೆಯೇ ಸ್ವರ್ಗವನ್ನು ಆಮೂಲಾಗ್ರವಾಗಿ ತೋರಿಸುವಂತೆ ಮಂತ್ರಿಗೆ ಆಜ್ಞಾಪಿಸುತ್ತಾನೆ. ಎಲ್ಲವನ್ನೂ ನೋಡುತ್ತಾ, ಶಚೀದೇವಿಯ ಮನೆಯ ಮುಂದೆ ಬರುತ್ತಾನೆ. ಶಚಿಯನ್ನು ಕಂಡು ಮೋಹಿತನಾಗಿ ಅವಳನ್ನು ಬಯಸುತ್ತಾನೆ. ಮಂತ್ರಿಯ ಮೂಲಕ ವಿಷಯವನ್ನು ತಿಳಿದ ಶಚಿ ದುಃಖಿಸುತ್ತಾಳೆ. ನಾರದರು ಬಂದು ಆಕೆಯ ಕಷ್ಟಪರಿಹಾರಕ್ಕೆ ಒಂದು ಉಪಾಯವನ್ನು ಹೇಳುತ್ತಾರೆ. ಆತನ ಪಟ್ಟದ ರಾಣಿಯಾಗಲು ತನ್ನ ಒಪ್ಪಿಗೆಯಿದೆ. ಆದರೆ ಸಪ್ತರ್ಷಿಗಳು ಹೊರುವ ಅಂದಣದಲ್ಲಿ ಕುಳಿತುಕೊಂಡು ನಹುಷನು ಆಕೆಯ ಅರಮನೆಗೆ ಬರಬೇಕೆಂದು ಹೇಳಿ ಕಳುಹಿಸುತ್ತಾಳೆ. ನಹುಷನ ಆಣತಿಯಂತೆ ಸಪ್ತರ್ಷಿಗಳು ಅಂದಣವನ್ನು ಹೊತ್ತುಕೊಂಡು ಸಾಗುತ್ತಾರೆ. ಕುಳ್ಳಗಿದ್ದ ಅಗಸ್ತ್ಯರು ನಿಧಾನವಾಗಿ ಸಾಗುತ್ತಿದ್ದಾಗ ಅಸಮಾಧಾನದಿಂದ ಪಲ್ಲಕಿಯೊಳಗಿದ್ದ ನಹುಷನು "ಸರ್ಪ ಸರ್ಪ"(ಬೇಗ ಬೇಗ) ಎಂದು ಗದರಿಸಿದನು. ಕುಪಿತರಾದ ಅಗಸ್ತ್ಯರು "ನೀನು ಸರ್ಪವಾಗು" ಎಂದು ಶಪಿಸಿದರು. ಪಶ್ಚಾತ್ತಾಪದಿಂದ ಕಾಲಿಗೆರಗಿದಾಗ ಕರುಣೆದೋರಿ "ನಿನ್ನ ವಂಶದವನೇ ಆದ ಧರ್ಮರಾಯನಿಂದ ಧರ್ಮ ರಹಸ್ಯವನ್ನರಿತಾಗ ನಿನ್ನ ಶಾಪವಿಮೋಚನೆಯಾಗುವುದು" ಎಂದು ಅಭಯವನ್ನಿತ್ತರು.

ಇಲ್ವಲಾಸುರಸಂಹಾರ: ಗೋದಾವರೀ ತೀರದಲ್ಲಿ ಇಲ್ವಲಾಸುರನು ಕಪಟ ವಿಪ್ರ ವೇಷವನ್ನು ಧರಿಸಿ ತನ್ನ ತಮ್ಮಂದಿರೊಂದಿಗೆ ವಾಸಿಸುತ್ತಿದ್ದನು. ನೆರೆಹೊರೆಯ ಬ್ರಾಹ್ಮಣರನ್ನು ಪಿತೃಶ್ರಾದ್ಧಕ್ಕೆ ಬರಬೇಕೆಂದು ಕರೆದು, ತಮ್ಮ ವಾತಾಪಿಯನ್ನು ಆಹಾರವಾಗಿ ಪರಿವರ್ತಿಸಿ ಅವರಿಗೆ ಉಣಬಡಿಸುತ್ತಿದ್ದ. ಭೋಜನದ ಬಳಿಕ ಇಲ್ವಲನು "ವಾತಾಪಿ ಬಾ"" ಎಂದು ಕರೆಯುತ್ತಿದ್ದನು. ಆಗ ವಾತಾಪಿಯು ಅವರ ಹೊಟ್ಟೆಯನ್ನು ಸೀಳಿ ಹೊರ ಬರುತ್ತಿದ್ದ. ಹೀಗೆ ನೂರಾರು ಬ್ರಾಹ್ಮಣರು ಸಾವನ್ನಪ್ಪಿದರು.

ಒಂದು ದಿನ ಆದಾರಿಯಾಗಿ ಬಂದ ಅಗಸ್ತ್ಯರನ್ನು ಕಂಡ ಇಲ್ವಲನು ಪಿತೃಶ್ರಾದ್ಧವನ್ನು ನೆರವೇರಿಸಿಕೊಡಬೇಕೆಂದು ಅವರಲ್ಲಿ ನಿವೇದಿಸಿದ. ಸತ್ಯವೆಂದು ಬಗೆದು ಮಹರ್ಷಿಗಳು ಕ್ರಿಯಾಭಾಗಗಳನ್ನು ಪೂರೈಸಿ ಭೋಜನವನ್ನು ಕೈಗೊಂಡರು. ಬಳಿಕ ಇಲ್ವಲನು ಎಂದಿನಂತೆ ಕರೆದನು. ಮುನಿಗಳ ಹೊಟ್ಟೆಯಲ್ಲಿ ಅವನು ಗುಡುಗುಡಿಸತೊಡಗಿದಾಗ ಅವರಿಗೆ ನಿಜದ ಅರಿವಾಯಿತು. ಒಡನೆಯೇ ಮುನಿಗಳು ಹೆಟ್ಟೆಯನ್ನು ಸವರುತ್ತಾ "ವಾತಾಪಿ ಜೀರ್ಣೋಭವ" ಎಂದರು. ವಾತಾಪಿಯನ್ನು

ಅಗಸ್ತ್ಯರು ಕೊಂದರೆಂದು ತಿಳಿದಾಗ ಇಲ್ವಲನು ಸಿಟ್ಟಿನಿಂದ ಅವರನ್ನು ಕೊಲ್ಲಲು ಬರುತ್ತಾನೆ. ಅವರು ನೆಲವನ್ನೊದೆಯಲು ಅವರ ತಪಃಶಕ್ತಿಯಿಂದ ಘೋರರೂಪಿಯು ಹುಟ್ಟಿಬರುತ್ತಾನೆ. ಅವನು ರಾಕ್ಷಸರನ್ನು ಕೊಲ್ಲತೊಡಗಿದಾಗ ಇಲ್ವಲನೂ ಅವನ ತಮ್ಮಂದಿರೂ ಓಡಿಹೋಗಿ ಸಮುದ್ರದಲ್ಲಿ ಅಡಗಿಕೊಳ್ಳುತ್ತಾರೆ. ಕೂಡಲೇ ಅಗಸ್ತ್ಯರು ಸಮುದ್ರದ ನಿರನ್ನೆಲ್ಲಾ ಕುಡಿದು ದಾನವರನ್ನು ಹೊರಬರಿಸಿದಾಗ ಘೋರರೂಪಿಯು ಅವರನ್ನೆಲ್ಲಾ ಸಂಹರಿಸಿದನು. ಬಳಿಕ ತನ್ನ ಕಮಂಡಲೋದಕದಿಂದ ಸಮುದ್ರವನ್ನು ತುಂಬಿಸಿದರು. ಆಮೇಲೆ ತನ್ನೊಂದಿಗೆ ಯಾವಾಗಲೂ ಅದೃಶ್ಯರೂಪದಿಂದ ಇರುವಂತೆ ಅವನಿಗೆ ಆದೇಶಿಸಿ, ದೇಶಾಟನೆಯ ಕಾರ್ಯವನ್ನು ಮುಂದುವರಿಸಿದರು.

ಕಾವೇರೀ ಮಾಹಾತ್ಮ್ಯ: ದೇಶಾಟನೆಯಲ್ಲಿದ್ದ ಅಗಸ್ತ್ಯರು ಒಂದು ದಿನ ಸಹ್ಯಾದ್ರಿಯ ಸಾನುವಿನ ಬ್ರಹ್ಮಗಿರಿಗೆ ಬರುತ್ತಾರೆ. ಅಲ್ಲಿ ಕವೇರನೆಂಬ ರಾಜರ್ಷಿಯು ತಪಸ್ಸು ಮಾಡುತ್ತಿದ್ದನು. ಅವನು ಶಿವನನ್ನುಮೆಚ್ಚಿಸಿ ಲೋಕಕಲ್ಯಾಣಾರ್ಥವಾಗಿ ಕುವರಿಯೊಬ್ಬಳನ್ನು ಪಡೆದು, ಆಕೆಗೆ ಕಾವೇರಿಯೆಂದು ಹೆಸರನ್ನಿಟ್ಟು ಸಲಹುತ್ತಿದ್ದನು. ಅಗಸ್ತ್ಯರು ಆದಾರಿಯಾಗಿ ಬಂದುದನ್ನು ಅರಿತ ಕವೇರನು ಅವರನ್ನು ತನ್ನ ತಪೋವನಕ್ಕೆ ಕರೆತರುತ್ತಾರೆ. ಮಗಳ ಒಪ್ಪಿಗೆಯನ್ನು ಪಡೆದು ಅವರಿಗೆ ಆಕೆಯನ್ನು ಕೊಟ್ಟು ವಿವಾಹವನ್ನು ನೆರವೇರಿಸುತ್ತಾರೆ. ಅನಂತರ ಅಗಸ್ತ್ಯರು ಬ್ರಹ್ಮಗಿರಿಯಲ್ಲೊಂದು ಆಶ್ರಮವನ್ನು ಸ್ಥಾಪಿಸಿ ಅಲ್ಲೇ ತಪಸ್ಸನ್ನಾಚರಿಸುತ್ತಾ ಇದ್ದರು. ಪಕ್ಕದಲ್ಲಿ ಹರಿಯುವ ಕನಕಾ ನದಿಗೆ ದಿನನಿತ್ಯ ಹೋಗಿ, ಮಿಂದು, ಪವಿತ್ರ ಜಲದೊಂದಿಗೆ ಹಿಂತಿರುಗುತ್ತಿದ್ದರು.

ಅಲ್ಲೇ ಸಮೀಪದಲ್ಲಿ ಪದ್ಮನಗರವೆಂಬ ಪಟ್ಟಣದಲ್ಲಿ ಸುರಪದ್ಮನೆಂಬ ರಾಕ್ಷಸನು ಆಳುತ್ತಿದ್ದನು. ಅವನು ಬ್ರಹ್ಮನನ್ನು ಮೆಚ್ಚಿಸಿ ಮಂತ್ರ ಮಾಯಗಳಿಂದ ಅತಿ ಬಲಿಷ್ಠನಾಗಿದ್ದನು. ಅವನು ತನ್ನ ಮಾಯದಿಂದ ಲೋಕಕ್ಕೆ ಮಳೆ ಬೆಳೆಗಳಾಗದಂತೆ ಮಾಡಿ ಸಂಕಷ್ಟವನ್ನು ತಂದೊಡ್ಡಿದನು. ಇದರಿಂದ ಸಂತ್ರಸ್ಥರಾದ ಸ್ತ್ರೀಯರು ಕಾವೇರಿಯಲ್ಲಿ ಈ ವಿಷಯವನ್ನು ನಿವೇದಿಸಿಕೊಳ್ಳುತ್ತಾರೆ. ಆಕೆ ತನ್ನ ಪತಿಯಲ್ಲಿ ಹೇಳಿ ಕಷ್ಟವನ್ನು ಪರಿಹರಿಸುವೆನೆಂದು ಅವರನ್ನು ಕಳುಹಿಸುತ್ತಾಳೆ. ಅಗಸ್ತ್ಯರಲ್ಲಿ ಆಕೆ ಹೇಳಿದಾಗ, ಕಾಲವು ಕೂಡಿಬಂದಾಗ ಅದು ಪರಿಹಾರವಾಗುವುದೆಂದು ಹಾರಿಕೆಯ ಉತ್ತರವನ್ನೀಯುತ್ತಾರೆ. ಇದರಿಂದ ಅಸಮಾಧಾನಗೊಂಡ ಆಕೆ ಮರುದಿನ ಅಗಸ್ತ್ಯರೊಂದಿಗೆ ಪ್ರಾಥಃಕಾಲ ನದಿಗೆ ನಿತ್ಯಾಹ್ನಿಕಗಳನ್ನು ತೀರಿಸಲು ಹೋಗುವುದಿಲ್ಲ. ಇದರಿಂದ ಕೋಪಗೊಂಡ ಅವರು ಅವಳನ್ನು ನೀರಾಗಿಸಿ ತನ್ನ ಕಮಂಡಲದಲ್ಲಿರಿಸಿ ನದಿಯೆಡೆಗೆ ಹೊರಟರು.

ಕಮಂಡಲವನ್ನು ದಡದಲ್ಲಿರಿಸಿ ನೀರಿಗಿಳಿದಾಗ, ದೇವತೆಗಳ ಕೋರಿಕೆಯಂತೆ, ಗಣಪತಿಯು ಹಂಸರೂಪದಲ್ಲಿ ಬಂದು, ಅದನ್ನುರುಳಿಸುತ್ತಾನೆ. ಕಾವೇರಿ ನದಿಯಾಗಿ ಹರಿಯುತ್ತಾಳೆ. ಮಿಂದು ಮೇಲೆದ್ದ ಮಹರ್ಷಿಗಳು ಇದನ್ನು ಕಂಡು ಕುಪಿತರಾಗಿ, ವಿಘ್ನೇಶನನ್ನು ಶಪಿಸಹೊರಟಾಗ ಅವನು ಪ್ರತ್ಯಕ್ಷನಾಗುತ್ತಾನೆ. ಲೋಕ ಕಲ್ಯಾಣಾರ್ಥವಾಗಿ ಥಾನು ಹೀಗೆ ಮಾಡಿದೆನೆಂದೂ, ಇದರಿಂದ ಕ್ಷಾಮ ಡಾಮರಗಳು ನೀಗಿ, ಕಾವೇರಿಯ ಜನ್ಮ ಸಾರ್ಥಕವಾಯಿತೆಂದೂ ಅವರನ್ನು ಸಮಾಧಾನಪಡಿಸುತ್ತಾನೆ. ಬಳಿಕ ಅಗಸ್ತ್ಯರು ಘೋರರೂಪಿಯನ್ನು ಕರೆದು ಸುರಪದ್ಮನನ್ನೂ, ಅವನ ಬಳಗವನ್ನೂ ಕೊಲ್ಲಿಸುತ್ತಾರೆ. ಆಮೇಲೆ ತನ್ನಾಶ್ರಮವನ್ನು ಸೇರಿ ತಪೋನಿರತರಾಗಿದ್ದರು.

ಶ್ರೀರಾಮ ದರ್ಶನ: ಕಾಲಾಂತರದಲ್ಲಿ ಪಿತೃವಾಕ್ಯ ಪರಿಪಾಲನಾರ್ಥವಾಗಿ ಕಾಡನ್ನು ಸೇರಿದ ರಾಮ, ಸೀತಾ ಲಕ್ಷ್ಮಣ ಸಮೇತನಾಗಿ ಅಗಸ್ತ್ಯರ ಆಶ್ರಮಕ್ಕೆ ಬರುತ್ತಾನೆ. ಅಗಸ್ತ್ಯರು ಪರಮ ಸಂತುಷ್ಟರಾಗಿ, ಅವರನ್ನು ಸತ್ಕರಿಸುತ್ತಾರೆ. ರಾಮನಿಗೆ ವಜ್ರಾವರ್ತ ಧನುಸ್ಸನ್ನು, ಅಕ್ಷಯ ತೂಣೀರವನ್ನೂ, ಹಲವಾರು ದಿವ್ಯ ಬಾಣಗಳನ್ನೂ, ದುರ್ಭೇಧ್ಯವಾದ ಕವಚ, ಬಾಹುರಕ್ಷೆಗಳನ್ನೂ ಕೊಟ್ಟು ಹರಸುತ್ತಾರೆ. ಅವರು ಅಲ್ಲಿ ಒಂದು ತಿಂಗಳ ವರೆಗೆ ಇದ್ದು ತಮ್ಮ ಪ್ರಯಾಣವನ್ನು ಮುಂದುವರಿಸುತ್ತಾರೆ. ಲೋಕಕ್ಕೆ ಮಂಗಲವಾಗುತ್ತದೆ.

~~**~~

ವಿದ್ವಾನ್ ಕೆ.ವಿ. ಗೋವಿಂದ ಭಟ್ಟ



ಕೆ.ವಿ. ಗೋವಿಂದ ಭಟ್ಟರು ಬಂಟ್ವಾಳ ತಾಲೂಕಿನ ವಿಟ್ಲ ಸಮೀಪದ ವಧ್ವ ಮೂಲದವರು. 27.06.1927 ರಂದು ಹುಟ್ಟಿದ ಇವರು ನೀರ್ಚಾಲು ಮಹಾಜನ ಸಂಸ್ಕೃತ ಕಾಲೇಜಿನಲ್ಲಿ ಕನ್ನಡ ವಿದ್ವಾನ್ ಪದವಿ ಪಡೆದರು. ಬಳಿಕ ಕಾಸರಗೋಡಿನ ಸರಕಾರಿ ಪ್ರೌಢಶಾಲೆಯಲ್ಲಿ ಉದ್ಯೋಗ ಆರಂಭಿಸಿದರು. ಯಕ್ಷಗಾನ ಅರ್ಥಧಾರಿಗಳಾಗಿ ಹಲವು ಸಂಘಗಳಲ್ಲಿ ಪಾಲ್ಗೊಂಡಿದ್ದಾರೆ. ಪುರಾಣ ಕಾವ್ಯವಾಚನದ ವ್ಯಾಖ್ಯಾನಕಾರರಾಗಿ ಕಲಾಪಗಳನ್ನು ನಡೆಸಿಕೊಟ್ಟಿದ್ದಾರೆ. ಅವರ ಯಕ್ಷಗಾನ ಪ್ರಸಂಗಗಳಾದ 'ಸಮಗ್ರ ವಾಲೀ ವಿಜಯಂ' ಮತ್ತು 'ಪಾಂಡವ ಸ್ವರ್ಗಾರೋಹಣ' ಪ್ರಕಟವಾಗಿದೆ. 'ಗೋವಿಂದ ಸೂಕ್ತಿಸಾರಂ' ಎಂಬುದು ಮುಕ್ತಕಗಳ ಸಂಕಲನಗಳ ಇನ್ನೊಂದು ಪ್ರಕಟಿತ ಕೃತಿ. 1995ನೇ ಜುಲೈ 25ರಂದು ನಿಧನರಾದ ಇವರು ಶಿಸ್ತಿನ ಜೀವನ, ಉದಾರ ಮನೋಭಾವ, ನಿಸ್ಪೃಹ ವ್ಯಕ್ತಿತ್ವ, ಸ್ವಚ್ಛ ನಡತೆ, ಸ್ನೇಹಪರ ವ್ಯವಹಾರಗಳಿಗೆ ಹೆಸರಾದವರು. ಪ್ರಸ್ತುತ ಕೃತಿಯು ಮಹಾಸಭೆಯ ಅಮೃತಮಹೋತ್ಸವ ಸಂದರ್ಭದಲ್ಲಿ ಲೋಕಾರ್ಪಣೆಗೊಂಡಿದೆ.

ಸ್ಥಾಪನೆ 1943

ಶ್ರೀ ಅಖಿಲ ಹವ್ಯಕ ಮಹಾಸಭಾ (ರಿ), ಬೆಂಗಳೂರು